
ಜೀತಪದ್ಧತಿ ಮತ್ತು ಜೀತದಾಳುಗಳನ್ನು
ಗುರುತಿಸುವ ಮಾರ್ಗದರ್ಶಿ

ತರಬೇತಿ ಕೈಪಿಡಿ



ಜೀತಪದ್ಧತಿ ಮತ್ತು ಜೀತದಾಳುಗಳನ್ನು ಗುರುತಿಸುವ ತರಬೇತಿ ಕೈಪಿಡಿ



ಜನ ಜಾಗೃತಿ ಪ್ರಕಾಶನ
ನಾಗರಭಾವಿ
ಬೆಂಗಳೂರು

ಜೀತಪದ್ಧತಿ ಮತ್ತು ಜೀತದಾಳುಗಳನ್ನು ಗುರುತಿಸುವ ತರಬೇತಿ ಕೈಪಿಡಿ

ಜೀತಪದ್ಧತಿ ಮತ್ತು
ಜೀತದಾಳುಗಳನ್ನು
ಗುರುತಿಸುವ ತರಬೇತಿ
ಕೈಪಿಡಿ

"ಜೀತ : ಆಧುನಿಕ ಕಾಲದ ಗುಲಾಮಿ ಪದ್ಧತಿ"
-ವಿಶ್ವಸಂಸ್ಥೆ

TRAINING MANUAL ON THE CONCEPT AND THE METHOD OF IDENTIFYING BONDED LABOUR, by Kiran Kamal Prasad, Published by Jana Jagrati Prakashana, Bangalore, Karnataka.

First Print-2008

Pages: 68

Price: Rs. 100/-

Cover Design: Dr. T.S. Vivekanand

Type set , Design and Printing: Indraprastha Prakashana

ISBN 978-81-906736-2-4

Published by:

Jana Jagrati Prakashana
No.1289/4, ISEC Road
Nagarabhavi Post
Bangalore-560 072

Funded by

HIVOS, Bangalore



"ಜೀತ
ಆಧುನಿಕ ಕಾಲದ
ಗುಲಾಮಿ ಪದ್ಧತಿ"
-ವಿಶ್ವಸಂಸ್ಥೆ

ಜೀತಪದ್ಧತಿ ಮತ್ತು ಜೀತದಾಳುಗಳನ್ನು ಗುರುತಿಸುವ ತರಬೇತಿ ಕೈಪಿಡಿ

ಮುನ್ನುಡಿ: ಡಾ. ಲಕ್ಷ್ಮೀಧರ್ ಮಿಶ್ರಾ

ಮುನ್ನುಡಿ

ಮಾನವ ಸಂಪನ್ಮೂಲ ಅಭಿವೃದ್ಧಿಗೆ ತರಬೇತಿಯು ಒಂದು ಪ್ರಮುಖ ಸಾಧನ. ವಿವಿಧ ಶಾಖೆಗಳ ಮಾನವ ಜ್ಞಾನದ ಪಡೆಯುವಿಕೆ, ರವಾನೆ ಮತ್ತು ಬಳಕೆಗೆ ಸಂಬಂಧ ಪಟ್ಟ ವೃತ್ತಿನಿರತ ವ್ಯಕ್ತಿಗಳ ನಿರಂತರ ಅಭಿವೃದ್ಧಿಗೆ ಅದು ಸಹಕಾರಿಯಾಗಿದೆ. ಅದರಿಂದ ಮಾಹಿತಿಯೂ ಸಿಗುತ್ತದೆ; ಕೌಶಲ್ಯಗಳೂ ಬೆಳೆಯುತ್ತವೆ. ಪಡೆಯಬೇಕಾದ ಮಾಹಿತಿಯು ಯಾವುದೇ ಕಾರ್ಯಾಚರಣೆಯ ಕುರಿತು ಅದು ಏಕೆ, ಅದು ಏನು ಮತ್ತು ಅದು ಹೇಗೆ ಎಂಬುದರ ಬಗ್ಗೆ ಸಂಬಂಧಿಸಿರಬಹುದು. ಮಾಹಿತಿ ಪಡೆಯಬೇಕಾದ ಕಾರ್ಯಾಚರಣೆಗಳಿಗೆ ಕೆಲವು ಉದಾಹರಣೆಗಳು ಎಂದರೆ: ಅಶಿಕ್ಷಿತರಿಗೆ ಕಾರ್ಯಾತ್ಮಕ ಶಿಕ್ಷಣ ಒದಗಿಸುವುದು, ಶಿಶುಮರಣದ ಪ್ರಮಾಣದಲ್ಲಿ ಕಡಿತಗೊಳಿಸುವುದು, ಭ್ರೂಣ ಹತ್ಯೆ ಹಾಗೂ ಹೆಣ್ಣು ಶಿಶುಗಳ ಹತ್ಯೆಗಳನ್ನು ನಿಷೇಧಿಸುವುದು, ಜೀತ ಮತ್ತು ಬಾಲಕಾರ್ಮಿಕತೆ, ಬಾಲ್ಯ ವಿವಾಹ, ವರದಕ್ಷಿಣೆಯ ನೆಪದಲ್ಲಿ ಆಗುವ 'ಸಾವು' ಇತ್ಯಾದಿ ತರಹದ ಹಲವಾರು ಸಾಮಾಜಿಕ ಪಿಡುಗುಗಳನ್ನು ತೊಡೆದುಹಾಕುವುದು. ಪಡೆಯಬೇಕಾದ ಕೌಶಲ್ಯಗಳು ವಿವಿಧ ಕ್ಷೇತ್ರಗಳು ಮತ್ತು ವಿವಿಧ ಜ್ಞಾನಶಾಖೆಗಳಿಗೆ ಅನ್ವಯಿಸುವಂತೆ ಇರಬಹುದು. ಅವು ಯಾವುವೆಂದರೆ: ಜೀವನ ಕೌಶಲ್ಯಗಳು; ಸಂವಹನ ಕೌಶಲ್ಯಗಳು; ದೃಷ್ಟಿಕೋನಗಳು ಮತ್ತು ವರ್ತನೆಗಳಿಗೆ ಸಂಬಂಧಪಟ್ಟ ಕೌಶಲ್ಯಗಳು; ಬದುಕುಳಿಯುವ ಕೌಶಲ್ಯಗಳು; ವೃತ್ತಿ ಕೌಶಲ್ಯಗಳು; ಬೌದ್ಧಿಕ, ಭಾವನಾತ್ಮಕ ಮತ್ತು ಮಾನಸಿಕ ಕೌಶಲ್ಯಗಳು. ಇಂತಹ ಕೌಶಲ್ಯಗಳು ಒಬ್ಬ ವ್ಯಕ್ತಿಯು ತನ್ನ ಜೀವನದ ಆಗು ಹೋಗುಗಳು, ಒತ್ತಡಗಳು, ಜಂಜಾಟಗಳು ಮತ್ತು ಸವಾಲುಗಳನ್ನು ದೃಢತೆ, ಧೈರ್ಯ ಮತ್ತು ಆತ್ಮ ಸ್ಥೈರ್ಯದಿಂದ ಎದುರಿಸಲು ನೆರವಾಗುವುವು.

ತರಬೇತಿಯನ್ನು ಕಲಿಕಾರ್ಥಿ ಕೇಂದ್ರಿತವಾಗಿ ನಡೆಸಿ ಕೊಟ್ಟರೆ ಅದು ಭಾಗವಹಿಸುವವರ ಸಂಶಯ, ಅಸ್ಪಷ್ಟತೆ ಮತ್ತು ಪೂರ್ವಾಗ್ರಹಗಳನ್ನು ನಿವಾರಿಸಬಹುದು ಮತ್ತು ವಿಷಯಗಳನ್ನು ಸರಿಯಾದ ಹಾಗೂ ಸಮಗ್ರ ಚೌಕಟ್ಟಿನಲ್ಲಿ ಗ್ರಹಿಸುವಂತೆ ಮಾಡುವುದು ಮಾತ್ರವಲ್ಲದೆ ವಿಚಾರಾತ್ಮಕ, ಜ್ಯಾತ್ಯಾತೀತ ಹಾಗೂ ವೈಜ್ಞಾನಿಕ ಮನೋಭಾವವನ್ನು ರೂಪಿಸುವುದು. ತರಬೇತಿದಾರರು ಮತ್ತು ತರಬೇತಿ ಪಡೆಯುವವರನ್ನೊಳಗೊಂಡಂತೆ ತರಬೇತಿಯಲ್ಲಿ ಭಾಗವಹಿಸುವವರೆಲ್ಲರೂ ಆಲೋಚನೆ ಮಾಡಲು, ಚಿಂತನೆ ಮಾಡಲು ಮತ್ತು ಕೆಲವು ನಿರ್ದಿಷ್ಟ ಘಟನೆಗಳ ಕಾರಣ ಹಾಗೂ ಪರಿಣಾಮಗಳ ಕುರಿತು ವಿವೇಚನಾತ್ಮಕವಾಗಿ ವಿಶ್ಲೇಷಿಸಿ ನ್ಯಾಯಯುತವಾದ, ಎಲ್ಲರಿಗೂ ಒಪ್ಪುವ ಹಾಗೂ ನೀತಿ ಸಮ್ಮತವಾದ ಅಥವಾ ಸಮನಾತ್ಮಕವಾದ ಕೆಲವು ತೀರ್ಮಾನಗಳಿಗೆ ಬರಲು ಅದು ಸಹಾಯಕವಾಗುವುದು.

ಜೀತಪದ್ಧತಿಯು ಒಂದು ಕೆಟ್ಟ ಹಾಗೂ ಮಾರಕ ಪದ್ಧತಿಯಾಗಿದೆ. ಅದನ್ನು ನಾಗರಿಕ ಸಮಾಜದ ಮಾನವ ಅಂತಃಕರಣ ಸಹಿಸದು; ಅದು ಪರಾಭಾರೆ ಮಾಡಲಾಗದಂತಹ ಮಾನವ ಹಕ್ಕುಗಳ ನಿರಾಕರಣೆ; ಅದು ಸ್ವಾಭಿಮಾನ, ಸಭ್ಯತೆ, ಸಮಾನತೆ ಮತ್ತು ಸ್ವಾತಂತ್ರ್ಯಗಳ ವಿರೋಧ ರೂಪ; ಹಾಗೂ ಕೆಲಸದ ಸಂದರ್ಭದಲ್ಲಿ ಅದು ನ್ಯಾಯಯುತ, ಎಲ್ಲರಿಗೂ ಒಪ್ಪುವ ಹಾಗೂ ನೀತಿ ಸಮ್ಮತ ಅಥವಾ ಸಮಾನಾತ್ಮಕ ತತ್ವಗಳ ನಿರಾಕರಣೆ. ಜಾತಿ ಪದ್ಧತಿ ಹಾಗೂ ಅಸಮಾನ ಊಳಿಗಮಾನ್ಯ ಸಾಮಾಜಿಕ ವ್ಯವಸ್ಥೆಯಿಂದ ಭಾಗಶ: ಬೆಂಬಲ ಪಡೆದು ಅದು ಮಾನವನ ಅತಿ ಲೋಭತನ, ಕ್ರೂರತೆ, ಕಬಳಿಕೆಯ ಪ್ರವೃತಿಗಳಿಂದ ಮತ್ತು ಪ್ರತಿಯೊಬ್ಬರಲ್ಲಿಯೂ ಅಂತರ್ಗತವಾಗಿರುವ ಇನ್ನೊಬ್ಬನ ಮೇಲೆ ಅಧಿಕಾರ ಚಲಾಯಿಸುವ, ಅವನ ಪೂರ್ತಿ ಶೋಷಣೆ ಮಾಡುವ ಮತ್ತು ಅವನಿಗೆ ಹಾನಿ ಮಾಡಿ ತಾನೇ ಹಸನಾಗಿ ಬೆಳೆಯಬೇಕೆಂಬ ಮೃಗೀಯ ಪ್ರವೃತ್ತಿಗಳಿಂದ ಅದು ಪೋಷಿಸಲ್ಪಡುತ್ತದೆ ಹಾಗೂ ಬೆಂಬಲಿಸಲ್ಪಡುತ್ತದೆ.

ಈಗಿನ ಪರಿಸ್ಥಿತಿಯಲ್ಲಿ ಜಾತಿ ಪದ್ಧತಿ ವಿರುದ್ಧ ನಾವು ಏನೂ ಮಾಡಲಾಗದು. ಡಾ. ಬಿ. ಆರ್. ಅಂಬೇಡ್ಕರ್‌ರವರು ತಮ್ಮ ಜೀವನಾದ್ಯಂತ ಅದರ ವಿರುದ್ಧ ಹೋರಾಡಿದರು ಮತ್ತು ಅದರ ವಿನಾಶಕ್ಕೆ ಹೆಣಗಾಡಿದರು; ಆದರೆ ಅವರು ಅದರಲ್ಲಿ ಜಯಗಳಿಸಲಿಲ್ಲ. ನಮ್ಮ ಸಂವಿಧಾನವನ್ನು ಅಂಗೀಕರಿಸುವ ದಿನ (26-01-1949) ಸಾಂವಿಧಾನಿಕ ಸಭೆಯಲ್ಲಿ ಅವರು ಅರ್ಥಗರ್ಭಿತವಾದ ಭವಿಷ್ಯವಾಣಿಯಂತಿರುವ ನುಡಿಯನ್ನು ಆಡಿದರು. ಅಂತಹ ಎಣೆಯಿಲ್ಲದ ನುಡಿಯಿಂದ ಉಲ್ಲೇಖಿಸುವುದಾದರೆ:

"1949ರ ಜನವರಿ 26ರಂದು ನಾವು ವೈರುದ್ಧ್ಯಗಳಿಂದ ಕೂಡಿದ ಜೀವನವನ್ನು ಪ್ರವೇಶಿಸುತ್ತಿದ್ದೇವೆ. ರಾಜಕೀಯದಲ್ಲಿ ಸಮಾನತೆಯನ್ನೂ ಮತ್ತು ಸಾಮಾಜಿಕ ಹಾಗೂ ಆರ್ಥಿಕ ಜೀವನದಲ್ಲಿ ಅಸಮಾನತೆಯನ್ನೂ ನಾವು ಪಡೆಯಲಿದ್ದೇವೆ. ರಾಜಕೀಯದಲ್ಲಿ ಒಬ್ಬ ವ್ಯಕ್ತಿಗೆ ಒಂದು ಓಟು ಮತ್ತು ಒಂದು ಓಟಿಗೆ ಒಂದು ಬೆಲೆ ಎಂಬ ತತ್ವವನ್ನು ನಾವು ಒಪ್ಪಲಿದ್ದೇವೆ. ಆದರೆ ನಮ್ಮ ಸಾಮಾಜಿಕ ಹಾಗೂ ಆರ್ಥಿಕ ಸಂರಚನೆಗಳು ಒಬ್ಬ ವ್ಯಕ್ತಿಗೆ ಒಂದೇ ಬೆಲೆ ಎಂಬ ತತ್ವವನ್ನು ನಿರಾಕರಿಸುವುದನ್ನು ಮುಂದುವರಿಸಲಿವೆ. ಎಷ್ಟು ಸಮಯ ನಾವು ಇಂತಹ ವೈರುದ್ಧ್ಯಮಯ ಜೀವನದಲ್ಲಿ ಮುಂದುವರಿಸಲಿದ್ದೇವೆ? ಎಷ್ಟರತನಕ ನಮ್ಮ ಸಾಮಾಜಿಕ ಹಾಗೂ ಆರ್ಥಿಕ ಜೀವನದಲ್ಲಿ ಸಮಾನತೆಯನ್ನು ಅಲ್ಲಗಳೆಯಲಿದ್ದೇವೆ? ನಾವು ಅದನ್ನು ತುಂಬಾ ಸಮಯ ಅಲ್ಲಗಳೆಯುತ್ತಿದ್ದರೆ ನಮ್ಮ ರಾಜಕೀಯ ಪ್ರಜಾಪ್ರಭುತ್ವವೂ ಗಂಡಾಂತರದಲ್ಲಿರುವುದು. ನಾವು ಈ ವೈರುದ್ಧ್ಯವನ್ನು

ಜೀತಪದ್ಧತಿ ಮತ್ತು ಜೀತದಾಳುಗಳನ್ನು ಗುರುತಿಸುವ ತರಬೇತಿ ಕೈಪಿಡಿ

ಮುನ್ನುಡಿ: ಡಾ. ಎಚ್. ಸುದರ್ಶನ್

ಮೊತ್ತಮೊದಲ ಅವಕಾಶದಲ್ಲಿಯೇ ತೆಗೆದುಹಾಕಬೇಕು. ಇಲ್ಲದಿದ್ದರೆ ಅಸಮಾನತೆಯಿಂದ ನರಳುವವರು ನಾವು ಪ್ರಯಾಸಪೂರ್ವಕವಾಗಿ ಕಟ್ಟಿದ ರಾಜಕೀಯ ಪ್ರಜಾಪ್ರಭುತ್ವದ ಸಂರಚನೆಯನ್ನು ಸಿಡಿದು ಹಾಕುವರು."

ಇಂತಹ ಪ್ರಶ್ನೆಗಳನ್ನು ಹಾಕುವಂತೆ ಮಾಡಿದ ಭಾರತೀಯ ಇತಿಹಾಸದಲ್ಲಿ ಬಂದು ಹೋದ ಅತಿ ದೊಡ್ಡ ದೃಷ್ಟಾರರ ಬೇಗುದಿ 57 ವರ್ಷಗಳ ನಂತರವೂ ಚಿಂತನೆಯ ಒಂದೇ ಒಂದು ಕೇಂದ್ರ ಬಿಂದುವಾಗಿ ಮುಂದುವರಿಯುತ್ತಿದೆ.

ಇವತ್ತಿನ ಸ್ಥಿತಿ ಏನೆಂದರೆ, ಭೂಮಿ ಹಂಚಿಕೆಯಲ್ಲಿ ಅಸಮಾನತೆ ಮತ್ತು ಅನ್ಯಾಯಗಳು ವ್ಯಾಪಕವಾಗಿದ್ದರೂ ಭೂಸುಧಾರಣೆ ಗತಕಾಲಕ್ಕೆ ಸೇರಿದಂತಿದೆ. ಒಂದೇ ಹಂಚಿಕೆಗೆ ಭೂಮಿ ಸಿಗುತ್ತಿಲ್ಲ ಅಥವಾ ಅದು ಕಾಲಾನುಗಟ್ಟಲೆ ವ್ಯಾಜ್ಯದಲ್ಲಿ ಸಿಕ್ಕಿಹಾಕಿಕೊಂಡಿದೆ. ನೀಲಿ ಬೆಳೆಗಾರರ ಹಿತಾಸಕ್ತಿಗಳನ್ನು ಕಾಪಾಡಲು ಬಾಪುರವರು ತಮ್ಮ ಪ್ರಥಮ ಅಹಿಂಸಾ ಹೋರಾಟವನ್ನು ನಡೆಸಿದ ಚಂಪಾರಣ್ಯ ತರಹದ ಜಿಲ್ಲೆಗಳಲ್ಲಿ ಎಲ್ಲಾ ವ್ಯವಸಾಯ ಭೂಮಿಯು ಕೆಲವೇ ಕೆಲವು ಊಳಿಗಮಾನ್ಯ ಜಮೀನ್ದಾರರ ಒಡೆತನದಲ್ಲಿದೆ. ಆ ಜಮೀನ್ದಾರರು ಸಕ್ಕರೆ ಕಾರ್ಖಾನೆಗಳ ಮಾಲೀಕರೂ ಆಗಿದ್ದು ಅವರ ಹಿತಾಸಕ್ತಿಗಳು ಬಿಹಾರ ಸಕ್ಕರೆ ಕಾರ್ಖಾನೆ ನಿಯಂತ್ರಣ ಅಧಿನಿಯಮದಿಂದ ಸುವ್ಯವಸ್ಥಿತವಾಗಿ ರಕ್ಷಿಸಲ್ಪಟ್ಟಿವೆ. ಕಾನೂನು ಪಟ್ಟಭದ್ರ ಹಿತಾಸಕ್ತಿಗಳ ಕೈಜೋಡಿಸಿದರೆ ಅದರ ಅನಿವಾರ್ಯ ಪರಿಣಾಮವೇ ಜೀತ ಪದ್ಧತಿ. ಜೀತಪದ್ಧತಿಯು ಗಣಿಗಳು, ಕಲ್ಲುಗಣಿಗಳು, ಇಟ್ಟಿಗೆ ಕಾರ್ಖಾನೆಗಳು, ಚರ್ಮ ಹದಮಾಡುವ ಕಾರ್ಖಾನೆಗಳು ಎಲ್ಲೇ ಇರಲಿ ಸ್ಥಳೀಯ ಅಧಿಕಾರಿಗಳು ಗಣಿಮಾಲೀಕರು ಮತ್ತು ಗುತ್ತಿಗೆದಾರರ ಜೊತೆ ಶಾಮೀಲಾಗುತ್ತಾರೆ ಮತ್ತು ತಮ್ಮ ಹಕ್ಕುರಕ್ಷಣೆಗೆ ಹೋರಾಡಲು ಸಂಘಟನೆ ಕಟ್ಟುವ ಕಾರ್ಮಿಕರು ಘೋರ ಪರಿಣಾಮಗಳಿಗೆ ಗುರಿಯಾಗುತ್ತಾರೆ. ಕಾನೂನಾತ್ಮಕ ಕ್ರಮಗಳು ಜಟಿಲ ವಿಷಯಗಳಾಗಿವೆ ಮತ್ತು ಕರ್ನಾಟಕದಲ್ಲಿಯ ಜೀವಿಕದ ಕಾರ್ಯಕರ್ತರಂತಿರುವ ಕೆಳಸ್ತರದಲ್ಲಿ ಕೆಲಸ ನಿರ್ವಹಿಸುವ ಜನರಿಗೆ ಜೀತಪದ್ಧತಿಯ ಬಲಿಪಶುಗಳನ್ನು ಬಿಡುಗಡೆ ಗೊಳಿಸುವುದು ಕಷ್ಟಸಾಧ್ಯವಾಗಿದೆ. ಅನ್ಯಾಯಯುತ, ದಮನಕಾರಿ ಮತ್ತು ಅಸಮಾನ ಸಾಮಾಜಿಕ ಆರ್ಥಿಕ ವ್ಯವಸ್ಥೆಯನ್ನು ನಾವು ಎಷ್ಟೇ ಕೆಚ್ಚಿನಿಂದ ಜರೆದರೂ ಅದರಲ್ಲಿ ಆಮೂಲಾಗ್ರವಲ್ಲದಿದ್ದರೂ ಗುಣಾತ್ಮಕ ಬದಲಾವಣೆ ತರಲು ನಮಗೆ ಸಾಧ್ಯವಾಗುವುದು ತೀರ ಕಡಿಮೆ ಎಂದೇ ಹೇಳಬೇಕು.

ಇಂತಹ ವಿಷಾದಕರ ಮತ್ತು ಕಳವಳಕಾರಿ ಪರಿಸ್ಥಿತಿಯಲ್ಲಿ ತರಬೇತಿಯ ಉದ್ದೇಶಗಳಾದರೂ ಏನಿರಬಹುದು?

ಅಸಮಾನ ಮತ್ತು ಶೋಷಿತ ವ್ಯವಸ್ಥೆಯ ಬಲಿಪಶುಗಳಿಗೂ ಸ್ಥಳೀಯ ಅಧಿಕಾರಿ ವರ್ಗದವರಿಗೂ ತರಬೇತಿಯು ಪ್ರಸ್ತುತವಾಗಿದೆ.

ಮೊದಲನೆಯದಾಗಿ ಜೀತದಾಳುಗಳ ಜಾಗೃತೀಕರಣಕ್ಕೆ ಅದು ಪರಿಣಾಮಕಾರಿ ಸಾಧನವಾಗಬಹುದು. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಕೊಡುವ ರೀತಿಯಲ್ಲಿ ಅವರಲ್ಲಿ ಅದು ವಿವೇಚನಾತ್ಮಕ ಪ್ರಜ್ಞೆಯನ್ನು ಎಚ್ಚರಗೊಳಿಸಿ ಉತ್ತೇಜಿಸಬಹುದು.

ನಾನು ಯಾರು?

ನಾನೆಲ್ಲಿಂದ ಬಂದೆ?

ನಾನ್ಯಾಕೆ ಇಂತಹ ತುಚ್ಛ ಸ್ಥಿತಿಗೆ ತಲುಪಿದ್ದೇನೆ?

ನನ್ನನ್ನು ಈ ಕೆಲಸಕ್ಕೆ ಕರೆತಂದಾಗ ನನಗೆ ಎಷ್ಟೊಂದು ಭರವಸೆಗಳನ್ನು ನೀಡಿದ್ದರು; ಎಷ್ಟೊಂದು ವಾಗ್ದಾನಗಳನ್ನು ಮಾಡಿದ್ದರು.

ಅವೆಲ್ಲವೂ ಸುಳ್ಳಾಗಿವೆ.

ಬದಲಾಗಿ ನನ್ನನ್ನು ಕನಿಕರವಿಲ್ಲದ ಮತ್ತು ನಿರ್ದಯಿ ಶೋಷಣೆಗೆ ಒಳಗಾಗಿಸಿದ್ದಾರೆ.

ನನಗೇಕೆ ಈ ಪರಿಣಾಮದ ಅರಿವು ಮುಂಚೆಯೇ ಆಗಿಲ್ಲ?

ಇಂತಹ ಪಾಡು ಮತ್ತು ಸಂಕಟಕರ ಪರಿಸ್ಥಿತಿಯಿಂದ ನನ್ನನ್ನು ಹೇಗೆ ನಾನು ಕಷ್ಟಕರವಾದರೂ ಬಿಡಿಸಿಕೊಳ್ಳಬಹುದು?

ನನ್ನ ಬಲಾಬಲಗಳೇನು? ನನಗೆ ಅವುಗಳ ಅರಿವಿದೆಯೇ?

ನನ್ನ ಶತ್ರುಗಳ (ಜೀತದಾಳುಗಳ ಯಜಮಾನರ) ಸಾಮರ್ಥ್ಯಗಳೇನು? ದೌರ್ಬಲ್ಯಗಳೇನು? ನನಗೆ ಅವುಗಳ ಅರಿವಿದೆಯೇ?

ನಾನು ಜೀತಕ್ಕಿರುವ ಜಮೀನ್ದಾರರ ಹಾಗೂ ಸಾಹುಕಾರರ ಕೆಟ್ಟ ಕಪಿಮುಷ್ಟಿಯ ಹಿಡಿತವನ್ನು ಸಡಿಲಿಸುವುದು ಹೇಗೆ?

ಅದಕ್ಕೆ ಕಾನೂನುಗಳ ಅರಿವು ಮಾತ್ರ ಸಾಕೇ?

ಜೀತಪದ್ಧತಿ ಮತ್ತು ಜೀತದಾಳುಗಳನ್ನು ಗುರುತಿಸುವ ತರಬೇತಿ ಕೈಪಿಡಿ

ಮುನ್ನುಡಿ: ಡಾ. ಲಕ್ಷ್ಮೀಧರ್ ಮಿಶ್ರಾ

ಅದಕ್ಕೆ ಅಸಂಘಟಿತರ ಸಂಘಟನೆ ಸಹಕಾರಿಯಾಗಬಲ್ಲದೇ?

ಅಸಂಘಟಿತರ ಸಂಘಟನೆಯು ನನ್ನಲ್ಲಿ ಈ ತನಕ ಇರದ ಆದರೆ ಈಗ ಅವಶ್ಯಕವಾಗಿ ಬೇಕಾಗಿರುವ ಸಾಮಾಜಿಕವಾಗಿ ಸರಿತೂಗುವ ಶಕ್ತಿಯನ್ನು ನನಗೆ ಕೊಡಬಲ್ಲದೇ

ಅಸಂಘಟಿತರ ಸಂಘಟನೆಗೆ ಅಷ್ಟೊಂದು ಅಗಾಧ ಸಾಧ್ಯತೆ ಇದ್ದರೆ ನನ್ನ ಬಿಡುಗಡೆ, ನನ್ನ ಸ್ವಾತಂತ್ರ್ಯ, ನನ್ನ ರಕ್ಷಣೆ, ನನ್ನ ಪುನರ್ವಸತಿಗಾಗಿ ನನ್ನ ಪರವಾಗಿ ಮಧ್ಯಸ್ಥಿಕೆ ವಹಿಸಿ ನನ್ನ ಪರವಾಗಿ ಭಿನ್ನವಿಸುವ ಹೊಸ ಸಂಘಟನೆಗಳಿಗೆ, ಹೊಸ ಒತ್ತಡ ತರುವ ಗುಂಪುಗಳಿಗೆ ಮತ್ತು ಹೊಸ ಶಕ್ತಿಗಳಿಗೆ ನಾನು ಸೇರಿಕೊಳ್ಳುವುದೇ ಹೆಚ್ಚು ಸೂಕ್ತ.

ಮೇಲ್ಕಾಣಿಸಿರುವ ವಿಷಯಗಳು ಜೀತಪದ್ಧತಿಯಿಂದ ನರಳುತ್ತಿರುವವರಿಗೋಸ್ಕರ ಸಿದ್ಧಪಡಿಸಿದ ಜಾಗೃತೀಕರಣದ ಗುರಿಹೊಂದಿರುವ ತರಬೇತಿಯೊಂದರ ಪ್ರಮುಖ ಉದ್ದೇಶಗಳನ್ನು ಸೂಚಿಸಿದರೆ ಸ್ಥಳೀಯ ಅಧಿಕಾರಿ (ಜಿಲ್ಲಾಧಿಕಾರಿ, ಉಪ ವಿಭಾಗಾಧಿಕಾರಿ, ಕಾರ್ಯನಿರ್ವಾಹಕ ದಂಡಾಧಿಕಾರಿ, ತಹಶೀಲ್ದಾರ್, ಕಾರ್ಯನಿರ್ವಾಹಕ ಅಧಿಕಾರಿ ಇತ್ಯಾದಿ)ಗಳಿಗೋಸ್ಕರ ಸಿದ್ಧಪಡಿಸಿದ ತರಬೇತಿಗೂ ಕೆಲವೊಂದು ಪ್ರಮುಖ ಉದ್ದೇಶಗಳಿರುತ್ತವೆ.

ಮಾಹಿತಿ ಒದಗಿಸಲು ಮತ್ತು ಸಶಕ್ತೀಕರಣಕ್ಕೋಸ್ಕರ ಇರುವ ಉದ್ದೇಶಗಳು ಈ ಕೆಳಗಿನಂತಿವೆ:

ಪರಿಕಲ್ಪನೆಗಳು ಮತ್ತು ವ್ಯಾಖ್ಯಾನಗಳಿಗೆ ಸಂಬಂಧಪಟ್ಟಂತೆ ಸ್ಪಷ್ಟತೆ; ಪೂರ್ವಾಗ್ರಹಗಳ ನಿವಾರಣೆ;

ಸಂವಿಧಾನ ಮತು ಕಾನೂನುಗಳಲ್ಲಿರುವ ಅಂಶಗಳು;

ಗುರುತಿಸುವಿಕೆ, ಬಿಡುಗಡೆ ಮತ್ತು ಪುನರ್ವಸತಿಯಂತಹ ಜೀತಪದ್ಧತಿಯ ವಿವಿಧ ಅಂಶಗಳ ಕುರಿತು ಸರ್ವೋಚ್ಛ ನ್ಯಾಯಾಲಯದ ತೀರ್ಪುಗಳು;

ಜೀತವೆಂಬ ಸಾಮಾಜಿಕ ಪಿಡುಗಿನ ನಿರ್ಮೂಲನೆ ಕಾರ್ಯಗತ ಮಾಡಲಾಗದ ಆದರ್ಶ ಯೋಜನೆಯಾಗಿರದೆ ಅದು ಸಂಭವನೀಯವೂ ಕಾರ್ಯಸಾಧುವೂ ಆಗಿದೆ ಎಂದು ತೋರಿಸುವಂತಿರುವ ಉತ್ತಮ ಸಾಧನೆಗಳ ಅಥವಾ ಪ್ರಯತ್ನಗಳ ಅನುಭವ ಹಂಚಿಕೆ;

ಬಲಾತ್ಕಾರ ದುಡಿಮೆಗೆ ಆಗುವ ವ್ಯಕ್ತಿ ಮಾರಾಟದಂತಹದ ಜೀತ ಪದ್ಧತಿಯ ಹೊಸ ರೂಪಗಳು;

ಪುನರ್ವಸತಿಗೊಳಿಸಲು ಕೈಗೊಂಡ ಹೊಸ ಮಾರ್ಗಗಳ ಅಮೂಲ್ಯ ಅನುಭವಗಳ ಹಂಚಿಕೆ.

ತರಬೇತಿ ಪಡೆಯುವವರು ಈ ಕೆಳಗಿನ ಪ್ರಶ್ನೆಗಳನ್ನು ತಮಗೆ ಕೇಳುತ್ತಿದ್ದರೆ ತರಬೇತಿಯು ಅವರ ಜಾಗೃತೀಕರಣಕ್ಕೆ ಪ್ರಮುಖ ಸಾಧನವಾಗಬಹುದು

ನಮಗಿರುವ ಜವಾಬ್ದಾರಿ ಏನು?

ಜೀತ ಪದ್ಧತಿಯ ತನಿಖೆಗೆ ಸಂಬಂಧ ಪಟ್ಟಂತೆ ಆ ಜವಾಬ್ದಾರಿಯ ಲಕ್ಷಣವೇನು?

ಆ ಜವಾಬ್ದಾರಿಯನ್ನು ನೆರವೇರಿಸಲು ಬೇಕಾದ ಅನುಕೂಲತೆಗಳು ನಮ್ಮಲ್ಲಿವೆಯೇ?

ನಮ್ಮ ಜವಾಬ್ದಾರಿಯನ್ನು ನೆರವೇರಿಸುವ ಪ್ರಕ್ರಿಯೆಯನ್ನು ಅಡ್ಡಿಮಾಡುವ ಸಮಸ್ಯೆಗಳೇನು, ನಿರ್ಬಂಧಗಳೇನು? ಸವಾಲುಗಳೇನು?

ನಮ್ಮ ಜವಾಬ್ದಾರಿಯನ್ನು ತಾಂತ್ರಿಕವಾಗಿ ಮತ್ತು ಒಂದೇ ಮಾದರಿಯಲ್ಲಿ ನೆರವೇರಿಸುತ್ತೇವೆಯೇ ಅಥವಾ ಅದನ್ನು ಸಾಂಪ್ರದಾಯಿಕವಲ್ಲದ ರೀತಿಯಲ್ಲಿ ಹಾಗೂ ಸ್ವತಂತ್ರ ವಿಚಾರಧಾರೆ ಬಳಸಿ ಹೆಮ್ಮೆಯಿಂದಲೂ ಘನತೆಯಿಂದಲೂ ನೆರವೇರಿಸುತ್ತೇವೆಯೇ?

ಒಂದು ಕಾನೂನು ಅಥವಾ ತೀರ್ಪನ್ನು ಬೇರೆ ಬೇರೆ ರೀತಿಯಲ್ಲಿ ವಿವರಿಸುವ ಸಾಧ್ಯತೆ ಇದ್ದರೆ ನಾವದನ್ನು ಆ ಕಾನೂನು ಅಥವಾ ತೀರ್ಪು ಯಾರ ಕುರಿತಾಗಿ ಜಾರಿಗೊಳಿಸಲಾಗಿತ್ತೋ ಅವರಿಗೆ ಪ್ರಯೋಜನವಾಗುವ ರೀತಿಯಲ್ಲಿ ವಿವರಿಸುತ್ತೇವೆಯೇ? ಹಾಗಲ್ಲದಿದ್ದರೆ, ನಾವು ಏಕೆ ಆ ರೀತಿ ವಿವರಿಸಲಿಕ್ಕೆ ಹೋಗುವುದಿಲ್ಲ?

ಜೀತದಾಳುಗಳು ಬಡವರಲ್ಲೇ ಅತಿ ಬಡವರು ಮತು ದುರ್ಬಲರಲ್ಲೇ ಅತಿ ದುರ್ಬಲರು. ತಾವು ತಿಳುವಳಿಕೆ ಇಲ್ಲದವರೆಂದು ಅವರು ಅರಿಯರು. ವರ್ಷಾನುಗಟ್ಟಲೆ ಗುಲಾಮಗಿರಿಯ ಹಾಗೂ ದಾಸ್ಯ ಜೀವನದ ಪರಿಣಾಮವಾಗಿ ತಮ್ಮ ಹಕ್ಕುಗಳು ಮತ್ತು ಭಾದ್ಯತೆಗಳ ಬಗ್ಗೆ ಅರಿವಿಲ್ಲದವರು; ಸೂಕ್ತ ರೀತಿಯಲ್ಲಿ ತಮ್ಮ ಸ್ವಾತಂತ್ರ್ಯ ಮತ್ತು ಸ್ವಂತಿಕೆಯನ್ನು ಬಳಸಲು ಅಸಮರ್ಥರಾದವರು. ಸ್ವತಂತ್ರ ಜೀವನ ನಡೆಸಲುಬೇಕಾದ ವೃತ್ತಿ

ಜೀತಪದ್ಧತಿ ಮತ್ತು ಜೀತದಾಳುಗಳನ್ನು ಗುರುತಿಸುವ ತರಬೇತಿ ಕೈಪಿಡಿ

ಮುನ್ನುಡಿ: ಡಾ. ಎಲ್ ಮಿಶ್ರಾ

ಕೌಶಲ್ಯವಿಲ್ಲದವರು. ಒಂದು ವೇಳೆ ಲಾಭದಾಯಕ ವೃತಿಯಲ್ಲಿ ಅವರು ತೊಡಗಿಸಿಕೊಳ್ಳುವಂತೆ ನೋಡಿಕೊಂಡರೂ ಆರಂಭದ ದಿನಗಳಲ್ಲಿ ಬೇರೆ ಮೂಲಗಳಿಂದ ಬರುವ ಯಾವುದೇ ಆದಾಯವಿಲ್ಲದವರು. ಆರ್ಥಿಕ ಪುನರ್ವಸತಿಯ ಪ್ರಕ್ರಿಯೆಯಲ್ಲಿ ಶ್ರಮವಹಿಸಲು ಇಚ್ಚಿಸದೇ ತಮಗೆ ರೂಢಿಯಾಗಿದ್ದ ಜೀತದ ಪ್ರಪಂಚದ ಸುಳ್ಳು ಆರ್ಥಿಕ ಭದ್ರತೆಗೆ ಮರಳಲು ಅವರು ಇಷ್ಟಪಡಬಹುದು.

ಇಂತಹ ವಾಸ್ತವ ಪರಿಸ್ಥಿತಿಯ ಸರಿಯಾದ ಅರಿವು ನಮಗಿದೆಯೇ? ಇಲ್ಲದಿದ್ದರೆ, ನಾವು ಸ್ವಲ್ಪ ಚಲನಶೀಲರಾಗುವ ಅವಶ್ಯಕತೆ ಇಲ್ಲವೆ? ನಮ್ಮ ಸಮಾಜದ ಅದೃಷ್ಟಹೀನ ಜನರ ಭೇಟಿ ಮಾಡುವಾಗ ಮತ್ತು ಅವರ ಜೊತೆ ಮಾತನಾಡುವಾಗ ನಾವು ನಮ್ಮ ಅಧಿಕಾರ ಪ್ರಜ್ಞೆ ಮರೆತು ಅವರಿಗೆ ಸ್ವಲ್ಪವಾದರೂ ಸ್ನೇಹಭಾವ ತೋರಿಸಿ ಅವರ ನಿಜವಾದ ಕೊರಗುಗಳನ್ನು ತಿಳಿಯಲು ಮತ್ತು ಅವನ್ನು ಉಪಶಮನಗೊಳಿಸಲು ನಮ್ಮ ಕೈಲಾದಷ್ಟು ನಾವು ಮಾಡಬಹುದೇ?

ಇಂತಹ ಸಮಗ್ರ ದೃಷ್ಟಿಕೋನದಲ್ಲಿ ಭಾವಿ ಜೀತದಾಳುಗಳು, ಪ್ರಸ್ತುತ ಜೀತದಾಳುಗಳು ಮತ್ತು ಬಿಡುಗಡೆ ಹೊಂದಿ ಪುನರ್ವಸತಿಗೊಳ್ಳಲಿರುವ ಜೀತದಾಳುಗಳು ಹಾಗೂ ಸ್ಥಳೀಯ ಅಧಿಕಾರಿಗಳು ಮತ್ತು ಕಾನೂನನ್ನು ಅನುಷ್ಠಾನಗೊಳಿಸುವ ಅಧಿಕಾರಿಗಳ ತರಬೇತಿಯ ಅವಶ್ಯಕತೆಗಳನ್ನು ಗ್ರಹಿಸಿ ಅಂತರ್ಗತಗೊಳಿಸಬೇಕು. ಈ ಎರಡು ಗುಂಪಿನ ಅವಶ್ಯಕತೆಗಳು ಬೇರೆಬೇರೆಯಾಗಿದ್ದು, ತರಬೇತಿಯ ವಿಷಯಗಳು ಮತ್ತು ತರಬೇತಿ ಸಾಮಾಗ್ರಿಗಳು ಬೇರೆಬೇರೆಯಾಗಿರಬೇಕು. ಕ್ರಿಯಾತ್ಮಕ ಚಿಂತಕರು, ಬರಹಗಾರರು ಮತ್ತು ಕಲಾವಿದರನ್ನೊಳಗೊಂಡ ಕಾರ್ಯಗೋಷ್ಟಿಗಳ ಮುಖಾಂತರ ಅವನ್ನು ಸಿದ್ಧಪಡಿಸಬೇಕು. ಕಾರ್ಯಗೋಷ್ಠಿಯ ಮೊದಲ ಪ್ರತಿಫಲದ ಪರಿಣಾಮವನ್ನು ಪರೀಕ್ಷೆಗೊಳಪಡಿಸಿ ಭಾಗವಹಿಸುವವರ ಪ್ರತಿಕ್ರಿಯೆಗಳನ್ನು ಹೊರಸೆಳೆದು ಮತ್ತು ಅವನ್ನು ಧ್ವನಿಮುದ್ರಣ ಮಾಡಿ ಕಾರ್ಯಗೋಷ್ಠಿಯಲ್ಲಿ ಅವನ್ನು ಪುನಃ ಮಂಡಿಸಿಟ್ಟು ಅನುಷ್ಠಾನಗೊಳಿಸಲು ಅವುಗಳಿಗೆ ಅಂತಿಮ ಸಮ್ಮತಿ ನೀಡಬೇಕು.

ಜೀತ ಪದ್ಧತಿ ನಿರ್ಮೂಲನೆ ಕ್ಷೇತ್ರದಲ್ಲಿ ತಳಮಟ್ಟದಲ್ಲಿ 20 ವರ್ಷಕ್ಕೂ ಮಿಗಿಲಾಗಿ ಕಾರ್ಯತತ್ಪರವಾಗಿರುವ 'ಜೀವಿಕ' ಸಂಘಟನೆಯು ಇಂತಹ ಸಕಾಲಿಕ ಮತ್ತು ಸೂಕ್ತ ಮೊದಲ ಪ್ರಯತ್ನವನ್ನು ತನ್ನ ಹೆಗಲ ಮೇಲೆ ಎತ್ತಿಕೊಂಡಿರುವುದು ಯೋಗ್ಯವಾಗಿಯೇ ಇದೆ.

ತನ್ನ ಸುಧೀರ್ಘ ಕಾರ್ಯಾಚರಣೆ ಮತ್ತು ಕ್ರೌರ್ಯ, ಅನ್ಯಾಯ, ದಮನ ಹಾಗೂ ಅಸಮಾನತೆಗಳ ವಿರುದ್ಧ ಹೂಡಿದ ನಿರಂತರ ಹೋರಾಟಗಳ ಅವಧಿಯಲ್ಲಿ ಅದು ಹಲವಾರು ಏರುಪೇರುಗಳನ್ನು, ಯಾತನೆ ಹಾಗೂ ಸಂಕಟಗಳನ್ನು ಎದುರಿಸಿದೆ; ಅದು ಮುಗ್ಗರಿಸಿದೆ ಮತ್ತು ಗಾಯಗೊಂಡಿದೆ; ಆದರೆ ಅದು ತನ್ನ ಗುರಿಯನ್ನು ಬಿಟ್ಟುಕೊಟ್ಟಿಲ್ಲ. ಜೀತದಾಳುಗಳನ್ನು ಗುರುತಿಸುವಲ್ಲಿ, ಜೀತದಾಳುಗಳಲ್ಲಿ ಹೆಚ್ಚಿನ ಮಂದಿಯನ್ನು ಬಿಡುಗಡೆಗೊಳಿಸುವಲ್ಲಿ ಮತ್ತು ಅವರಿಗೆ ಪರಿಣಾಮಕಾರಿ ಮತ್ತು ಶಾಶ್ವತ ಪುನರ್ವಸತಿ ಸಿಗುವಂತೆ ಕರ್ನಾಟಕ ಸರ್ಕಾರದೊಂದಿಗೆ ವ್ಯವಹರಿಸುವಲ್ಲಿ ಸ್ವಯಂಸೇವಾ ಸಂಸ್ಥೆಯ ದಿಟ್ಟತನ, ಸ್ಥೈರ್ಯ ಮತ್ತು ಛಲಗಳು ಸಾಧನವಾಗಿವೆ.

ಜೀತ ಪದ್ಧತಿ ನಿರ್ಮೂಲನೆಗೋಸ್ಕರ ತರಬೇತಿಯ ಕೈಪಿಡಿಯು ಖಂಡಿತವಾಗಿಯೂ ಇತರ ತಳಮಟ್ಟದ ಸಂಘಟನೆಗಳು ಕಾರ್ಯತತ್ಪರರಾಗುವಂತೆ ಮತ್ತು ಬೇರೆ ಬೇರೆ ಮಟ್ಟದ ಅಧಿಕಾರಿಗಳಿಗೆ ಹಾಗೂ ಜೀತದಾಳುಗಳಿಗೆ ತರಬೇತಿ ನೀಡಲು ಕೈಪಿಡಿಯನ್ನು ಬಳಸುವಂತೆ ಉತ್ತೇಜಿಸುವುದು. ಕೆಲಸಮಯದ ನಂತರ ವೃತ್ತಿನಿರತ ಪ್ರವೀಣರೊಬ್ಬರು ಅಥವಾ ಸಂಸ್ಥೆಯೊಂದು ಜೀವಿಕವು ರೂಪಿಸಿದ ತರಬೇತಿಯ ಚೌಕಟ್ಟಿನ ಸೂಕ್ತತೆಯ ಬಗ್ಗೆ ಮೌಲ್ಯಮಾಪನ ಮಾಡಿ ಕೈಪಿಡಿಯ ವಿಷಯಗಳನ್ನು ಇನ್ನೂ ಉತ್ತಮಗೊಳಿಸಲು ಕ್ರಮ ಕೈಗೊಳ್ಳುವುದು ಸಮಂಜಸವಾಗಿದೆ. ನಾನು ಜೀವಿಕದ ಹುರುಪಿನ ಪ್ರಯತ್ನಕ್ಕೆ ಎಲ್ಲಾ ಗೆಲುವನ್ನು ಆಶಿಸುತ್ತೇನೆ.

ದಿನಾಂಕ: 25-1-2006

ಡಾ. ಲಕ್ಷ್ಮೀಧರ್ ಮಿಶ್ರಾ

ಜೀತಪದ್ಧತಿ ಮತ್ತು ಜೀತದಾಳುಗಳನ್ನು ಗುರುತಿಸುವ ತರಬೇತಿ ಕೈಪಿಡಿ

ಪೀಠಿಕೆ: ಕಿರಣ ಕಮಲ ಪ್ರಸಾದ

ಪೀಠಿಕೆ

ಜೀತ ಪದ್ಧತಿ ರದ್ದತಿ ಕಾನೂನು ನಮ್ಮ ಸ್ವತಂತ್ರ ಭಾರತದಲ್ಲಿ ಸಾಮಾಜಿಕ ಪಿಡುಗುಗಳನ್ನು ಹೋಗಲಾಡಿಸಲು ಇರುವ ಕಾನೂನುಗಳಲ್ಲಿ ಅತ್ಯಂತ ಕಿರಿದೂ, ಸುಸ್ಪಷ್ಟವೂ ಹಾಗೆಯೇ ಅತ್ಯಂತ ಬಲಿಷ್ಠವೂ ಆಗಿದೆ. ಇದು ಜೀತ ನಿರ್ಮೂಲನೆಯಲ್ಲಿ ತೊಡಗಿರುವ ಪ್ರತಿಯೊಬ್ಬರಿಗೂ ತಿಳಿದಿರುವ ವಿಚಾರ. 1976ರಲ್ಲಿ ಅದು ಮಂಜೂರಾಗಿದ್ದು 1985ರಲ್ಲಿ ಅದಕ್ಕೆ ಒಂದು ತಿದ್ದುಪಡಿಯಾಗಿದೆ. ಕಾನೂನಿನಲ್ಲಿ ಇರುವ ಕೆಲವು ಅಸ್ಪಷ್ಟತೆಗಳನ್ನು ಸರ್ವೋಚ್ಚ ನ್ಯಾಯಾಲಯವು ಎಂಬತ್ತರ ದಶಕದ ತನ್ನ ಕೆಲವು ಮಹತ್ವದ ತೀರ್ಪುಗಳಲ್ಲಿ ತೆಗೆದುಹಾಕಿದೆ. ಈ ತೀರ್ಪುಗಳ ಜೊತೆಗೆ ಜೀತ ನಿರ್ಮೂಲನೆ ಬಗ್ಗೆ ವಿಶೇಷ ಕಾಳಜಿ ಇರುವ ಕೇಂದ್ರ ಮತ್ತು ಕೆಲವು ರಾಜ್ಯ ಸರ್ಕಾರಗಳ ಅಧಿಕಾರಿಗಳು ಜೀತದಾಳುಗಳನ್ನು ಗುರುತಿಸಲು ಮತ್ತು ಅವರಿಗೆ ಪುನರ್ವಸತಿ ಕಲ್ಪಿಸಲು ಕೆಲವೊಂದು ಉತ್ತಮ ಮಾರ್ಗದರ್ಶನಗಳನ್ನು ಅಧಿಕಾರಿಗಳ ಕಡ್ಡಾಯ ಅನುಷ್ಠಾನಕ್ಕೋಸ್ಕರ ಹೊರಡಿಸಿದ್ದಾರೆ. ಇಂತಹ ಕಾನೂನು, ನ್ಯಾಯಾಲಯ ತೀರ್ಪುಗಳು ಮತ್ತು ಸರ್ಕಾರಿ ಆದೇಶಗಳು ಜಾರಿಯಲ್ಲಿದ್ದರೂ ನಮ್ಮ ದೇಶದ ಯಾವುದೇ ರಾಜ್ಯದಲ್ಲಿ ಜೀತ ನಿರ್ಮೂಲನೆಗೋಸ್ಕರ ಕೆಲಸ ಮಾಡುತ್ತಿರುವ ಯಾವುದೇ ವ್ಯಕ್ತಿಯು ಎದುರಿಸುತ್ತಿರುವುದು ಸಂವಿಧಾನದಲ್ಲಿಯ ಮೌಲ್ಯಗಳನ್ನು ಎತ್ತಿ ಹಿಡಿಯುವ ಮತ್ತು ಅವನ್ನು ಅನುಷ್ಠಾನಗೊಳಿಸಲು ಮಂಜೂರು ಮಾಡಿರುವ ಕಾನೂನುಗಳನ್ನು ಕಾರ್ಯಗತಗೊಳಿಸುವ ಜವಾಬ್ದಾರಿ ಹೊತ್ತ ಅಧಿಕಾರಿಗಳಲ್ಲಿ ಕಾನೂನು ಬಗ್ಗೆ, ಸರ್ಕಾರಿ ಮಾರ್ಗದರ್ಶನಗಳ ಬಗ್ಗೆ ಬೇಜವಾಬ್ದಾರಿಯುತ ಅಜ್ಞಾನ ಮಾತ್ರವಲ್ಲದೇ ಜೀತದಾಳುಗಳ ದಾರುಣ ಪರಿಸ್ಥಿತಿಯನ್ನು ನಿವಾರಿಸಿ ಅವರಿಗೆ ನ್ಯಾಯ ಒದಗಿಸಲು ಯಾವುದೇ ಕ್ರಮ ತೆಗೆದುಕೊಳ್ಳಲು ಉದ್ದೇಶಪೂರ್ವಕವಾಗಿ ನಿರಾಕರಿಸುವುದು. ಇದಕೆ ಕಾರಣವೇನು? ಇದು ಕೇವಲ ಮಾಹಿತಿಯ ಕೊರತೆಯ ಪ್ರಶ್ನೆಯೋ ಅಥವಾ ಅಪ್ರಜ್ಞಾಪೂರ್ವಕವಾಗಿ ಒಬ್ಬನು ಒಪ್ಪಿಕೊಂಡು ಬಂದಿರುವ ವರ್ಗ ಮತ್ತು ಜಾತಿಯ ಸ್ಥಾನಮಾನಗಳ ದೃಷ್ಟಿಕೋನಗಳ ಹಿಡಿತದಲ್ಲಿದ್ದು ಜೀತಕಾನೂನಿನಲ್ಲಿ ಪ್ರಸ್ತಾಪಿಸಿದ ವಿಷಯಗಳನ್ನು ಓದಿ ತಿಳಿಯಲು ಮನಸ್ಸು ಮಾಡದಿರುವುದೋ ಮತ್ತು ಒಂದು ವೇಳೆ ಅವನ್ನು ಓದಿಕೊಂಡರೂ ಆ ವಿಷಯಗಳನ್ನು ತಿರುಚಿ ಅರ್ಥೈಸುವುದೋ? ಮಾಹಿತಿ ಕೊರತೆಯನ್ನು ಸುಲಭವಾಗಿ ಅರ್ಥಮಾಡಿಕೊಳ್ಳುವಂತಿರುವ ವಾಚನಾಸಾಮಾಗ್ರಿಗಳನ್ನು ಕೈಗೆ ಎಟಕುವ ರೀತಿಯಲ್ಲಿ ದೊರಕಿಸುವ ಮೂಲಕ ಹೋಗಲಾಡಿಸಬಹುದು. ಆದರೆ ದೃಷ್ಟಿಕೋನದಲ್ಲಿ ಪರಿವರ್ತನೆಯನ್ನು ಸಾಧಿಸುವುದು ಹೇಗೆ? ಉತ್ತಮವಾಗಿ ಸಂಯೋಜಿಸಿ ನಡೆಸಿಕೊಂಡು ಹೋಗುವ ತರಬೇತಿ ಕಾರ್ಯಕ್ರಮಗಳಿಂದ ಅದನ್ನು ಸ್ವಲ್ಪ ಮಟ್ಟಿಗೆ ಸಾಧಿಸಬಹುದು. ಆದ್ದರಿಂದಲೇ ಜೀತ ಕುರಿತು ಒಂದು ತರಬೇತಿ ಮಾದರಿಯನ್ನು ರಚಿಸುವ ಅವಶ್ಯಕತೆ ಇದೆ; ಮತ್ತು ಆ ತರಬೇತಿಯನ್ನು ಜೀತದಾಳುಗಳನ್ನು ಗುರುತಿಸುವ ಮತ್ತು ಅವರಿಗೆ ಪುನರ್ವಸತಿ ಕಲ್ಪಿಸುವ ಪ್ರಕ್ರಿಯೆಗಳನ್ನು ಆರಂಭಿಸುವ ಮೊದಲು ಸಂಬಂಧ ಪಟ್ಟವರಿಗೆ ಕಡ್ಡಾಯವಾಗಿ ನಡೆಸಿಕೊಳ್ಳುವ ಅನಿವಾರ್ಯತೆಯೂ ಇದೆ.

ಜೀತ ಕುರಿತು ಕಾನೂನು ಮತ್ತು ಅದಕ್ಕೆ ಸಂಬಂಧ ಪಟ್ಟ ಸರ್ಕಾರಿ ಧೋರಣೆಗಳ ಬಗ್ಗೆ ಅಜ್ಞಾನ ಹಾಗೂ ಜೀತ ವಿರುದ್ಧ ಸಂಕಲ್ಪದ ಕೊರತೆಯನ್ನು ನಾವು ಜೀತದಾಳುಗಳಲ್ಲಿಯೂ ಮತ್ತಿತರ ದುರ್ಬಲ ವರ್ಗಗಳ ಜನರಲ್ಲಿ ಪ್ರತ್ಯೇಕವಾಗಿ ದಲಿತರು ಮತ್ತು ಆದಿವಾಸಿ ಜನರಲ್ಲಿಯೂ ಕಾಣುತ್ತೇವೆ. ಏಕೆಂದರೆ ಅವರಲ್ಲಿ ಬಹುತೇಕ ಮಂದಿ ಅಶಿಕ್ಷಿತರಾಗಿದ್ದಾರೆ ಮತ್ತು ಜಾತಿ ವ್ಯವಸ್ಥೆಯ ಪರಿಣಾಮದಿಂದಾಗಿ ಜಾತಿವ್ಯವಸ್ಥೆಯಲ್ಲಿರುವ ಮಾನವೀಯತೆ ವಿರೋಧಿ ಮೌಲ್ಯಗಳನ್ನೂ ಅಡಿಯಾಳು ಮನೋಭಾವಗಳನ್ನೂ ಅವರು ಮೈಗೂಡಿಸಿಕೊಂಡಿದ್ದಾರೆ. ನಿರಾಶದಾಯಕ ಸಂಗತಿಯೆಂದರೆ ಶೋಷಣೆ ವಿರುದ್ಧ ಮತ್ತು ದುರ್ಬಲ ವರ್ಗಗಳ ಪರವಾಗಿ ಹೋರಾಡುತ್ತಿರುವ

ಜೀತಪದ್ಧತಿ ಮತ್ತು ಜೀತದಾಳುಗಳನ್ನು ಗುರುತಿಸುವ ತರಬೇತಿ ಕೈಪಿಡಿ

ಪೀಠಿಕೆ: ಕಿರಣ ಕಮಲ ಪ್ರಸಾದ

ಬಹುತೇಕ ಸಂಘಟನೆ ಮತ್ತು ಚಳವಳಿಗಳೂ ಜೀತ ಕಾನೂನಿನಲ್ಲಿರುವ ಮಹತ್ವಪೂರ್ಣ ವಿಷಯಗಳ ಬಗ್ಗೆ ಮತ್ತು ಜೀತದಾಳುಗಳ ಬಿಡುಗಡೆಗೆ ಅದರಲ್ಲಿರುವ ಸಾಧ್ಯತೆಗಳ ಬಗ್ಗೆ ಸಂಪೂರ್ಣ ಅಜ್ಞಾನದಲ್ಲಿರುವುದು.

ಜೀತ ವಿಮುಕ್ತಿ ಕರ್ನಾಟಕದ ಸಂಕ್ಷಿಪ್ತ ರೂಪವಾಗಿದ್ದು ಮತ್ತು ಬಂಧನ ಮುಕ್ತ ಜೀವನದ ಅರ್ಥ ಕಲ್ಪಿಸಿಕೊಳ್ಳಲಾಗಿರುವ 'ಜೀವಿಕ'ವು ಜೀತಪದ್ಧತಿಯ ನಿರ್ಮೂಲನೆಯ ಗುರಿಯನ್ನು ಇಟ್ಟುಕೊಂಡಿದೆ. 1988ರಲ್ಲಿ ಒಂದು ತಾಲೂಕಿನಲ್ಲಿ ಆರಂಭಗೊಂಡಿದ್ದು 1993ರಿಂದ ಇಡಿ ಕರ್ನಾಟಕ ರಾಜ್ಯದಲ್ಲಿ ಕಾರ್ಯವ್ಯಾಪ್ತಿ ಹೊಂದಿದ್ದು ಜೀವಿಕವು ಜೀತ ಕುರಿತು ಸಂವಿಧಾನ, ಕಾನೂನು, ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳು ಹಾಗೂ ಜೀತದಾಳುಗಳ ಗುರುತಿಸುವಿಕೆಗೆ ಎಸ್. ಆರ್. ಶಂಕರನ್‌ರವರ ಮಾರ್ಗದರ್ಶನಗಳ ಮಾದರಿಯ ಕೆಲವೊಂದು ಪ್ರಮುಖ ಸರ್ಕಾರಿ ಆದೇಶಗಳನ್ನು ವ್ಯಾಪಕವಾಗಿ ಪ್ರಚಾರ ಮಾಡುವುದಲ್ಲದೇ ಅವುಗಳ ಕುರಿತು ಹಲವಾರು ತರಬೇತಿಗಳನ್ನು ಸಮಾಜ ಕಾರ್ಯಕರ್ತರಿಗೂ ಜೀತದಾಳುಗಳಿಗೂ ಜನ ಮುಖಂಡರಿಗೂ ಹಾಗೂ ಅಧಿಕಾರಿಗಳಿಗೂ ನಡೆಸುತ್ತಾ ಬಂದಿದೆ. ತರಬೇತಿಯಲ್ಲಿ ಕೇವಲ ಮಾಹಿತಿ ಗ್ರಹಿಕೆ ಮುಖ್ಯವಲ್ಲ; ಸಂವಿಧಾನವು ಸಾರುವ ಮೂಲಭೂತ ಮೌಲ್ಯಗಳಾಗಿರುವ ಸ್ವಾತಂತ್ರ್ಯ, ನ್ಯಾಯ, ಸಮಾನತೆ ಮತ್ತು ಸೋದರತ್ವ ಮೌಲ್ಯಗಳನ್ನು ತಮ್ಮದಾಗಿಸುವುದು ಬಹು ಮುಖ್ಯ. ಅದಕ್ಕೋಸ್ಕರ ಕೇವಲ ಸಂಬಂಧ ಪಟ್ಟ ವಿಷಯಗಳ ಓದುವಿಕೆ ಮಾತ್ರ ಸಾಲದು; ತೀವ್ರಗತಿಯ, ಪರಸ್ಪರ ಪ್ರಶ್ನಿಸುವ ಮತ್ತು ಸ್ವಗ್ರಹಿಕೆಯಿಂದ ತಿಳಿದು ಕೊಳ್ಳುವ ತರಬೇತಿಯ ಚೌಕಟ್ಟಿನಲ್ಲಿ ತಮ್ಮನ್ನೇ ತಾವು ಎದುರಿಸಿ ಹೊಸ ನೆಲೆ, ಹೊಸ ದೃಷ್ಟಿಕೋನವನ್ನು ಪಡೆಯುವಂತಾಗಬೇಕು.

ಕರ್ನಾಟಕದಲ್ಲಿ ಜೀತ ಕುರಿತು ಇಪ್ಪತ್ತು ವರ್ಷಕ್ಕೂ ಹೆಚ್ಚಿನ ತನ್ನ ತೊಡಗುವಿಕೆಯಲ್ಲಿ ಜೀವಿಕವು ಸರ್ಕಾರದಿಂದ ಹೆಚ್ಚಿನ ಸಹಕಾರವನ್ನು ಪಡೆದಿಲ್ಲ. 1990ರಲ್ಲಿ ಸರ್ಕಾರದ ಮೇಲೆ ಒತ್ತಡ ತರುವ ಮೊದಲ ಪ್ರಯತ್ನದಲ್ಲಿ ಜೀವಿಕವು ಯಶಸ್ಸು ಪಡೆದಿತ್ತು. ಅದು ಸಿದ್ಧಪಡಿಸಿದ ಆನೇಕಲ್ ತಾಲೂಕಿನ ಸುಮಾರು 800 ಮಂದಿ ಜೀತದಾಳುಗಳ ಅಂಕಿ ಅಂಶಗಳನ್ನು ಬಳಸಿ ಡಾ. ಸಿದ್ಧಲಿಂಗಯ್ಯನವರು ವಿಧಾನ ಪರಿಷತ್ತಿನಲ್ಲಿ ಜೀತದಾಳುಗಳ ಕುರಿತು ಪ್ರಶ್ನೆ ಎತ್ತಿದಾಗ ಸಂಬಂಧಪಟ್ಟ ಮಂತ್ರಿಗಳು ಕಾನೂನು ಪ್ರಕಾರ ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಆದೇಶಿಸಿದರ ಪರಿಣಾಮವಾಗಿ 1992ರಲ್ಲಿ 197 ಮಂದಿ ಜೀತದಾಳುಗಳ ಪುನರ್ವಸತಿಗೆ 12 ಲಕ್ಷ ರೂಪಾಯಿಗಳು ಸರ್ಕಾರದಿಂದ ಮಂಜೂರಾದವು. ಜೊತೆಗೆ 1992ರಿಂದ ಇಡಿ ರಾಜ್ಯದಲ್ಲಿ ಜೀತ ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳುವಂತೆ ಸರ್ಕಾರದ ಉನ್ನತ ಮಟ್ಟದಿಂದ ಆದೇಶಗಳು ಹೊರಡುತ್ತಿದ್ದವು. ಆದರೆ 2000 ವರ್ಷದ ತನಕ ಸರ್ಕಾರದಿಂದ ಜೀತದಾಳುಗಳನ್ನು ಹೊಸದಾಗಿ ಗುರುತಿಸುವ ಕೆಲಸ ಮಾತ್ರ ಆಗಿರಲಿಲ್ಲ. 22 ಜೂನ್ 2000ರಲ್ಲಿ ಕರ್ನಾಟಕದ ಎಲ್ಲಾ ವಾರ್ತಾ ಪತ್ರಿಕೆಗಳಲ್ಲಿ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣದ ಹಂಗರಹಳ್ಳಿಯ ಕಲ್ಲುಗಣಿಯೊಂದರಲ್ಲಿ ಸುಮಾರು ಮೂರುವರೆ ವರ್ಷಗಳಿಂದ ಐದು ಮಂದಿಯ ಕಾಲುಗಳಿಗೆ ಸರಪಳಿ ಜೋಡಿಸಿ ಅವರಿಂದ ಕಲ್ಲು ಹೊಡೆಯುವ ಕೆಲಸ ಮಾಡಿಸುತ್ತಿದ್ದ ಪ್ರಕಟವಾದ ಹಗರಣದಿಂದ ಸರ್ಕಾರವು ಎಚ್ಚೆತ್ತು ತನ್ನ ನಿಲುವನ್ನು ಬದಲಾಯಿಸಿ ಜೀತ ನಿರ್ಮೂಲನೆಗೆ ದೃಢ ನಿರ್ಧಾರ ತಾಳಿತ್ತು. ಅಧಿಕಾರಿಗಳು ಜೀತ ಕಾನೂನಿನ ಬಗ್ಗೆ ಮತ್ತು ಜೀತದಾಳುಗಳನ್ನು ಗುರುತಿಸುವ ಬಗ್ಗೆ ಜೀವಿಕದ ಕಾರ್ಯಕರ್ತರನ್ನು ಕೇಳಿಕೊಂಡರು. ಕೋಲಾರದ ಜಿಲ್ಲಾಧಿಕಾರಿಯಾಗಿದ್ದ ಶ್ರೀ ಸಯ್ಯದ್ ಜಮೀರ್ ಪಾಶಾರವರು ತಮ್ಮ ಜಿಲ್ಲೆಯ ಪ್ರತಿ 11 ತಾಲೂಕುಗಳಲ್ಲಿ ಅಲ್ಲಿಯ ಕಂದಾಯ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗಳ ಎಲ್ಲಾ ಅಧಿಕಾರಿಗಳಿಗೂ ತಾಲೂಕು ಮಟ್ಟದ ಎಲ್ಲಾ ಅಧಿಕಾರಿಗಳಿಗೂ ಜುಲೈ 2000ರಲ್ಲಿ ಕೇವಲ ನಾಲ್ಕು ದಿನಗಳೊಳಗೆ 3-4 ಗಂಟೆಗಳ ಜೀತ ಕಾನೂನು ಮತ್ತು ಅವರನ್ನು ಗುರುತಿಸುವ ವಿಧಾನದ ಕುರಿತು ತೀವ್ರತರದ ತರಬೇತಿಗಳನ್ನು ನಡೆಸಿಕೊಡಲು ಜೀವಿಕ ಕಾರ್ಯಕರ್ತರನ್ನು ಕೇಳಿಕೊಂಡರು. ಮಂಡ್ಯ ಜಿಲ್ಲೆಯ ಜಿಲ್ಲಾಧಿಕಾರಿಗಳಾಗಿದ್ದ ಶ್ರೀ ಎಲ್. ಕೆ. ಆತಿಕ್‌ರವರು ತಮ್ಮ ಜಿಲ್ಲೆಯ 7 ತಾಲೂಕುಗಳಲ್ಲಿ ಅದೇ

ಜೀತಪದ್ಧತಿ ಮತ್ತು ಜೀತದಾಳುಗಳನ್ನು ಗುರುತಿಸುವ ತರಬೇತಿ ಕೈಪಿಡಿ

ಪೀಠಿಕೆ: ಕಿರಣ ಕಮಲ ಪ್ರಸಾದ

ರೀತಿಯ ತರಬೇತಿಗಳನ್ನು ನಡೆಸಲು ಮಾದರಿಯೊಂದನ್ನು ಸಿದ್ಧಪಡಿಸಲು ಜಿಲ್ಲೆಯ ಜಾಗೃತಿ ಸಮಿತಿಯೊಂದರಲ್ಲಿ ನನ್ನನ್ನು ಕೇಳಿಕೊಂಡರು. ಅದರ ಪರಿಣಾಮವೇ ಪ್ರಸ್ತುತ ತಯಾರಿಸಲಾದ ತರಬೇತಿ ಕೈಪಿಡಿಯ ಮೊದಲ ರೂಪ. ಕಡಿಮೆ ಅವಧಿಯಲ್ಲಿ ಅಂದರೆ ಕೇವಲ 5-6 ಗಂಟೆಗಳೊಳಗೆ ಮತ್ತು ದೊಡ್ಡ ಸಂಖ್ಯೆಯಲ್ಲಿ ಅಂದರೆ ಪ್ರತಿ ತರಬೇತಿಯಲ್ಲಿ 150-200 ಮಂದಿಗಳಿಗೆ ತರಬೇತಿಯನ್ನು ನಡೆಸುವ ಅನಿವಾರ್ಯತೆಯನ್ನು ಗಮನದಲ್ಲಿಟ್ಟು ಬಹಳ ಆಳವಾಗಿ ಅಲ್ಲದಿದ್ದರೂ ಪರಸ್ಪರ ಪ್ರಶ್ನಿಸುವ, ಸ್ವ ಗ್ರಹಿಕೆಯಿಂದ ತಿಳಿದುಕೊಳ್ಳುವ, ಪ್ರೇರಣೆ ನೀಡುವಂತಿರುವ ವಿಧಾನಗಳನ್ನು ಆ ಮಾದರಿಯಲ್ಲಿ ಅಳವಡಿಸಲಾಗಿತ್ತು. ಆದರೂ ತರಬೇತಿಯಲ್ಲಿ ಭಾಗವಹಿಸಿದವರಲ್ಲಿ ಪರಿಣಾಮ ತೋರಿಸಿಕೊಡುವ ರೀತಿಯಲ್ಲಿ ಮತ್ತು ಸ್ಪಷ್ಟವಾಗಿ ಆಗಿತ್ತು; ಉದ್ದೇಶಿತ ಪರಿಣಾಮ ಬೀರಿದಂತಿತ್ತು. ಅನಂತರ ರಾಜ್ಯದ ಬೇರೆ ಬೇರೆ ಜಿಲ್ಲೆ ಹಾಗೂ ತಾಲೂಕುಗಳಲ್ಲಿ ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಮತ್ತು ತಹಶೀಲ್ದಾರರ ಆಮಂತ್ರಣದ ಮೇರೆಗೆ ಜೀವಿಕದ ಕಾರ್ಯಕರ್ತರು ಅಂತಹ ತರಬೇತಿಗಳನ್ನು ನಡೆಸಿಕೊಟ್ಟರು.

ಐವರು ಉನ್ನತ ಮಟ್ಟದ ಸರ್ಕಾರಿ ಅಧಿಕಾರಿಗಳ ಆದರ್ಶವನ್ನು ಇಲ್ಲಿ ಉಲ್ಲೇಖಿಸಲಾಗಿದೆ. ಒಬ್ಬ ಅಧಿಕಾರಿಗೆ ಸೂಕ್ತ ಸಂವೇದನೆ ಮತ್ತು ಕಾಳಜಿ ಇದ್ದರೆ ಜೀತದಾಳುಗಳ ಪರವಾಗಿ ಅವರು ಏನೇನು ಸಾಧಿಸಬಹುದು ಎಂದು ಅವರ ನಿಲುವುಗಳೂ ಸಾಧನೆಗಳೂ ತೋರಿಸಿಕೊಡುತ್ತವೆ. ಶ್ರೀ ಎಸ್. ಆರ್. ಶಂಕರನ್, ಶ್ರೀ ಸಯ್ಯದ್ ಜಮೀರ್ ಪಾಶ, ಶ್ರೀ ಎಲ್. ಕೆ. ಅತಿಕ್, ಶ್ರೀ ಕೆ. ಆರ್. ವೇಣುಗೋಪಾಲ್ ಮತ್ತು ಈ ಕೈಪಿಡಿಗೆ ಪ್ರೋತ್ಸಾಹದಾಯಕ ಮುನ್ನುಡಿ ಬರೆದಿರುವ ಡಾ. ಲಕ್ಷ್ಮೀಧರ್ ಮಿಶ್ರಾರವರು ಆ ಗಣ್ಯವ್ಯಕ್ತಿಗಳು.

ಶ್ರೀ ಎಸ್. ಆರ್. ಶಂಕರನ್‌ರವರು ಜೀತದಾಳುಗಳ ಬಗ್ಗೆ ತಮಗಿರುವ ಜವಾಬ್ದಾರಿಯನ್ನು ಅರಿತು ಆಂಧ್ರ ಪ್ರದೇಶದ ಜೀತದಾಳುಗಳನ್ನು ಗುರುತಿಸಲು ಹೊಸ ಪರಂಪರೆಯನ್ನು ಸೃಷ್ಟಿಸುವ ರೀತಿಯಲ್ಲಿ ಉತ್ತಮ ಮಾರ್ಗದರ್ಶನಗಳನ್ನು ರೂಪಿಸಿದರು. ದಲಿತರು ಮತ್ತು ಆದಿವಾಸಿ ಜನರ ಪರಿಸ್ಥಿತಿಗೆ ಅವು ಪ್ರಸ್ತುತವಾಗಿರುವುದರಿಂದಲೇ ಆಂಧ್ರ ಪ್ರದೇಶದ ಹೊರಗೂ ಮತ್ತು ಈಗಲೂ ಅವು ಅನ್ವಯಿಸುತ್ತವೆ. ಕರ್ನಾಟಕ ಸರ್ಕಾರವು ರಾಜ್ಯದ ಅಧಿಕಾರಿಗಳು ಅವನ್ನೇ ಅನುಸರಿಸಬೇಕೆಂದು 1999ರಲ್ಲಿ ಆದೇಶ ಹೊರಡಿಸಿದೆ.

ಶ್ರೀ ಎಲ್. ಕೆ. ಅತಿಕ್‌ರವರು ತಮ್ಮ ಜಿಲ್ಲೆಯಲ್ಲಿಯ ಜೀತದ ಒಂದು ವಿಶಿಷ್ಟ ಪ್ರಕರಣದ ಬಗ್ಗೆ ತೆಗೆದುಕೊಂಡ ತೀರ್ಮಾನವು ಗೊಂದಲಮಯ ಸಂದರ್ಭದಲ್ಲಿ ಜೀತದ ಬಗ್ಗೆ ಸರಿಯಾದ ಗ್ರಹಿಕೆ ಹಾಗೂ ದೃಷ್ಟಿಕೋನ ಇರುವ ಅಧಿಕಾರಿಯು ಯಾವ ರೀತಿಯ ನಿರ್ಧಾರ ತೆಗೆದುಕೊಳ್ಳಬಹುದು ಎಂಬುದಕ್ಕೆ ಒಂದು ಉತ್ತಮ ನಿದರ್ಶನ. ಪ್ರಸ್ತುತ ಪ್ರಕರಣವು ಗೊಂದಲಮಯವಾಗಿದ್ದು ಅದು ಜೀತದ ವ್ಯಾಖ್ಯಾನಕ್ಕೆ ಒಳಗಾಗಿದೆಯೇ ಎಂದು ತೀರ್ಮಾನಿಸಲು ಕಷ್ಟಕರವಾಗಿತ್ತು. ಅದರ ವಿವರಗಳು ಹೀಗಿವೆ: ಕೆಲವು ದಿನ ನಿತ್ಯದ ಕೂಲಿಗಾರರು ದಿನಗೂಲಿಗಾಗಿ ಅದೇ ಯಜಮಾನನ ಹತ್ತಿರ ದಿನಾಲೂ ಕೂಲಿ ಮಾಡುವ 'ನಿರ್ಬಂಧ'ವಿತ್ತು. 2000 ಇಸ್ವಿಯಲ್ಲಿ ಅವರ ದಿನಗೂಲಿ 20 ರೂಪಾಯಿಯಾಗಿದ್ದರೆ ಅದೇ ಯಜಮಾನನಲ್ಲಿ ಕೆಲಸ ಮಾಡುವ ಇನ್ನಿತರ ದಿನಗೂಲಿಗಳ ದಿನಗೂಲಿ ೪೦ ರೂಪಾಯಿಯಾಗಿತ್ತು. ಈ ವ್ಯತ್ಯಾಸಕ್ಕೆ ಕಾರಣ 20 ರೂಪಾಯಿ ದಿನಗೂಲಿ ಪಡೆಯುತ್ತಿದ್ದವರು ಯಜಮಾನನಿಂದ ಸಾಲ ಪಡೆದಿದ್ದರು. ಯಾವುದೇ ದಿನಗೂಲಿಯಂತೆ ಅವರ ಕೆಲಸ ಬೆಳಿಗ್ಗೆಯಿಂದ ಸಂಜೆ ತನಕ ಸುಮಾರು ಎಂಟು ಗಂಟೆಯಷ್ಟು. ಹಗಲು ರಾತ್ರಿ ಎನ್ನದೇ ಯಜಮಾನನು ಹೇಳಿದ ಕೆಲಸ ಮಾಡಲು ಸಿದ್ಧರಿರಬೇಕಾದ ಯಥಾಪ್ರಕಾರದ ಜೀತದಾಳುಗಳ ಹಾಗೆ ಕೆಲಸ ಮಾಡುವ ಬದಲು ಕೆಲವು ನಿರ್ದಿಷ್ಟ ತಾಸು ಅವರು ಕೆಲಸ ಮಾಡುತ್ತಿದ್ದರಿಂದ ಅವರು ಜೀತದಾಳುಗಳಲ್ಲ ಎಂದು ಒಮ್ಮೆಲೆ ಅನಿಸುತ್ತಿತ್ತು. ಆದರೆ ಒಬ್ಬನೇ ಯಜಮಾನನಿಗೆ ಅರ್ಧಕ್ಕೆ ಅರ್ಧದಷ್ಟು ದಿನಗೂಲಿಗೆ ಕೂಲಿ ಮಾಡುವ ನಿರ್ಬಂಧ ಅವರ ಮೇಲೆ ಇತ್ತು. ಕಾನೂನು ಪ್ರಕಾರ ಇದು ಕೂಡ ಜೀತವೆಂದು ಶ್ರೀ ಅತಿಕ್‌ರವರು ಯಾವುದೇ ಅನಿಶ್ಚಿತತೆ

ಜೀತಪದ್ಧತಿ ಮತ್ತು ಜೀತದಾಳುಗಳನ್ನು ಗುರುತಿಸುವ ತರಬೇತಿ ಕೈಪಿಡಿ

ಪೀಠಿಕೆ: ಕಿರಣ ಕಮಲ ಪ್ರಸಾದ

ವ್ಯಕ್ತಪಡಿಸದೇ ಸ್ಪಷ್ಟವಾದ ನಿಲುವನ್ನು ಜಿಲ್ಲಾ ಜಾಗೃತಿ ಸಮಿತಿಯಲ್ಲಿ ತಾಳಿದರು.

ಶ್ರೀ ಸಯ್ಯದ್ ಜಮೀರ್ ಪಾಶಾರವರ ಉದಾಹರಣೆ ಕೂಡ ಉಲ್ಲೇಖನೀಯವಾಗಿದೆ. ತಮ್ಮ ಜವಾಬ್ದಾರಿಯನ್ನು ನ್ಯಾಯಯುತವಾಗಿ ನಡೆಸಲು ಮತ್ತು ಅತಂತ್ರ ಬದುಕಿನ ಜೀತದಾಳುಗಳಿಗೆ ಪರಿಹಾರ ನೀಡಲು ಅಧಿಕಾರಿಗಳನ್ನು ಸಂವೇದನಾಶೀಲರನ್ನಾಗಿಸುವಂತೆ ಅವರಿಗೆ ಜೀತ ಕಾನೂನು ಬಗ್ಗೆ ಮತ್ತು ಜೀತದಾಳುಗಳನ್ನು ಸರಿಯಾದ ರೀತಿಯಲ್ಲಿ ಗುರುತಿಸುವುದರ ಬಗ್ಗೆ ಅವರಿಗೆ ತರಬೇತಿಗಳನ್ನು ನಡೆಸಿಕೊಳ್ಳುವ ಅಗತ್ಯವನ್ನು ಮನಗಂಡು ಮೇಲಾಧಿಕಾರಿಗಳು ಯಾವುದೇ ಸೂಚನೆ ನೀಡದಿದ್ದರೂ ತಮ್ಮ ಕೈಕೆಳಗಿನ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳು ಸೂಕ್ತ ತರಬೇತಿ ಪಡೆಯುವ ವ್ಯವಸ್ಥೆ ಮಾಡಿದರು. ಆದರೆ ತರಬೇತಿ ಪಡೆದ ಅಧಿಕಾರಿಗಳು ಮೊದಲ ಸುತ್ತಿನಲ್ಲಿ ಸುಮಾರು 1900 ಜೀತದಾಳುಗಳನ್ನು ಇಡಿ ಜಿಲ್ಲೆಯಲ್ಲಿ ಗುರುತಿಸಿದರೂ-ಬರಗಾಲ ಪೀಡಿತ ಹಿಂದುಳಿದ 11 ತಾಲೂಕುಗಳನ್ನೊಳಗೊಂಡ ದೊಡ್ಡ ಜಿಲ್ಲೆಗೆ ಈ ಸಂಖ್ಯೆ ಅತಿರೇಕದ್ದಲ್ಲ- ಎರಡನೇ ಸುತ್ತಿನ ತನಿಖೆಯನ್ನು ತರಬೇತಿಯಾಗದ ಅಧಿಕಾರಿಗಳಿಂದ ನಡೆಸಿ ಆ ಸಂಖ್ಯೆಯನ್ನು 370ಕ್ಕೆ ತಂದಿಳಿಸಿರುವುದು ಇನ್ನೊಂದು ವಿಷಯ.

ಜೀತ ಪದ್ಧತಿಯ ನಿರ್ಮೂಲನೆಯಲ್ಲಿ ಶ್ರೀ ಕೆ. ಆರ್. ವೇಣುಗೋಪಾಲರವರ ಪಾತ್ರವನ್ನೂ ಸ್ಮರಿಸಬೇಕಾಗಿದೆ. ಅವರು ಪ್ರಧಾನ ಮಂತ್ರಿಗಳ ಕಾರ್ಯದರ್ಶಿಯಾಗಿ ನಿವೃತ್ತಗೊಂಡಿದ್ದರು. ಸರ್ವೋಚ್ಚ ನ್ಯಾಯಾಲಯವು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗಕ್ಕೆ ಜೀತ ಪದ್ಧತಿ ರದ್ದತಿ ಅಧಿನಿಯಮವನ್ನು ದೇಶದಲ್ಲಿ ಅನುಷ್ಠಾನಗೊಳಿಸುವ ನಿರ್ವಹಣೆಯನ್ನು ೧೯೯೬ರಲ್ಲಿ ವಹಿಸಿದಾಗಿನಿಂದ ೨೦೦೬ರ ವರೆಗೆ ಶ್ರೀಯುತರು ಆಯೋಗದಲ್ಲಿ ಜೀತದ ಕುರಿತು ವಿಶೇಷ ವರದಿಗಾರರಾಗಿದ್ದು, ಆಯೋಗದಲ್ಲಿ ಮತ್ತು ಕರ್ನಾಟಕವನ್ನೊಳಗೊಂಡಂತೆ ದಕ್ಷಿಣ ಭಾರತದ ರಾಜ್ಯಗಳಲ್ಲಿ ಜೀತ ಪದ್ಧತಿ ನಿರ್ಮೂಲನೆ ಕುರಿತು ಅಗತ್ಯವಾಗಿ ಅಳವಡಿಸಬೇಕಾಗಿರುವ ಸಾಂಸ್ಥಿಕ ವ್ಯವಸ್ಥೆಗಳನ್ನು ರೂಪಿಸಲು ಪ್ರಯತ್ನಪಟ್ಟಿದ್ದಾರೆ. ಅದಕ್ಕೆ ೨೦೦೧ರಲ್ಲಿ ಆಯೋಗಕ್ಕೆ ಪರಿಣತರ ಗುಂಪೊಂದು ಸಲ್ಲಿಸಿದ ವರದಿ ಮತ್ತು ೨೦೦೩ರಲ್ಲಿ ಬೆಂಗಳೂರಿನಲ್ಲಿ ಜರುಗಿದ ಎರಡು ದಿನಗಳ ಪರಿಣಾಮವಾಗಿ ಕರ್ನಾಟಕ ಸರ್ಕಾರ ಹಾಗೂ ಆಯೋಗವು ಹೊರತಂದ ಶಿಫಾರಸುಗಳೇ ಸಾಕ್ಷಿ.

1976ರ ಜೀತಪದ್ಧತಿ ರದ್ದತಿ ಕಾನೂನು ಪರಿಣಾಮಕಾರಿಯಾಗಿ ಅನುಷ್ಠಾನಗೊಳ್ಳುವಂತೆ ಇರಬೇಕಾದ ವ್ಯವಸ್ಥೆಗಳನ್ನು ರೂಪಿಸುವಲ್ಲಿ ಡಾ. ಲಕ್ಷ್ಮೀಧರ್ ಮಿಶ್ರಾರವರ ಪಾತ್ರ ಅನುಕರಣೀಯವಾಗಿದೆ. ತಾವು ಕೇಂದ್ರೀಯ ಕಾರ್ಮಿಕ ಇಲಾಖೆಯಲ್ಲಿ ಸುಧೀರ್ಘ ಕಾಲ ಸೇವೆ ಸಲ್ಲಿಸಿದ್ದ ಅವಧಿಯಲ್ಲಿ ಅವರು ಜೀತ ನಿರ್ಮೂಲನೆ ಬಗ್ಗೆ ಅತೀವ ಆಸ್ಥೆ ವಹಿಸಿದ್ದರು. ಜೀತದಾಳುಗಳ ಗುರುತಿಸುವಿಕೆ, ಬಿಡುಗಡೆ ಮತು ಪುನರ್ವಸತಿಗೆ ಸೂಕ್ತ ಮಾರ್ಗದರ್ಶನಗಳನ್ನೂ ಯೋಜನೆಗಳನ್ನೂ ಕಾರ್ಯಕ್ರಮಗಳನ್ನು ರೂಪಿಸಿದ್ದು ಮಾತ್ರವಲ್ಲದೇ ಅವು ಕಾರ್ಯಗತಗೊಳ್ಳುತ್ತಿವೆಯೇ ಎಂದು ನೋಡಿಕೊಂಡರು. ಅದಕ್ಕೋಸ್ಕರ ನಿರಂತರವಾಗಿ ಸೂಕ್ತ ಸುತ್ತೋಲೆ, ಆದೇಶಗಳನ್ನು ಹೊರಡಿಸುತ್ತಿದ್ದುದು ಮಾತ್ರವಲ್ಲದೆ ಸ್ವತಃ ಕ್ಷೇತ್ರಗಳಿಗೆ ಭೇಟಿಕೊಟ್ಟು ಕಾರ್ಯಕ್ರಮಗಳ ಅನುಸರಣೆ ಬಗ್ಗೆ ಸ್ಪಷ್ಟ ಮಾಹಿತಿ ಪಡೆದು ಮುಂದಿನ ಕ್ರಮ ತಗೆದುಕೊಳ್ಳುತ್ತಿದ್ದರು.

ಈ ಮೇಲಿನ ಉದಾಹರಣೆಗಳು ತೋರಿಸುವುದೇನೆಂದರೆ ಜೀತದಾಳುಗಳ ಉದ್ಧಾರಕ್ಕೆ ಮತ್ತು ಜೀತ ಪದ್ಧತಿಯ ನಿರ್ಮೂಲನೆಗೆ ಒಬ್ಬ ಕಾಳಜಿಯುಳ್ಳ ಅಧಿಕಾರಿಯು ಮಾಡಬಹುದಾದ ಕೆಲಸಗಳಿಗೆ ಮಿತಿಯಿಲ್ಲ.

2000ದಲ್ಲಿ ತಯಾರಿಸಿದ ತರಬೇತಿ ಮಾದರಿಯನ್ನು ವಿಸ್ತತಗೊಳಿಸಿ ಇಲ್ಲಿ ಸಾಕಾರಗೊಳಿಸಿದೆ. ತರಬೇತಿಯಲ್ಲಿ ಹೆಚ್ಚು ಮಂದಿಯು ಭಾಗವಹಿಸುವ ಅಗತ್ಯ ಇದೆ. ಜೊತೆಗೆ ಆದಷ್ಟು ಕಡಿಮೆ ಅವಧಿಯಲ್ಲಿ ಅದನ್ನು ನಡೆಸಿಕೊಳ್ಳಬೇಕಾದ ಅನಿವಾರ್ಯತೆಯೂ ಇದೆ. ಈ ಮಿತಿಗಳಲ್ಲಿಯೂ ತರಬೇತಿಯು ವ್ಯಕ್ತಿಗತವಾಗಿ ಪರಿಣಾಮ ಬೀರುವಂತೆ ಮಾಡಲು ಪರಸ್ಪರ ಚಟುವಟಿಕೆಗಳ


ಮೂಲಕ ಸ್ವಂತ ಗ್ರಹಿಕೆಗೆ ಅವಕಾಶ ಮಾಡಿಕೊಡುವ ರೀತಿಯಲ್ಲಿ ಕೆಲವೊಂದು ವಿಧಾನಗಳನ್ನು ಸೂಚಿಸಲಾಗಿದೆ: ಗುಂಪು ಚರ್ಚೆ, ಪ್ರಶ್ನೆ ಕೇಳುವುದು, ಓದುವುದು, ಪಾತ್ರಾಭಿನಯ, ಇತ್ಯಾದಿ. ಇಡಿ ತರಬೇತಿಯ ವಿನ್ಯಾಸವನ್ನು ಒಂದು ಕೋಷ್ಟಕದಲ್ಲಿ ಒದಗಿಸಲಾಗಿದೆ. ತರಬೇತಿಯಲ್ಲಿ ಕೆಲವು ಘಟಕಗಳಿದ್ದು, ತರಬೇತಿದಾರರು ಮತ್ತು ಭಾಗವಹಿಸುವವರಿಗೆ ಅವಶ್ಯಕವಿರುವ ವಿಚಾರಗಳನ್ನು ಕೋಷ್ಟಕದ ನಂತರ ಪ್ರತಿ ಘಟಕಕ್ಕೆ ಸಂಬಂಧಿಸಿದಂತೆ ಮತ್ತು ಆಯಾ ಘಟಕಕ್ಕೆ ಬಳಸುವ ರೀತಿಯಲ್ಲಿ ಸಿದ್ಧಪಡಿಸಲಾಗಿದೆ. ತರಬೇತಿಯ ಚೌಕಟ್ಟಿನಲ್ಲಿ 10 ರಿಂದ 45 ನಿಮಿಷಗಳವರೆಗಿನ ಒಟ್ಟು 14 ಘಟಕಗಳಿದ್ದು ಒಟ್ಟು ತರಬೇತಿಯು ಆರು ಗಂಟೆ ತನಕ ನಡೆಯುವುದು. ಸಂದರ್ಭಕ್ಕನುಗುಣವಾಗಿ ಪ್ರತಿ ಘಟಕದ ಅವಧಿಯನ್ನು ವಿಸ್ತರಿಸಬಹುದು ಅಥವಾ ಮೊಟಕುಗೊಳಿಸಬಹುದು; ಕೆಲವು ಘಟಕಗಳನ್ನು ತೆಗೆದು ಹಾಕಬಹುದು.

ಈ ತರಬೇತಿ ಮಾದರಿಯನ್ನು ಮುಖ್ಯವಾಗಿ ಜೀತದಾಳುಗಳನ್ನು ಗುರುತಿಸುವಲ್ಲಿ ತೊಡಗಿರುವ ಅಧಿಕಾರಿಗಳು ಮತ್ತಿತರ ವ್ಯಕ್ತಿಗಳಿಗೆ ಉಪಯೋಗವಾಗುವಂತೆ ಸಿದ್ಧಪಡಿಸಲಾಗಿದೆ. ಜೀತದಾಳುಗಳಿಗೂ ತರಬೇತಿಯ ಅವಶ್ಯಕತೆ ಇದೆ. ಆದರೆ ಅವರ ಪರಿಸ್ಥಿತಿಗೆ ಅನ್ವಯವಾಗುವಂತೆ ಬೇರೆ ತರಹದ ತರಬೇತಿ ಮಾದರಿಯನ್ನು ಯೋಜಿಸಬೇಕಾಗುತ್ತದೆ ಅಥವಾ ಈ ಮಾದರಿಯಲ್ಲಿ ಸೂಕ್ತವಾದ ಬದಲಾವಣೆ ತರಬೇಕಾಗುತ್ತದೆ. ಜೀತದಾಳುಗಳ ಪರವಾಗಿ ಕೆಲಸ ನಿರ್ವಹಿಸುವವರ ಮೇಲೆ ಈ ತರಬೇತಿಯಿಂದ ಆಗಬೇಕಾದ ಪರಿಣಾಮವೇನೆಂದರೆ ಸಂಬಂಧಪಟ್ಟ ವಿಷಯಗಳ ಬಗ್ಗೆ ಸರಿಯಾದ ಮತ್ತು ಸ್ಪಷ್ಟ ಜ್ಞಾನವನ್ನು ಅತ್ಯಂತ ಕಡಿಮೆ ಅವಧಿಯಲ್ಲಿ ಪಡೆಯುವುದು ಮತ್ತು ಜೀತ ಪದ್ಧತಿ ನಿರ್ಮೂಲನೆಗೆ ಅಗತ್ಯವಿರುವ ದೃಷ್ಟಿಕೋನಗಳನ್ನು ರೂಪಿಸುವುದು ಆಗಿದೆ. ಡಾ. ಮಿಶ್ರಾರವರು ಮುನ್ನುಡಿಯಲ್ಲಿ ಅಧಿಕಾರಿಗಳಿಗೆ ನೀಡುವ ತರಬೇತಿಯ ಫಲಿತಾಂಶದ ಬಗ್ಗೆ ಸುಸ್ಪಷ್ಟವಾಗಿ ವಿಶಾದಪಡಿಸಿದ್ದಾರೆ.

ಈ ತರಬೇತಿ ಕೈಪಿಡಿಯ ಮೊದಲ ಆವೃತ್ತಿಯನ್ನು ಕರ್ನಾಟಕದಲ್ಲೆಡೆಯ ಸರಕಾರಿ ಅಧಿಕಾರಿಗಳಿಗೆ ತರಬೇತಿ ನೀಡಲು ಜೀವಿಕ ಕಾರ್ಯಕರ್ತರು 2000 ಮತ್ತು 2001ರಲ್ಲಿ ಬಳಸಿದ್ದರು. ಈ ಆವೃತ್ತಿಯು ಅವರಲ್ಲಿ ಇನ್ನೂ ಪರಿಣಾಮಕಾರಿಯಾಗಿ ಬಳಸಲಿದ್ದಾರೆ. ಜೊತೆಗೆ 2007 ಜುಲೈಯಲ್ಲಿ ಅಸ್ತಿತ್ವಕ್ಕೆ ಬಂದ ಜೀತ ಕುರಿತು ರಾಷ್ಟ್ರೀಯ ಸಮನ್ವಯ (NABoL)ದ ಸದಸ್ಯರಿಗೂ ಜೀತ ಕುರಿತು ಕೆಲಸ ಮಾಡುವ ಮತ್ತಿತರ ಕಾರ್ಯಕರ್ತರಿಗೂ ಅದು ಬಹಳ ಉಪಯೋಗವಾಗಬಹುದು.


ಈ ಕೈಪಿಡಿಗೆ ಸ್ಫೂರ್ತಿದಾಯಕ ಮುನ್ನುಡಿ ಬರೆದ ಡಾ।। ಮಿಶ್ರಾರವರಿಗೆ ನಾನು ಆಭಾರಿಯಾಗಿದ್ದೇನೆ. ಮುದ್ರಣದ ವೆಚ್ಚ ಭರಿಸಿದ 'ಹಿವೊಸ್-ಬೆಂಗಳೂರು' ಸಂಸ್ಥೆಯವರಿಗೆ, ಹಾಗೆಯೇ ಈ ಕೈಪಿಡಿಗೆ ಅರ್ಥಪೂರ್ಣ ಮುಖಪುಟವನ್ನು ರಚಿಸಿ, ಕೈಪಿಡಿಯ ವಿನ್ಯಾಸವನ್ನು ರೂಪಿಸಿ, ಮುದ್ರಣದ ಹೊರೆಯನ್ನು ಹೊತ್ತ ಡಾ. ಟಿ.ಎಸ್. ವಿವೇಕಾನಂದ ಇವರಿಗೆ, ಜೊತೆಗೆ ಈ ಪುಸ್ತಕದ ಅಕ್ಷರ ಜೋಡಣೆಯ ಕೆಲಸವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ ಎಂ. ಮಂಜುಳ ಹಾಗೂ ಟಿ. ಜಲಜಾಕ್ಷಿಯವರಿಗೂ ನನ್ನ ತುಂಬು ಹೃದಯದ ಕೃತಜ್ಞತೆಗಳು.


26-01-2008 **ಕಿರಣ ಕಮಲ ಪ್ರಸಾದ**



ಜೀತ ನಿರ್ಮೂಲನೆ- ಜಾಗೃತಿ/ಪ್ರಚಾರ ಸಾಧನಗಳು

ಪುಟ: 18/20/24/38/47/58/61/62/66 ಹಾಗೂ 68ರಲ್ಲಿ





ಜೀತಪದ್ಧತಿ ಮತ್ತು ಜೀತದಾಳುಗಳನ್ನು ಗುರುತಿಸುವ ಕುರಿತು ಒಂದು ತರಬೇತಿ

ಘಟಕ	ಚಟುವಟಿಕೆ	ಉದ್ದೇಶಗಳು	ವಿಷಯ	ಸಮಯ
I	ಪರಸ್ಪರ ವಿನಿಮಯ*	ತರಬೇತಿಯ ಒಟ್ಟಾರೆ ಪರಿಚಯ; ಸ್ವ ಪರಿಚಯ	ತರಬೇತಿಯ ಉದ್ದೇಶ ಮತ್ತು ವಿಧಾನ; ಭಾಗವಹಿಸುವವರ ನಿರೀಕ್ಷೆಗಳು; ಚುಟುಕಾಗಿ ಸ್ವ ಪರಿಚಯ	15 ನಿಮಿಷ
II	ಅನಿಸಿಕೆಗಳನ್ನು ಬರೆಯುವುದು ಮತ್ತು ಚರ್ಚಿಸುವುದು	ಜೀತದ ಬಗೆಗಿನ ಸ್ವ ಅನಿಸಿಕೆಗಳ ಆಧಾರದ ಮೇಲೆ ಸರಿಯಾದ ಅಭಿಪ್ರಾಯಗಳನ್ನು ಪಡೆಯಲು ಪೀಠಿಕೆ ಹಾಕುವುದು	ಪ್ರತಿಯೊಬ್ಬರು ಮುಂದಿನ ಪ್ರಶ್ನೆಗಳಿಗೆ ಉತ್ತರ ಬರೆಯುವರು: ಜೀತದಾಳು ಅಂದರೆ ಯಾರು? ಜೀತ ಪದ್ಧತಿ ಅಂದರೆ ಏನು? ನಂತರ 5-5 ಮಂದಿಯ ಗುಂಪುಗಳಲ್ಲಿ ಬರೆದ ವಿಚಾರಗಳ ಚರ್ಚೆ. ಚರ್ಚೆ ಆದ ಮೇಲೆ ಕೆಲವರಿಂದ ಅವರ ಉತ್ತರಗಳನ್ನು ಓದಿಸುವುದು. ಬಂದ ಅಭಿಪ್ರಾಯಗಳನ್ನು ಕ್ರೋಢೀಕರಿಸುವುದು ಮತ್ತು ಜೀತದ ಬಗೆಗಿನ ಸರಿಯಾದ ಅಭಿಪ್ರಾಯಗಳ ಕುರಿತು ಪ್ರಾಥಮಿಕ ಪ್ರಸ್ತಾವನೆ	30 ನಿಮಿಷ
III	ಹಾಡುಗಳು*	ಜೀತದ ಕುರಿತು ಭಾವನಾತ್ಮಕವಾದ ಪರಿಣಾಮ ಬೀರಿಸುವುದು.	ಜೀತದ ಕುರಿತು ಜಾಗೃತಿ ಹಾಡುಗಳು	15 ನಿಮಿಷ
IV	ಓದುವಿಕೆ ಮತ್ತು ಚರ್ಚೆ	ಜೀತ ನಿರ್ಮೂಲನೆಗೆ ಇರುವ ಮೂಲ ಪ್ರೇರಣೆಯನ್ನೂ ಅದರ ಮಹತ್ವವನ್ನೂ ಮನದಟ್ಟುಮಾಡಿ ಕೊಳ್ಳುವುದು	ಭಾರತದ ಸಂವಿಧಾನ: ಪೀಠಿಕೆ: ಭಾಗ III: ಮೂಲಭೂತ ಹಕ್ಕುಗಳು: ಅನುಚ್ಛೇದ 14-35; 17, 23, 24; ಭಾಗ IV: ರಾಜ್ಯಾಂಗದ ನಿರ್ದೇಶಕ ತತ್ವಗಳು: ಅನುಚ್ಛೇದ 38,39,41-43 & 47	30 ನಿಮಿಷ
V	ವಿವರ ನೀಡುವಿಕೆ, ಓದುವಿಕೆ ಮತ್ತು ಚರ್ಚೆ	ಕಾನೂನನ್ನು ಜಾರಿಗೊಳಿಸಿದ ಸಂದರ್ಭ ಹಾಗೂ ಅದನ್ನು ಅನುಷ್ಠಾನಗೊಳಿಸಿದ ರೀತಿಗಳನ್ನು	ಜೀತ ಪದ್ಧತಿ ರದ್ದತಿ ಅಧಿನಿಯಮವನ್ನು ಜ್ಯಾರಿಗೊಳಿಸಿರುವ ಕುರಿತು ಹಿನ್ನೆಲೆ ಅಧಿನಿಯಮವನ್ನು ಭಾರತ ಮತ್ತು ಕರ್ನಾಟಕದಲ್ಲಿ/ಇತರ ರಾಜ್ಯಗಳಲ್ಲಿ ಅನುಷ್ಠಾನಗೊಳಿಸಿದ ರೀತಿ	30 ನಿಮಿಷ

ಘಟಕ	ಚಟವಟಿಕೆ	ಉದ್ದೇಶಗಳು	ವಿಷಯ	ಸಮಯ
		ಅರ್ಥಮಾಡಿಕೊಂಡು ಜೀತ ನಿರ್ಮೂಲನೆಗೆ ವಿಶೇಷ ಸಂವೇದನೆ ಮತ್ತು ರಾಜಕೀಯ ಇಚ್ಛೆಗಳ ಅತ್ಯವಶ್ಯಕತೆಯನ್ನು ಮನದಟ್ಟು ಮಾಡಿಸುವುದು.		
VI	ಓದುವಿಕೆ ಮತ್ತು ಚರ್ಚೆ	ಜೀತ ಪದ್ಧತಿ ರದ್ದತಿ ಅಧಿನಿಯಮವನ್ನು ಒಟ್ಟಾರೆ ಮತ್ತು ಬಹು ಮುಖ್ಯ ಅಂಶಗಳನ್ನೂ ಮಹತ್ವಪೂರ್ಣ ವಿಷಯಗಳನ್ನೂ ಅರ್ಥಮಾಡಿಕೊಂಡು ಜೀತಪದ್ಧತಿ ರದ್ದುಗೊಳಿಸುವಲ್ಲಿ ಸಂಸತ್ತು ತೋರಿಸಿದ ಪ್ರಾಮುಖ್ಯತೆ ಮತ್ತು ಭಾರತೀಯ ಸಮಾಜದ ಅತ್ಯಂತ ನಿಕೃಷ್ಟ ಜನವರ್ಗಗಳಲ್ಲೊಂದಾದ ಜೀತ ದಾಳುಗಳಿಗೆ ನ್ಯಾಯ ಒದಗಿಸಲು ಕಾಳಜಿ ಇರುವ ಅಧಿಕಾರಿಗಳಿಗೆ ಲಭ್ಯವಿರುವ ಅವಕಾಶಗಳ ಮನವರಿಕೆ ಮಾಡುವುದು	ಜೀತ ಪದ್ಧತಿ ರದ್ದತಿ ಅಧಿನಿಯಮವನ್ನು : ಒಂದು ಪಕ್ಷಿನೋಟ ಪೀಠಿಕೆ: ಉದ್ದೇಶಗಳು ಮತ್ತು ಕಾರಣಗಳು ಅಧ್ಯಾಯI: Ss. 1,2: ಶೀರ್ಷಿಕೆ ಮತ್ತು ವ್ಯಾಖ್ಯಾನಗಳು S. 3: ಈ ಅಧಿನಿಯಮಕ್ಕೆ ವಿರುದ್ಧವಾಗಿ ಬೇರೆ ಅಧಿನಿಯಮಗಳಲ್ಲಿ ಏನಾದರೂ ಉಲ್ಲೇಖವಾಗಿದ್ದರೆ ಅದು ಊರ್ಜಿತವಲ್ಲ. II ಜೀತ ಪದ್ಧತಿಯ ನಿರ್ಮೂಲನೆ: Ss. 4-5 III ಜೀತಸಾಲವನ್ನು ಮರುಪಾವತಿಸಬೇಕಾಗಿಲ್ಲ: Ss. 6-9 S. 8 ಜೀತದಾಳುವಿಗೆ ನೀಡಿದ ಹೊಲಮನೆಯಿಂದ ಆತನನ್ನು ತೆರವುಗೊಳಿಸ ಲಾಗದು. IV ಅನುಷ್ಠಾನಗೊಳಿಸುವ ಅಧಿಕಾರಿಗಳು: Ss. 10-12 V ಜಾಗೃತಿ ಸಮಿತಿಗಳು: Ss. 13-14; S. 15 ರುಜುವಾತಿನ ಭಾರ ಮಾಲೀಕನ ಮೇಲೆ.	30 ನಿಮಿಷ

ಘಟಕ	ಚಟವಟಿಕೆ	ಉದ್ದೇಶಗಳು	ವಿಷಯ	ಸಮಯ
			VI ಅಪರಾಧ ಮತ್ತು ಶಿಕ್ಷೆಗಳು: Ss. 16-20; 21-23 S. 21: ಕಾರ್ಯನಿರ್ವಾಹಕ ದಂಡಧಿಕಾರಿಗಳಿಗೆ ನ್ಯಾಯಿಕ ದಂಡಾಧಿಕಾರಿಯ ಅಧಿಕಾರ; ವಿಚಾರಣೆ ಸಂಕ್ಷಿಪ್ತ ವಿಧಾನದಲ್ಲಿ S. 22 : ಸಂಜ್ಞೇಯ ಮತ್ತು ಜಾಮೀನೀಯ S. 23 : ಕಂಪೆನಿಗಳಲ್ಲಿಯ ಜೀತ VII ಇತರೆ : Ss. 24-27 S. 25 : ಸಿವಿಲ್ ನ್ಯಾಯಾಲಯಗಳು ವಿಚಾರಣೆ ಮಾಡುವಂತಿಲ್ಲ.	30 ನಿಮಿಷ
VII	ಓದುವಿಕೆ, ಚರ್ಚೆ ಮತ್ತು ವಿವರ ನೀಡುವಿಕೆ	ಕಾನೂನಿನಲ್ಲಿ ಅತ್ಯಂತ ಪ್ರಮುಖವೆನಿಸುವ ವಿಚಾರಗಳ (ಜೀತ ಕುರಿತು ವ್ಯಾಖ್ಯಾನಗಳ) ಅರ್ಥೈಸುವಿಕೆ.	ಕಾನೂನಿನಲ್ಲಿ ಜೀತ ಕುರಿತು ಇರುವ ವ್ಯಾಖ್ಯಾನಗಳು	30 ನಿಮಿಷ
VIII	ಓದುವಿಕೆ ಮತ್ತು ಚರ್ಚೆ	ಜೀತ ಕುರಿತು ಇರುವ ತಪ್ಪುಗ್ರಹಿಕೆ ಮತ್ತು ಪೂರ್ವಾಗ್ರಹ ಪೀಡಿತ ವಿಚಾರಗಳ ಪಟ್ಟಿಮಾಡಿ ಅವನ್ನು ಕಾನೂನು, ಉಚ್ಚ ನ್ಯಾಯಾಲಯಗಳ ತೀರ್ಪುಗಳು ಮತ್ತು ಅಧಿಕೃತ ವಿವರಣೆಗಳ ಬೆಳಕಲ್ಲಿ ಸರಿಪಡಿಸುವುದು.	ಜೀತದ ವ್ಯಾಖ್ಯಾನಗಳ ಕುರಿತು ಪ್ರಚಲಿತವಿರುವ ತಪ್ಪು ಗ್ರಹಿಕೆಗಳು; ಕಾನೂನಿನಲ್ಲಿ ಜೀತ ಕುರಿತು ಇರುವ ವ್ಯಾಖ್ಯಾನಗಳಿಗೆ ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳು, ಎ.ಕೆ. ಚಕ್ರವರ್ತಿ ಸಮಿತಿಯ ಶಿಫಾರಸುಗಳು ಮತ್ತಿತರ ಅಧಿಕೃತ ದಾಖಲೆಗಳಿಂದ ವಿವರಣೆ.	45 ನಿಮಿಷ

ಘಟಕ	ಚಟುವಟಿಕೆ	ಉದ್ದೇಶಗಳು	ವಿಷಯ	ಸಮಯ
IX	ಹಾಡುಗಳು*	ಜೀತ ಕುರಿತು ಪಡೆದ ಒಳನೋಟಗಳನ್ನು ಭಾವನಾತ್ಮಕವಾಗಿ ಬಲಪಡಿಸುವುದು	ಜೀತದ ಕುರಿತು ಜಾಗೃತಿ ಹಾಡುಗಳು	15 ನಿಮಿಷ
X	ಪಾತ್ರಾಭಿನಯ*	ಜೀತದಾಳುಗಳನ್ನು ಗುರುತಿಸುವಾಗ ಬಳಸುವ ತಪ್ಪು ಮತ್ತು ಸರಿಯಾದ ವಿಧಾನಗಳ ಕುರಿತು ಕಣ್ಣ ಮುಂದೆ ನಟನೆ ಮಾಡಿ, ಹೆಚ್ಚಿನ ಅಧಿಕಾರಿಗಳು ಬಳಸುವ ವಿಧಾನಗಳಲ್ಲಿಯ ನ್ಯೂನತೆಗಳನ್ನು ಅರ್ಥಮಾಡಿಕೊಂಡು ಸರಿಯಾದ ವಿಧಾನಗಳನ್ನು ಸುಲಭವಾಗಿ ಗ್ರಹಿಸುವುದು.	ಜೀತದಾಳುಗಳನ್ನು ಗುರುತಿಸುವಾಗ ಬಳಸುವ ತಪ್ಪು ಮತ್ತು ಸರಿಯಾದ ವಿಧಾನಗಳು	20 ನಿಮಿಷ
XI	ಓದುವಿಕೆ	ಜೀತದಾಳುಗಳನ್ನು ಗುರುತಿಸುವ ಸರಿಯಾದ ವಿಧಾನಕ್ಕೆ ಅಗತ್ಯವಿರುವ ವಿಷಯಗಳನ್ನು ಅರ್ಥಮಾಡಿಕೊಳ್ಳುವುದು.	ಜೀತದಾಳುಗಳನ್ನು ಗುರುತಿಸಲು ಎಸ್. ಆರ್. ಶಂಕರನ್‌ರವರು ಸಿದ್ಧಪಡಿಸಿದ ಮಾರ್ಗದರ್ಶಿಗಳು ಮತ್ತು ಅದರ ಕುರಿತು ಕರ್ನಾಟಕ ಸರ್ಕಾರದ ಸುತ್ತೋಲೆ.	30 ನಿಮಿಷ

ಘಟಕ	ಚಟವಟಿಕೆ	ಉದ್ದೇಶಗಳು	ವಿಷಯ	ಸಮಯ
XII	ವಿವರ ನೀಡುವಿಕೆ ಮತ್ತು ಚರ್ಚೆ	ಜೀತದಾಳುಗಳನ್ನು ಗುರುತಿಸುವ ಸರಿಯಾದ ವಿಧಾನಕ್ಕೆ ಅಗತ್ಯವಿರುವ ವಿಷಯುಗಳನ್ನು ಮನದಟ್ಟು ಮಾಡಿಕೊಳ್ಳುವುದು.	ಜೀತದಾಳುಗಳನ್ನು ಗುರುತಿಸಲು ಎಸ್. ಆರ್. ಶಂಕರನ್‌ರವರು ಸಿದ್ಧಪಡಿಸಿದ ಮಾರ್ಗದರ್ಶಿಗಳ ಕುರಿತು ವಿವರಣೆ. **ಕರ್ನಾಟಕ ಸರ್ಕಾರದ ಕ್ರಿಯಾ ಯೋಜನೆ - ಅಧ್ಯಾಯ 4**	30 ನಿಮಿಷ
XIII	ಚರ್ಚೆ	ಜೀತದಾಳುಗಳನ್ನು ಅಧಿಕೃತವಾಗಿ ಗುರುತಿಸುವಾಗ ಅನುಸರಿಸಬೇಕಾದ ಸಂಗತಿಗಳ ಅರ್ಥೈಸುವಿಕೆ	ಜೀತದಾಳುಗಳನ್ನು ಅಧಿಕೃತವಾಗಿ ಗುರುತಿಸುವಾಗ ಅನುಸರಿಸಬೇಕಾದ ಸಂಗತಿಗಳು. **ಕರ್ನಾಟಕ ಸರ್ಕಾರದ ಕ್ರಿಯಾ ಯೋಜನೆ - ಅಧ್ಯಾಯ 7. ಎ.ಕೆ. ಚಕ್ರವರ್ತಿ ಸಮಿತಿಯ ಶಿಫಾರಸುಗಳ ಸಾರಾಂಶ** ಮತ್ತು ಅದರ ಕುರಿತು ಕರ್ನಾಟಕ ಸರ್ಕಾರದ ಸುತ್ತೋಲೆ.	30 ನಿಮಿಷ
X IV	ಹಾಡುಗಳು*	ಕಾನೂನಿಗೆ ಬದ್ಧವಾಗಿ ಮತ್ತು ಜೀತದಾಳುಗಳಿಗೆ ನ್ಯಾಯ ದೊರಕಿಸುವ ರೀತಿಯಲ್ಲಿ ಕೆಲಸ ಮಾಡಲು ನಿರ್ಧಾರ ತೆಗೆದು ಕೊಳ್ಳುವಂತೆ ಪರಿಣಾಮ ಬೀರುವುದು.	ಜೀತದ ಕುರಿತು ಜಾಗೃತಿ ಹಾಡುಗಳು	10 ನಿಮಿಷ

* ವ್ಯವಸ್ಥೆಮಾಡಲು ಆಗದಿದ್ದಲ್ಲಿ ಬಿಟ್ಟುಬಿಡಬಹುದು

ಜೀತಪದ್ಧತಿ ಮತ್ತು ಜೀತದಾಳುಗಳನ್ನು ಗುರುತಿಸುವ ತರಬೇತಿ ಕೈಪಿಡಿ

ಜೀತಗಾರರೇ ಇದನ್ನು ಗಮನಿಸಿ..., ನಿಮ್ಮ ಬಿಡುಗಡೆಗೆ ಯತ್ನಿಸಿ

ಜೀತ ಬಿಡುಗಡೆ ಹೇಗೆ?!


"ಜೀತದಾಳು ತನ್ನ ವ್ಯಾಪ್ತಿಯಲ್ಲಿ ಬರುವ ಗ್ರಾಮ ಪಂಚಾಯತಿ ಕಾರ್ಯದರ್ಶಿಗೆ ತನ್ನ ಬಿಡುಗಡೆ ಮತ್ತು ಪುನರ್ವಸತಿಗೆ ಅರ್ಜಿ ಸಲ್ಲಿಸಬೇಕು. ಹಾಗೇ ಎ.ಸಿ. ಮತ್ತು ಡಿ.ಸಿ.ಗೆ ಸಹ ಅರ್ಜಿ ಸಲ್ಲಿಸಬೇಕು."

"ಯಜಮಾನನ ಕಡೆಯಿಂದ ಬೆದರಿಕೆ ಬಂದರೆ ಪೋಲೀಸ್ ಅಧಿಕಾರಿಗೆ ಸಹ. ಹಾಗೂ ಸ್ಥಳೀಯ ಸ್ವಯಂಸೇವಾ ಸಂಸ್ಥೆ, ದಲಿತ, ಗಿರಿಜನ ಮುಖಂಡರ ಗಮನಕ್ಕೂ ಇದನ್ನು ತಂದು ಅಧಿಕಾರಿಗಳು ಕಾನೂನಿನ ಪ್ರಕಾರ ಕೆಲಸ ನಿರ್ವಹಿಸುವಂತೆ ನೋಡಿಕೊಳ್ಳಬೇಕು."

"ಸ್ಥಳೀಯ ಜೀತಗಾರರು ಮತ್ತು ದಿನಗೂಲಿ ನೌಕರರ ಜೊತೆಗೂಡಿ ಒಕ್ಕೂಟ ಕಟ್ಟಬೇಕು. ಇದರ ಮುಖಾಂತರ ಅಧಿಕಾರಿಗಳ ಮೇಲೆ ಜೀತ ಕಾನೂನಿನ ಪ್ರಕಾರ ಕೆಲಸ ಮಾಡಲು ಒತ್ತಡ ಹೇರಬೇಕು. ಇದರ ಮೂಲಕ ಸರ್ಕಾರದ ವಿವಿಧ ಬಡತನ ನಿರ್ಮೂಲನಾ ಸೌಲಭ್ಯಗಳನ್ನು ಪಡೆಯಬೇಕು. ಇದು ನಿಮ್ಮ ಸಂವಿಧಾನಾತ್ಮಕ ಹಕ್ಕು."

"ಸ್ಥಳೀಯ 15-20 ಜನರ ಗುಂಪನ್ನು ಕಟ್ಟಿ, ಸಣ್ಣ ಉಳಿತಾಯ ಆರಂಭಿಸಿ, ಅದರ ಮೂಲಕ ಗುಂಪು ಸಾಲ ಪಡೆಯುವುದು, ಹಾಗೂ ಬ್ಯಾಂಕಿನಲ್ಲಿ ಖಾತೆ ತೆರೆದು ಸಾಲ ಪಡೆಯುವುದು."

"ಮಕ್ಕಳನ್ನು ತಪ್ಪದೆ ಶಾಲೆಗೆ ಕಳುಹಿಸುವುದು. ಇದಕ್ಕೆ ಅಗತ್ಯವಾದ ಸಹಾಯ ಹಾಗೂ ಬಡತನ ನಿವಾರಣೆಗೆ ಸರ್ಕಾರಿ ಸಹಾಯ ಪಡೆಯುವುದು. ಮತ್ತು ಕನಿಷ್ಟ ಸಮಾನ ವೇತನದ ಜೊತೆಗೆ ಸಾರಾಯಿ ಮಾರಾಟ ತಡೆ, ವರದಕ್ಷಿಣೆ ವಿರೋಧಕ್ಕಾಗಿ ಹೋರಾಡುವುದು."



ಪೂರಕ ಓದುವಿಕೆ - IV

ಭಾರತೀಯ ಸಂವಿಧಾನ, 1950

1. ಸಂವಿಧಾನದ ಪೀಠಿಕೆ :

ನ್ಯಾಯ : ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ;
ಸ್ವಾತಂತ್ರ್ಯ : ಯೋಚನೆ, ಅಭಿವ್ಯಕ್ತಿ, ನಂಬಿಕೆ/ ಮತ, ಧರ್ಮ ಮತ್ತು ಆಚರಣೆಯಲ್ಲಿ;
ಸಮಾನತೆ: ಅಂತಸ್ತು/ಸ್ಥಾನಮಾನ ಮತ್ತು ಅವಕಾಶದಲ್ಲಿ;
ಸೋದರತ್ವ: ವ್ಯಕ್ತಿಯ ಘನತೆ ಮತ್ತು ದೇಶದ ಏಕತೆ (ಹಾಗೂ ಸಮಗ್ರತೆ)ಯನ್ನು ಕಾಪಾಡುವಂತೆ

2. ಭಾಗ III : ಮೂಲಭೂತ ಹಕ್ಕುಗಳು :

1) • ಸಮಾನತೆ ಹಕ್ಕು (ಅನುಚ್ಛೇದ 14-18)
- ಪ್ರತ್ಯೇಕ ಸ್ವಾತಂತ್ರ್ಯಗಳ ಹಕ್ಕು- (ಅನುಚ್ಛೇದ 19-22)
- ಶೋಷಣೆಯ ವಿರುದ್ಧ ಹಕ್ಕು- (ಅನುಚ್ಛೇದ 23-24)
- ಧಾರ್ಮಿಕ ಸ್ವಾತಂತ್ರ್ಯದ ಹಕ್ಕು- (ಅನುಚ್ಛೇದ 25-28)
- ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಹಕ್ಕು- (ಅನುಚ್ಛೇದ 29-30)
- ಸಂವಿಧಾನಾತ್ಮಕ ಪರಿಹಾರಗಳ ಹಕ್ಕು- (ಅನುಚ್ಛೇದ 32-35)

2) ಸಮಾನತೆ ಹಕ್ಕು ಮತ್ತು ಶೋಷಣೆ ವಿರುದ್ಧ ಹಕ್ಕುಗಳಲ್ಲಿ ಬರುವ ನಿಷೇಧಾತ್ಮಕ ಹಕ್ಕುಗಳು:

- ❖ ಅಸ್ಪೃಶ್ಯತೆ ಆಚರಣೆ ವಿರುದ್ಧ (ಅನುಚ್ಛೇದ 17)
- ❖ ವ್ಯಕ್ತಿಗಳ ಮಾರಾಟ, ಬಲಾತ್ಕಾರದ ದುಡಿಮೆ ಮತ್ತು ಬೇಗಾರ್ (ಪುಕ್ಕಟೆ ದುಡಿಮೆ) ವಿರುದ್ಧ (ಅನುಚ್ಛೇದ 23)
- ❖ 14 ವರ್ಷ ಕೆಳಗಿನ ಮಕ್ಕಳನ್ನು ಕೈಗಾರಿಕೆ (ಫ್ಯಾಕ್ಟರಿ), ಗಣಿಗಳಲ್ಲಿ ಮತ್ತು ಅಪಾಯಕಾರಿ ಕೆಲಸಗಳಲ್ಲಿ ದುಡಿಸುವುದರ ವಿರುದ್ಧ (ಅನುಚ್ಛೇದ 24)

3. ಭಾಗ IV : ರಾಜ್ಯಾಂಗದ ನಿರ್ದೇಶಕ ತತ್ವಗಳು: ಅನುಚ್ಛೇದ 38, 39, 41-43 ಮತ್ತು 47

ಅನುಚ್ಛೇದ 38: ಪ್ರಭುತ್ವವು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯವನ್ನೊಳಗೊಂಡ ಸಾಮಾಜಿಕ ವ್ಯವಸ್ಥೆಯನ್ನು ರೂಪಿಸಬೇಕು; ಅದು ಆದಾಯದಲ್ಲಿ ಅಸಮಾನತೆ

ಜೀತಪದ್ಧತಿ ಮತ್ತು ಜೀತದಾಳುಗಳನ್ನು ಗುರುತಿಸುವ ತರಬೇತಿ ಕೈಪಿಡಿ

ಪೂರಕ ಓದುವಿಕೆ-IV
ಭಾರತೀಯ ಸಂವಿಧಾನ ಮತ್ತು ಜೀತ

ಯನ್ನು ಕಡಿಮೆಗೊಳಿಸಬೇಕು ಮತ್ತು ಸ್ಥಾನಮಾನಗಳು, ಸೌಲಭ್ಯಗಳು ಮತ್ತು ಅವಕಾಶಗಳಲ್ಲಿಯ ಅಸಮಾನತೆಗಳನ್ನು ಹೊಗಲಾಡಿಸಬೇಕು.


ಅನುಚ್ಛೇದ 39: ಪ್ರಭುತ್ವವು ತನ್ನ ಎಲ್ಲಾ ಪ್ರಜೆಗಳಿಗೆ ಸೂಕ್ತ ಜೀವನಾಧಾರವನ್ನು ಒದಗಿಸಬೇಕು. ಗಂಡಸರಿಗೂ ಹೆಂಗಸರಿಗೂ ಸಮಾನ ಕೆಲಸಕ್ಕೆ ಸಮಾನ ವೇತನವನ್ನು ಒದಗಿಸಬೇಕು. ಆರ್ಥಿಕ ಮುಗ್ಗಟ್ಟಿನಿಂದ ಪ್ರಜೆಗಳು ತಮ್ಮ ವಯಸ್ಸು ಮತ್ತು ಶಕ್ತಿಗೆ ಮೀರಿದ ಕೆಲಸಗಳಲ್ಲಿ ತೊಡಗದಂತೆ ನೋಡಿಕೊಳ್ಳಬೇಕು.

ಅನುಚ್ಛೇದ 41: ಪ್ರಭುತ್ವವು ಕೆಲಸದ ಹಕ್ಕನ್ನು ಒದಗಿಸಬೇಕು ಮತ್ತು ನಿರುದ್ಯೋಗ, ವೃದ್ಧಾಪ್ಯ, ಕಾಯಿಲೆ ಮತ್ತು ಅಂಗವಿಕಲತೆಗಳ ಸಂದರ್ಭದಲ್ಲಿ ಭತ್ಯೆಯನ್ನು ಒದಗಿಸಬೇಕು.

ಅನುಚ್ಛೇದ 42: ಪ್ರಭುತ್ವವು ನ್ಯಾಯಯುತ ಮತ್ತು ಮಾನವೀಯ ರೀತಿಯ ಕೆಲಸದ ಪರಿಸ್ಥಿತಿಗಳನ್ನೂ ಹೆರಿಗೆ ಭತ್ಯೆಯನ್ನೂ ಒದಗಿಸಬೇಕು.

ಅನುಚ್ಛೇದ 43: ಪ್ರಭುತ್ವವು ಎಲ್ಲಾ ಕೆಲಸಗಾರರಿಗೆ ಕೆಲಸವನ್ನೂ, ಜೀವನವೇತನವನ್ನೂ ಹಾಗೂ ಉತ್ತಮ ಜೀವನ ಮಟ್ಟ, ಪೂರ್ತಿ ಉದ್ಯೋಗ, ವಿರಾಮ ಮತ್ತು ಸಾಮಾಜಿಕ ಹಾಗೂ ಸಾಂಸ್ಕೃತಿಕ ಅವಕಾಶಗಳನ್ನು ದೃಢೀಕರಿಸುವ ಕೆಲಸದ ಪರಿಸ್ಥಿತಿಗಳನ್ನೂ ಒದಗಿಸಿ ಕೊಡಬೇಕು.

ಅನುಚ್ಛೇದ 47: ಪ್ರಭುತ್ವವು ಜನರಿಗೆ ಪೌಷ್ಟಿಕ ಆಹಾರವನ್ನು ಒದಗಿಸಿ ಅವರ ಜೀವನ ಮಟ್ಟವನ್ನು ಹೆಚ್ಚಿಸಬೇಕು ಮತ್ತು ಸಾರ್ವಜನಿಕ ಆರೋಗ್ಯವನ್ನು ಉತ್ತಮಗೊಳಿಸಬೇಕು.



ಪೂರಕ ಓದುವಿಕೆ - V

ಜೀತ ಪದ್ಧತಿ ರದ್ದತಿ ಅಧಿನಿಯಮವನ್ನು ಜಾರಿಗೊಳಿಸಿದಾಗಿನಿಂದ ಆದ ಪರಿಣಾಮಗಳು

1) ಸಂವಿಧಾನದ ಅನುಚ್ಛೇದ 23ರ ಪ್ರಕಾರ ಜೀತಪದ್ಧತಿ ರದ್ದತಿ ಸುಗ್ರೀವಾಜ್ಞೆಯನ್ನು ರಾಷ್ಟ್ರಾಧ್ಯಕ್ಷರು 1975ರ ಅಕ್ಟೋಬರ್ 24ರಂದು ಜಾರಿಗೊಳಿಸಿದರು. ಇದು ಸ್ವತಂತ್ರ ಭಾರತವು ಸಂವಿಧಾನವನ್ನು ಒಪ್ಪಿಕೊಂಡು ಕಾಲು ಶತಮಾನ ಕಳೆದ ಮೇಲೆ! ಅದು ಕೂಡ ತುರ್ತು ಪರಿಸ್ಥಿತಿಯ ಅವಕಾಶವನ್ನು ಬಳಸಿದ್ದರಿಂದ ಸಾಧ್ಯವಾಗಿತ್ತು!

2) 1975ರ ಸುಗ್ರೀವಾಜ್ಞೆಯು ಅದೇ ರೂಪದಲ್ಲಿ ಕಾನೂನಾಗಿ 1976ರ ಫೆಬ್ರವರಿ 9ರಂದು ರಾಷ್ಟ್ರಾಧ್ಯಕ್ಷರ ಒಪ್ಪಿಗೆ ಪಡೆಯಿತು.

3) ಆಗಿನ ಕಾಂಗ್ರೇಸ್ ಸರ್ಕಾರದ 20 ಅಂಶಗಳ ಕಾರ್ಯಕ್ರಮಗಳಲ್ಲಿ ಜೀತ ವಿಮುಕ್ತಿಯು ಒಂದು ಕಾರ್ಯಕ್ರಮವಾಗಿತ್ತು (ಮೊದಲು 1975-77ರ ಅವಧಿಯಲ್ಲಿ ನಂತರ 1982-84ರ ಅವಧಿಯಲ್ಲಿ).

4) ಜೀತ ಕಾನೂನು ಆರಂಭದಲ್ಲಿ ಜಾರಿಗೊಂಡ ವಿಧಾನ :

   ರಾಷ್ಟ್ರ ಹಾಗೂ ರಾಜ್ಯ ಮಟ್ಟದಲ್ಲಿ ಜೀತ ಕಾನೂನು ಬಂದ ಮೇಲೆ ಜೀತದಾಳುಗಳನ್ನು ಗುರುತಿಸಿ ಅವರಿಗೆ ಪುನರ್ವಸತಿ ಕಲ್ಪಿಸುವುದರ ಬಗೆಗಿನ ಅಂಕಿಅಂಶಗಳು ಕೆಲವೊಂದು ಸ್ವಾರಸ್ಯಕರ ವಿಷಯಗಳನ್ನು ಬೆಳಕಿಗೆ ತರುತ್ತವೆ. (ಭಾರತ ಮತು ಕರ್ನಾಟಕಕ್ಕೆ ಸಂಬಂಧಪಟ್ಟಂತೆ ಅಂಕಿಅಂಶಗಳನ್ನು ಕೋಷ್ಟಕಗಳಲ್ಲಿ ಕೊನೆಗೆ ಕೊಡಲಾಗಿದೆ.)

- ಇಡೀ ದೇಶದಲ್ಲಿ 1997ರ ತನಕ ಕರ್ನಾಟಕ ರಾಜ್ಯವು ಹೆಚ್ಚಿನ ಸಂಖ್ಯೆಯಲ್ಲಿ ಜೀತದಾಳುಗಳನ್ನು ಗುರುತಿಸಿದೆ. ಕೆಲವು ರಾಜ್ಯಗಳು ಯಾವುದೇ ಕ್ರಮ ಕೈಗೊಂಡಿಲ್ಲ.
- ಗುರುತಿಸಿದ ಜೀತದಾಳುಗಳಿಗೆ ಒಂದೇ ಸಮನೆ ಪುನರ್ವಸತಿ ಕಲ್ಪಿಸಿಲ್ಲ. ಇದರಿಂದ ಹಲವಾರು ಮಂದಿ ಬಿಡುಗಡೆಗೊಂಡವರು ಪುನಃ ಜೀತಕ್ಕೆ ಮರಳಿದ್ದಾರೆ.
- ಕರ್ನಾಟಕದಲ್ಲಿ ಹೆಚ್ಚಿನ ಜೀತದಾಳುಗಳನ್ನು 1978 - 80ರ ಅವಧಿಯಲ್ಲಿ ಗುರುತಿಸಲಾಗಿತ್ತು. ಅವರ ಪುನರ್ವಸತಿಯು 2000ರ ತನಕವೂ ನಡೆದಿದೆ!
- ಗುರುತಿಸಿದ ಜೀತದಾಳುಗಳ ಬಗ್ಗೆ ಸರ್ಕಾರಗಳು ಒದಗಿಸಿದ ಅಂಕಿ ಅಂಶಗಳು ವರ್ಷ ವರ್ಷಕ್ಕೂ ಬದಲಾಗಿವೆ!
- ಎಲ್ಲಾ ರಾಜ್ಯಗಳು ಒಂದೇ ರೀತಿ ಜೀತದಾಳುಗಳನ್ನು ಗುರುತಿಸಿಲ್ಲ. ಒಂದೇ

ಜೀತಪದ್ಧತಿ ಮತ್ತು ಜೀತದಾಳುಗಳನ್ನು ಗುರುತಿಸುವ ತರಬೇತಿ ಕೈಪಿಡಿ

ಪೂರಕ ಓದುವಿಕೆ-V
ಜೀತ ಪದ್ಧತಿ ರದ್ದತಿ ಅಧಿನಿಯಮದ ಅನುಷ್ಠಾನ

ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ಸರಿಯಾಗಿ ಜೀತದಾಳುಗಳನ್ನು ಗುರುತಿಸಿಲ್ಲ. ಉದಾಹರಣೆಗೆ ಹಿಂದುಳಿದ ಉತ್ತರ ಕರ್ನಾಟಕದ ಆಗಿನ 8 ಜಿಲ್ಲೆಗಳಲ್ಲಿ ಗುರುತಿಸಿದ ಜೀತದಾಳುಗಳ ಸಂಖ್ಯೆ ಒಂದೂವರೆ ಸಾವಿರಕ್ಕಿಂತಲೂ ಕಡಿಮೆ! ಮುಂದುವರಿದ ಉಳಿದ 12 ಜಿಲ್ಲೆಗಳಲ್ಲಿ 60 ಸಾವಿರಕ್ಕಿಂತಲೂ ಹೆಚ್ಚು! ಆಗಿನ ಧಾರವಾಡ ಜಿಲ್ಲೆಯಲ್ಲಿ (ಈಗಿನ ಗದಗ ಮತ್ತು ಹಾವೇರಿ ಜಿಲ್ಲೆಗಳನ್ನು ಸೇರಿದಂತೆ) ಒಬ್ಬನೇ ಒಬ್ಬ ಜೀತದಾಳುವನ್ನೂ ಗುರುತಿಸಿಲ್ಲ. 1980 ಮತ್ತು ಪ್ರತ್ಯೇಕವಾಗಿ 1984ರ ನಂತರ ಇತರ ರಾಜ್ಯಗಳನ್ನೊಳಗೊಂಡಂತೆ ಕರ್ನಾಟಕದಲ್ಲಿ ಜೀತದಾಳುಗಳನ್ನು ಹೆಚ್ಚಾಗಿ ಗುರುತಿಸಿಲ್ಲ.

❖ 1980ರಿಂದ ಕರ್ನಾಟಕವನ್ನು ಸೇರಿ ಎಲ್ಲಾ 12 ರಾಜ್ಯಗಳು ಜೀತ ಪದ್ಧತಿಯನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಲಾಗಿದೆ ಎಂದು ಅಧಿಕೃತ ಹೇಳಿಕೆ ಕೊಟ್ಟಿವೆ !

ವಿವರಗಳಿಗೆ ರಾಷ್ಟ್ರ ಮಟ್ಟದ ರಾಜ್ಯವಾರು ಹಾಗೂ ಕರ್ನಾಟಕ ರಾಜ್ಯ ಮಟ್ಟದ ಜಿಲ್ಲಾವಾರು ಅಂಕಿಅಂಶಗಳ ಕೋಷ್ಟಕಗಳನ್ನು ನೋಡೋಣ :

ಜೀತ ಕಾನೂನು ಬಂದಾಗಿನಿಂದ 1984ರ ತನಕ ಕೇವಲ 12 ರಾಜ್ಯಗಳಲ್ಲಿ ಮಾತ್ರ ಜೀತದ ಕುರಿತು ಕ್ರಮವನ್ನು ತೆಗೆದುಕೊಳ್ಳಲಾಗಿತ್ತು. ಆ ರಾಜ್ಯಗಳು ಈ ಕೆಳಗಿನಂತಿವೆ: ಹೆಚ್ಚು ಗುರುತಿಸಿದ ರಾಜ್ಯಗಳನ್ನು ಮೊದಲು ಕೊಟ್ಟು ಕಡಿಮೆ ಗುರುತಿಸಿದ ರಾಜ್ಯಗಳನ್ನು ನಂತರ ಹೆಸರಿಸಲಾಗಿದೆ. ಅವುಗಳ ಹೆಸರಿನ ಮುಂದೆ ಮೊದಲು ಗುರುತಿಸಿದ ಜೀತದಾಳುಗಳ ಸಂಖ್ಯೆಯನ್ನೂ ನಂತರ ಪುನರ್ವಸತಿಗೊಳಿಸಿದ ಜೀತದಾಳುಗಳ ಸಂಖ್ಯೆಯನ್ನೂ ಕೊಟ್ಟಿದೆ. ಕರ್ನಾಟಕ (62,708 : 54,078); ಒರಿಸ್ಸಾ (49,971 : 46,483); ತಮಿಳುನಾಡು (38,886 : 38,813); ಆಂಧ್ರ ಪ್ರದೇಶ (36,289 : 25,753); ಉತ್ತರ ಪ್ರದೇಶ - ಉತ್ತರ ಖಂಡ ಸೇರಿ (27,489 : 27,469) ಬಿಹಾರ - ಜಾರ್ಖಂಡ ಸೇರಿ (12,986 : 11,479); ಮಧ್ಯಪ್ರದೇಶ - ಚತ್ತೀಸ್‌ಘಡ ಸೇರಿ (12,804 : 11,814); ರಾಜಸ್ತಾನ (7,478 : 5,804); ಮಹಾರಾಷ್ಟ್ರ (1,382 : 1,300); ಕೇರಳ (833 : 113); ಹರ್‍ಯಾಣ (544 : 21) ಮತ್ತು ಗುಜರಾತ್ (64 : 64).

ಆದರೆ ಮೊದಲ ಹಂತದ ಪ್ರಯತ್ನದ ನಂತರ ಜೀತ ಕಾನೂನಿನಡಿ ಕ್ರಮಗಳು ಎಲ್ಲೆಡೆ ಸ್ಥಗಿತಗೊಂಡವು. ಆ 12 ರಾಜ್ಯಗಳಲ್ಲಿ ಕೇವಲ 5 ರಾಜ್ಯಗಳಲ್ಲಿ ಕೆಲಸ ಸ್ವಲ್ಪ ಮಟ್ಟಿಗೆ ಮುಂದುವರಿಯಿತು. 2003ರ ಒಳಗಡೆ ತಮಿಳುನಾಡು ರಾಜ್ಯವು 28,687 ಹೊಸ ಜೀತದಾಳುಗಳನ್ನು ಗುರುತಿಸಿ, ಹಿಂದಿನ 78 ಜೀತದಾಳುಗಳನ್ನು ಸೇರಿಸಿ ಅವರನ್ನೆಲ್ಲಾ ಪುನರ್ವಸತಿಗೊಳಿಸಿದರು. ಕರ್ನಾಟಕ ರಾಜ್ಯವು 875 ಮಂದಿ ಹೊಸ ಜೀತದಾಳುಗಳನ್ನು ಗುರುತಿಸಿ ಹಿಂದಿನ 1153 ಮಂದಿ ಜೊತೆ ಅವರಿಗೆ

ಜೀತಪದ್ಧತಿ ಮತ್ತು ಜೀತದಾಳುಗಳನ್ನು ಗುರುತಿಸುವ ತರಬೇತಿ ಕೈಪಿಡಿ

ಪೂರಕ ಓದುವಿಕೆ-V
ಜೀತ ಪದ್ಧತಿ ರದ್ದತಿ ಅಧಿನಿಯಮದ ಅನುಷ್ಠಾನ

ಪುನರ್ವಸತಿ ಕಲ್ಪಿಸಿತು. ಉತ್ತರ ಪ್ರದೇಶವು 328 ಮಂದಿ ಹೊಸ ಜೀತದಾಳುಗಳನ್ನು ಗುರುತಿಸಿ ಹಿಂದಿನ 20 ಮಂದಿ ಜೊತೆ ಅವರಿಗೆ ಪುನರ್ವಸತಿ ಸೌಲಭ್ಯ ಒದಗಿಸಿತು. ಮಧ್ಯಪ್ರದೇಶವು 124 ಮಂದಿ ಹೊಸ ಜೀತದಾಳುಗಳನ್ನು ಗುರುತಿಸಿ ಹಿಂದಿನ 84 ಮಂದಿಯೊಂದಿಗೆ ಅವರನ್ನು ಪುನರ್ವಸತಿಗೊಳಿಸಿತು. ಮಹಾರಾಷ್ಟ್ರ ರಾಜ್ಯವು 19 ಮಂದಿ ಜೀತದಾಳನ್ನು ಗುರುತಿಸಿ ಪುನರ್ವಸತಿ ಗೊಳಿಸಿತು.

1993ರಿಂದ 2003ರ ಅವಧಿಯಲ್ಲಿ ಎರಡು ಹೊಸ ರಾಜ್ಯಗಳು ಜೀತದಾಳುಗಳ ಬಗ್ಗೆ ಕ್ರಮ ಕೈಗೊಂಡವು. ಅರುಣಾಚಲ ಪ್ರದೇಶವು 5526 ಮಂದಿ ಜೀತದಾಳುಗಳನ್ನು ಗುರುತಿಸಿ ಅವರಲ್ಲಿ 2,992 ಮಂದಿಯನ್ನು ಪುನರ್ವಸತಿಗೊಳಿಸಿತು. ಜೀತದಾಳುಗಳನ್ನು ಹೊಸದಾಗಿ ಗುರುತಿಸಿದ ಇನ್ನೊಂದು ರಾಜ್ಯ ಪಂಜಾಬ್ ಆಗಿದೆ.

80ರ ದಶಕದಿಂದ ಜೀತದಾಳುಗಳ ಬಗ್ಗೆ ಸರಕಾರವು ನಿರ್ಲಕ್ಷ್ಯ ತಾಳಿದರೆ ಸರ್ಕಾರೇತರ ಸಂಸ್ಥೆಗಳು ಜೀತ ಕಾನೂನಿಗೆ ಹೆಚ್ಚಿನ ಚಾಲನೆಯನ್ನು ನೀಡಿವೆ. ಆದರೆ ಅದು ಚತ್ತೀಸ್‌ಘಡ, ಹರ್ಯಾಣ, ಪಂಜಾಬ್, ಉತ್ತರ ಪ್ರದೇಶ, ಕರ್ನಾಟಕ ಮತ್ತು ತಮಿಳುನಾಡು - ಈ ರಾಜ್ಯಗಳಲ್ಲಿಯ ಕೆಲವು ಜಿಲ್ಲೆಗಳಲ್ಲಿ ಮಾತ್ರ ಸೀಮಿತಗೊಂಡಿದೆ. ಅವು ತಮ್ಮ ಪ್ರಯತ್ನದಿಂದ ಬಿಡುಗಡೆಗೊಳಿಸಿ, ಪುನರ್ವಸತಿಗೊಳಿಸಿದ ಎಷ್ಟೋ ಮಂದಿ ಜೀತದಾಳುಗಳ ವಿವರಗಳು ಸರ್ಕಾರಿ ಅಥವಾ ಅಧೀಕೃತ ದಾಖಲೆಗಳಲ್ಲಿ ಸಿಗುವುದಿಲ್ಲ.

1) 1980ರ ತನಕ ದೇಶದ 12 ರಾಜ್ಯಗಳಲ್ಲಿ ಎರಡೂವರೆ ಲಕ್ಷಕ್ಕಿಂತಲೂ ಸ್ವಲ್ಪ ಹೆಚ್ಚಿಗೆ ಜೀತದಾಳುಗಳನ್ನು ಗುರುತಿಸಲಾಗಿತ್ತು. 31.3.93ರಂದು ಲಭ್ಯವಿದ್ದ ದೇಶಮಟ್ಟದ ಸರ್ಕಾರಿ ಅಂಕಿ ಅಂಶಗಳು ಈ ಕೆಳಗಿನಂತಿವೆ :

ಕ್ರಮ ಸಂಖ್ಯೆ	ರಾಜ್ಯದ ಹೆಸರು	ಗುರುತಿಸಿ ಬಿಡುಗಡೆಗೊಳಿಸಲಾದ ಜೀತದಾಳುಗಳು	ಪುನರ್ವಸತಿಗೊಳಿಸಲಾದ ಜೀತದಾಳುಗಳು	ಪತ್ತೆಹಚ್ಚಲಾಗದ ಜೀತದಾಳುಗಳು	ಪುನರ್ವಸತಿಗೆ ಉಳಕೊಂಡ ಜೀತದಾಳುಗಳು
1.	ಆಂಧ್ರಪ್ರದೇಶ	35934	25753	-	10181
2.	ಬಿಹಾರ	12986	11479	1116	391
3.	ಕರ್ನಾಟಕ	62708	54078	6180	2450
4.	ಮಧ್ಯಪ್ರದೇಶ	12804	11814	936	54
5.	ಒರಿಸ್ಸಾ	49971	46769	3176	26
6.	ರಾಜಸ್ಥಾನ	7478	5804	1533	141
7.	ತಮಿಳುನಾಡು	38886	38813	6	67
8.	ಮಹಾರಾಷ್ಟ್ರ	1382	1300	82	-
9.	ಉತ್ತರ ಪ್ರದೇಶ	27489	27469	20	-
10.	ಕೇರಳ	823	710	113	-
11.	ಹರ್ಯಾಣ	544	21	523	-
12.	ಗುಜರಾತ್	64	64	-	-
	ಒಟ್ಟು	2,51,069	2,24,074	13,685	13,310

ಜೀತಪದ್ಧತಿ ಮತ್ತು ಜೀತದಾಳುಗಳನ್ನು ಗುರುತಿಸುವ ತರಬೇತಿ ಕೈಪಿಡಿ

ಅನುಬಂಧ-V ಜೀತ ಪದ್ಧತಿ ಅಂಕಿ ಅಂಶಗಳು

1) ಅದೇ ಅವಧಿಯಲ್ಲಿ, ಅಂದರೆ 1980ರ ಒಳಗಡೆ, ಕರ್ನಾಟಕದಲ್ಲಿ ಇಡೀ ದೇಶದಲ್ಲೇ ಹೆಚ್ಚಿನ ಪ್ರಮಾಣದಲ್ಲಿ, ಅಂದರೆ 60 ಸಾವಿರಕ್ಕೂ ಮಿಗಿಲಾಗಿ ಜೀತದಾಳುಗಳನ್ನು ಗುರುತಿಸಲಾಗಿತ್ತು. 31.3.1998ರಂದು ಲಭ್ಯವಿರುವ ಕರ್ನಾಟಕ ಮಟ್ಟದ ಜಿಲ್ಲಾವಾರು ಅಂಕಿಅಂಶಗಳು ಈ ಕೆಳಗಿನಂತಿವೆ:

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಗುರುತಿಸಿ ಬಿಡುಗಡೆಗೊಳಿಸಲಾದ ಜೀತದಾಳುಗಳು	ಪುನರ್ವಸತಿಗೊಳಿಸಲಾದ ಜೀತದಾಳುಗಳು	ಪತ್ತೆಹಚ್ಚಲಾಗದ ಜೀತದಾಳುಗಳು	ಪುನರ್ವಸತಿಗೆ ಉಳಕೊಂಡ ಜೀತದಾಳುಗಳು
1.	ಬೆಂಗಳೂರು ನ.	6132	4788	1263	81
2.	ಬೆಂಗಳೂರು ಗ್ರಾ.	2787	2590	197	-
3.	ಬೆಳಗಾವಿ	602	575	27	-
4.	ಬಳ್ಳಾರಿ	12	12	-	-
5.	ಬೀದರ	451	435	16	-
6.	ಬಿಜಾಪುರ	2756	2370	386	-
7.	ಚಿಕ್ಕಮಗಳೂರು	385	265	120	-
8.	ಚಿತ್ರದುರ್ಗ	4819	4204	615	-
9.	ದಕ್ಷಿಣ ಕನ್ನಡ	57	50	7	-
10.	ಧಾರವಾಡ	2937	2617	320	-
11.	ಗುಲ್ಬರ್ಗ	5217	4998	219	-
12.	ಹಾಸನ	22644	20710	1934	-
13.	ಕೊಡಗು	9236	8357	850	21
14.	ಕೋಲಾರ	2046	1730	316	-
15.	ಮಂಡ್ಯ	8	5	3	-
16.	ಮೈಸೂರು	1252	1180	72	-
17.	ರಾಯಚೂರು	19	10	9	-
18.	ಶಿವಮೊಗ್ಗ	49	47	2	-
19.	ತುಮಕೂರು	-	-	-	-
20.	ಉತ್ತರ ಕನ್ನಡ	123	103	20	-
	ಒಟ್ಟು	61532	55046	6376	102

(ಗುರುತಿಸಿ, ಬಿಡುಗಡೆಗೊಳಿಸಲಾದ ಜೀತದಾಳುಗಳನ್ನು ಕುರಿತು ಸರ್ಕಾರ ಹಿಂದೆ ಒದಗಿಸಿದ ಅಂಕಿಗಳು: 25-3-89 : 62,689; 1-1-93: 65,255; 28-2-95; 61,532)

"ಜೀತ ಪದ್ಧತಿ ಜೀವಂತವಿರುವತನಕ ಜೀತದಾಳುಗಳನ್ನು ಅಧಿಕಾರಿಗಳು ಗುರುತಿಸುವ, ಬಿಡುಗಡೆಗೊಳಿಸುವ ಮತ್ತು ಪುನರ್ವಸತಿ ಕಲ್ಪಿಸುವ ಕಾರ್ಯ ನಿರಂತವಾಗಿ ನಡೆಯುತ್ತಿರಬೇಕು"

–ಕರ್ನಾಟಕ ಸರ್ಕಾರ

ಜೀತಪದ್ಧತಿ ಮತ್ತು ಜೀತದಾಳುಗಳನ್ನು ಗುರುತಿಸುವ ತರಬೇತಿ ಕೈಪಿಡಿ

ಪೂರಕ ಓದುವಿಕೆ-V

ಜೀತ ಪದ್ಧತಿ ರದ್ದತಿ ಅಧಿನಿಯಮದ ಅನುಷ್ಠಾನ

1-1-2001ರಲ್ಲಿ ಜೀತದಾಳುಗಳ ಬಗ್ಗೆ ಕರ್ನಾಟಕ ಸರ್ಕಾರದ ವಿವರಗಳು

ಕ್ರ. ಸಂ	ಜಿಲ್ಲೆಗಳ ಹೆಸರು	ಗುರುತಿಸಿ,ಬಿಡುಗಡೆ ಗೊಳಿಸಲಾದ ಜೀತದಾಳುಗಳು	ಪುನರ್ವಸತಿ ಗೊಳಿಸಲಾದ ಜೀತದಾಳುಗಳು	ಪತ್ತೆಹಚ್ಚಲಾಗದ ಜೀತದಾಳುಗಳು	ಪುನರ್ವಸತಿ ಮೊತ್ತ ಲಕ್ಷಗಳಲ್ಲಿ
1.	ಬೆಂಗಳೂರು (ಗ್ರಾ)	6132	5004	1128	337.634
2.	ಬೆಂಗಳೂರು (ನ)	2802	2604	198	139.325
3.	ಬಳ್ಳಾರಿ	602	575	27	22.976
4.	ಬೀದರ	12	10	2	0.400
5.	ಬಿಜಾಪುರ	591	557	34	5.433
6.	ಬಾಗಲಕೋಟೆ	197	53	144	1.330
7.	ದಕ್ಷಿಣ ಕನ್ನಡ	385	265	120	10.600
8.	ಉಡುಪಿ	-	-	-	-
9.	ಹಾಸನ	4910	4295	615	144.350
10.	ಚಿಕ್ಕಮಗಳೂರು	2756	2363	393	95.689
11.	ಕೊಡಗು	57	57	-	2.437
12.	ಕೋಲಾರ	2957	2637	320	110.945
13.	ಮಂಡ್ಯ	5352	5132	220	286.060
14.	ಮೈಸೂರು	15206	14151	1934	782.70
15	ಚಾಮರಾಜನಗರ	7438	6559	-	362.395
16	ಶಿವಮೊಗ್ಗ	8851	8051	800	398.232
17	ತುಮಕೂರು	2046	1768	278	70.300
18	ಉತ್ತರ ಕನ್ನಡ	8	5	3	0.125
19	ಚಿತ್ರದುರ್ಗ	1074	1006	68	42.945
20	ದಾವಣಗೆರೆ	178	178	-	7.08
21	ಬೆಳಗಾವಿ	19	10	9	0.400
22	ಗುಲ್ಬರ್ಗಾ	49	47	2	1.190
23	ಧಾರವಾಡ	-	-	-	-
24	ಹಾವೇರಿ	-	-	-	-
25	ಗದಗ	-	-	-	-
26	ರಾಯಚೂರು	106	88	18	4.120
27	ಕೊಪ್ಪಳ	17	15	2	-
	ಒಟ್ಟು	61745	55430	6315	2827.120

1976 ರಿಂದ 2005 ರವರೆಗೆ ಕರ್ನಾಟಕ ರಾಜ್ಯದಲ್ಲಿ ಗುರುತಿಸಿದ, ಬಿಡುಗಡೆಗೊಳಿಸಿದ ಮತ್ತು ಪುನರ್ವಸತಿಗೊಳಿಸಿದ ಜೀತದಾಳುಗಳ ಪುನರ್ವಸತಿಯ ವಿವರಗಳು - (ಜಿಲ್ಲಾವಾರು)-ಮತ್ತು ಪುನರ್ವಸತಿಗೊಳಿಸಿದ ಹಣ ಮತ್ತು ಅಪರಾಧಿಗಳ ಮೇಲೆ ಹೂಡಿದ ದಾವೆಗಳ ಸಂಖ್ಯೆ

ಗುರುತಿಸಿದ ಮತ್ತು ಬಿಡುಗಡೆಗೊಳಿಸಿದ ಜೀತದಾಳುಗಳು					ಪುನರ್ವಸತಿಗೊಳಿಸಿದ ಜೀತದಾಳುಗಳು							ಪುನರ್ವಸತಿಗೆ ಬಳಸಿದ ಹಣ (ಲಕ್ಷ ರೂಪಾಯಿಗಳಲ್ಲಿ)							ಅಪರಾಧಿಗಳ ಮೇಲೆ ಹೂಡಿದ ದಾವೆಗಳ ಸಂಖ್ಯೆ
2001-02	2002-03	2003-04	2004-05	ಒಟ್ಟು	ಮಾರ್ಚ್ 2000ದ ವರೆಗೆ	2000-01	2001-02	2002-03	2003-04	2004-05	ಒಟ್ಟು	ಮಾರ್ಚ್ 2000ದ ವರೆಗೆ	2000-01	2001-02	2002-03	2003-04	2004-05	ಒಟ್ಟು	
5	6	7	8	9	10	11	12	13	14	15	16	17	18	19	20	21	22	23	24
0	0	0	0	199	53	0	0	0	2	0	55	1.330	0	0	0	0.40	0	1.730	0
144	3	0	0	6306	5004	0	0	0	186	0	5190	337.634	0	0	0	37.20	0	374.83	3
0	0	16	0	2826	2604	0	0	0	5	0	2609	139.325	0	0	0	1.00	0	140.325	5
0	0	0	0	19	10	0	0	0	0	0	10	0.400	0	0	0	0	0	0.400	0
1	0	0	0	605	575	0	0	0	3	0	578	22.976	0	0	0	0.60	0	23.576	3
9	0	2	0	23	10	0	0	0	0	0	10	0.400	0	0	0	0	0	0.400	0
0	0	0	0	591	557	0	0	0	0	0	557	5.433	0	0	0	0	0	5.433	0
20	0	0	0	7530	6559	0	0	0	92	0	6651	362.395	0	0	0	18.40	0	380.795	0
0	0	0	0	2756	2363	0	0	0	0	0	2363	95.689	0	0	0	0	0	95.689	0
0	0	0	0	1074	1006	0	0	0	0	0	1006	42.945	0	0	0	0	0	42.945	0
0	0	0	0	385	265	0	0	0	0	0	265	10.600	0	0	0	0	0	10.600	0
0	0	0	0	3795	3615	0	0	0	0	0	3615	185.891	0	0	0	0	0	185.891	27
0	0	0	0	0	0	0	0	0	0	0	0	0	0	0	0	0	0	0.000	0
0	0	0	0	0	0	0	0	0	0	0	0	0	0	0	0	0	0	0.000	0
0	0	0	0	49	47	0	0	0	0	0	47	1.190	0	0	0	0	0	1.190	0
0	0	0	0	4954	4295	0	0	0	43	0	4338	144.350	0	0	0	8.60	0	152.950	48
0	0	0	0	0	0	0	0	0	0	0	0	0	0	0	0	0	0	0.000	0
0	0	0	0	58	57	0	0	0	0	0	57	2.437	0	0	0	0	0	2.437	1
0	0		0	3327	2637	0	0	0	370	0	3007	110.945	0	0	0	74.00	0	184.945	20
1	0	0	0	67	15	0	0	0	6	0	21	0.600	0	0	0	1.20	0	1.800	50
3	0	0	0	5364	5096	0	0	36	12	0	5144	278.860	0	0	7.20	2.40	0	288.460	1
272	0	1	21	16016	14151	0	0	0	783	0	14934	782.700	0	0	0	156.60	0	939.300	70
0	0	0	0	106	88	0	0	0	0	0	88	3.520	0	0	0	0	0	3.520	0
0	0	0	0	5247	4614	0	0	0	0	0	4614	219.421	0	0	0	0	0	219.421	2
0	3	52	4	2466	1768	0	0	0	351	64	2183	70.300	0	0	0	70.20	6.40	146.900	26
0	0	0	0	1	0	0	0	0	1	0	1	0	0	0	0	0.20	0	0.200	0
0	0	0	0	8	5	0	0	0	0	0	5	0.125	0	0	0	0	0	0.125	0
450	6	71	25	63772	55394	0	0	36	1854	64	57348	2819.47	0	0	7.20	370.80	6.40	3203.866	256

ಪೂರಕ ಓದುವಿಕೆ-VI ಜೀತ ಪದ್ಧತಿ ರದ್ದತಿ ಅಧಿನಿಯಮ-ಒಂದು ಪಕ್ಷಿನೋಟ

ಪೂರಕ ಓದುವಿಕೆ – VI

ಜೀತ ಪದ್ಧತಿ ರದ್ದತಿ ಅಧಿನಿಯಮ : ಒಂದು ಪಕ್ಷಿನೋಟ

ಕಾನೂನಿನ ಉದ್ದೇಶ : ಜನತೆಯ ದುರ್ಬಲ ವರ್ಗಗಳ ಆರ್ಥಿಕ ಮತ್ತು ದೈಹಿಕ ಶೋಷಣೆಯನ್ನು ನಿವಾರಿಸುವ ದೃಷ್ಟಿಯಿಂದ ಜೀತ ಪದ್ಧತಿ ನಿರ್ಮೂಲನೆ ಗೊಳಿಸುವುದು.

ಅಧ್ಯಾಯ 1 : ಶೀರ್ಷಿಕೆ ಮತ್ತು ವ್ಯಾಖ್ಯಾನಗಳು (ಪರಿಚ್ಛೇದ 1 - 3)

ಪರಿಚ್ಛೇದ 1 : ಜೀತ ಪದ್ಧತಿ ರದ್ಧತಿ ಅಧಿನಿಯಮಕ್ಕೆ 1976ರ ಫೆಬ್ರವರಿ 9ರಂದು ರಾಷ್ಟ್ರಾಧ್ಯಕ್ಷರ ಅನುಮತಿ ಸಿಕ್ಕಿದ್ದರೂ 1975ರ ಅಕ್ಟೋಬರ್ 25ರಂದು ಕಾನೂನು ಜಾರಿಗೆ ಬಂದದ್ದು ಎಂದು ಭಾವಿಸತಕ್ಕದ್ದು.

ಪರಿಚ್ಛೇದ 2 : ಪರಿಚ್ಛೇದ 2ರಲ್ಲಿರುವ ಲಕ್ಷಣ(ವ್ಯಾಖ್ಯಾನ)ಗಳನ್ನು ಪ್ರತ್ಯೇಕವಾಗಿ ಕೊಡಲಾಗಿದೆ. ಮುಖ್ಯ ವ್ಯಾಖ್ಯಾನಗಳು : ಮುಂಗಡ (a) ಒಪ್ಪಂದ ಮತ್ತು ದೇಶದಲ್ಲಿಯ ಜೀತಪದ್ಧತಿಯ ವಿವಿಧ ಹೆಸರುಗಳು (b), ಜೀತಸಾಲ (d), ಜೀತ (e), ಜೀತದಾಳು (f), ಜೀತ ಪದ್ಧತಿ (g) ಮತ್ತು ನಾಮಮಾತ್ರ ಮಜೂರಿ (i).

ಪರಿಚ್ಛೇದ 3 : ಈ ಅಧಿನಿಯಮದಲ್ಲಿರುವ ಯಾವುದೇ ವಿಷಯವು ಬೇರೆ ಯಾವುದೇ ಅಧಿನಿಯಮದ ಯಾವುದೇ ಅಂಶಕ್ಕೆ ವಿರೋಧವಾಗಿದ್ದರೂ ಜೀತ ಕಾನೂನಿನಲ್ಲಿರುವ ವಿಷಯವೇ ಪರಿಣಾಮಕಾರಿಯಾಗಿರತಕ್ಕದ್ದು.

ಅಧ್ಯಾಯ 2 - 3 : ಜೀತ ಪದ್ಧತಿಯ ನಿರ್ಮೂಲನೆ (ಪರಿಚ್ಛೇದ 4 - 5) ಮತ್ತು ಯಾವುದೇ ಜೀತ ಋಣದ ಅಳಿವು (ಪರಿಚ್ಛೇದ 6 - 9)

ಪರಿಚ್ಛೇದ 4 : ಭಾರತದಾದ್ಯಂತ ಜೀತ ಪದ್ಧತಿಯನ್ನು ರದ್ದುಗೊಳಿಸಲಾಗಿದೆ.

ಪರಿಚ್ಛೇದ 5 : ಜೀತ ಪದ್ಧತಿಗೆ ಸಂಬಂಧಿಸಿದ ಎಲ್ಲ ರೂಢಿ, ಸಂಪ್ರದಾಯ, ಒಪ್ಪಂದ, ಕರಾರು ಮತ್ತು ಯಾವುದೇ 'ಸಾಧನಗಳು' ರದ್ದಾಗಿವೆ.

ಪರಿಚ್ಛೇದ 6 :

1) ಬಾಕಿ ಇರುವ ಜೀತ ಸಾಲವು ರದ್ದಾಗಿದೆ ಎಂದು ತಿಳಿದು ಕೊಳ್ಳಬೇಕು.
2) ಜೀತ ಸಾಲದ ಮರುಪಾವತಿಗೆ ಸಿವಿಲ್ ಕೋರ್ಟು ಅಥವಾ ಯಾವುದೇ ಪ್ರಾಧಿಕಾರದ ಮುಂದೆ ದಾವೆ ಹಾಕುವಂತಿಲ್ಲ. (ಪರಿಚ್ಛೇದ 25 ಕೂಡಾ ನೋಡಿ).
3) ಜೀತ ಸಾಲದ ಮರುಪಾವತಿಗೆ ಯಾವುದೇ ತೀರ್ಪು ಬಂದಿದ್ದರೆ ಅದನ್ನು ಜಾರಿಗೊಳಿಸಲಾಗಿದೆ ಎಂದೇ ತಿಳಿದುಕೊಳ್ಳಬೇಕು.
4) ಸಾಲಿಗನು ಸಾಲಕ್ಕೆ ಆಧಾರವಾಗಿ ಯಾವುದೇ ಚರ-ಸ್ಥಿರ ಸ್ವತ್ತುಗಳನ್ನು ತನ್ನ ವಶಕ್ಕೆ ತೆಗೆದುಕೊಂಡಿದ್ದರೆ ಅವನ್ನು ಕೂಡಲೇ ಹಿಂತಿರುಗಿಸಬೇಕು.
5) ಜೀತದಾಳುವಿನಿಂದ ಬಲಾತ್ಕಾರವಾಗಿ ವಶಪಡಿಸಿಕೊಂಡ ಯಾವುದೇ ಸ್ವತ್ತನ್ನು ಕೂಡಲೇ ಹಿಂತಿರುಗಿಸಬೇಕು.

ಜೀತಪದ್ಧತಿ ಮತ್ತು ಜೀತದಾಳುಗಳನ್ನು ಗುರುತಿಸುವ ತರಬೇತಿ ಕೈಪಿಡಿ

ಪೂರಕ ಓದುವಿಕೆ-VI
ಜೀತಪದ್ಧತಿ ರದ್ದತಿ ಅಧಿನಿಯಮ-ಒಂದು ಪಕ್ಷಿನೋಟ

ಪರಿಚ್ಛೇದ 7 : ಸಾಲಿಗನು ಜೀತದಾಳುವಿನಿಂದ ಯಾವುದೇ ಚರ-ಸ್ಥಿರ ಆಸ್ತಿಗಳನ್ನು ಅಡವಿಟ್ಟುಕೊಂಡಿದ್ದರೆ ಅವನ್ನು ಮುಕ್ತಗೊಳಿಸಿ ಜೀತದಾಳುವಿಗೆ ಹಿಂತಿರುಗಿಸಬೇಕು.

ಪರಿಚ್ಛೇದ 8 : ಜೀತದಿಂದ ಬಿಡುಗಡೆಯಾದ ಜೀತದಾಳುಗಳನ್ನು ಅವರು ಜೀತದಾಳುವಾಗಿದ್ದಾಗ ವಾಸಿಸುತ್ತಿದ್ದ ಮನೆಯಿಂದ ಹೊರದೂಡಬಾರದು.

ಪರಿಚ್ಛೇದ 9 : ಜೀತ ಸಾಲದ ಪಾವತಿಗೆ ಸಾಲಿಗನು ಯಾವುದೇ ಹಣವನ್ನು ಪಡೆಯುವಂತಿಲ್ಲ.

ಅಧ್ಯಾಯ 4 : ಕಾನೂನು ಜಾರಿ ಮಾಡುವ ಅಧಿಕಾರಿಗಳು (ಪರಿಚ್ಛೇದ 10 - 12)

ಪರಿಚ್ಛೇದ 10 : ಜಿಲ್ಲಾ ದಂಡಾಧಿಕಾರಿ ಅಥವಾ ಅವರಿಂದ ನಿರ್ದಿಷ್ಟಪಡಿಸಿದ ಅವರ ಅಧೀನವಿರುವ ಬೇರೊಬ್ಬ ಅಧಿಕಾರಿಗೆ ಈ ಕಾನೂನಿನಡಿ ಕ್ರಮ ತೆಗೆದುಕೊಳ್ಳಲು ಅಧಿಕಾರಗಳು ಮತ್ತು ಕರ್ತವ್ಯಗಳು ಇವೆ.

ಪರಿಚ್ಛೇದ 11 : ಜಿಲ್ಲಾ ದಂಡಾಧಿಕಾರಿಯು ಅಥವಾ ಅವರಿಂದ ನಿರ್ದಿಷ್ಟಪಡಿಸಿದ ಅಧಿಕಾರಿಯು ಬಿಡುಗಡೆಗೊಳಿಸಿದ ಜೀತದಾಳು ಪುನಃ ಜೀತಸಾಲವನ್ನು ಮಾಡದ ರೀತಿಯಲ್ಲಿ ಆತನ ಆರ್ಥಿಕ ಹಿತಾಸಕ್ತಿಗಳನ್ನು ರಕ್ಷಿಸುವ ಮೂಲಕ ಆತನ ಕಲ್ಯಾಣವನ್ನು ಸಾಧಿಸತಕ್ಕದ್ದು.

ಪರಿಚ್ಛೇದ 12 : ತಮ್ಮ ಸ್ಥಳೀಯ ಪರಿಮಿತಿಯೊಳಗೆ ಜೀತಪದ್ಧತಿ ಅಥವಾ ಇನ್ನಿತರ ಬಲಾತ್ಕಾರದ ದುಡಿಮೆ ಆಚರಣೆಯಲ್ಲಿದೆಯೇ ಎಂದು ವಿಚಾರಿಸಿ ಅದು ಆಚರಣೆಯಲ್ಲಿರುವುದು ಕಂಡುಬಂದರೆ ಅದನ್ನು ನಿಲ್ಲಿಸಲು ಅವಶ್ಯಕವಾದ ಎಲ್ಲಾ ಕ್ರಮ ಕೈಗೊಳ್ಳುವ ಕರ್ತವ್ಯ ಜಿಲ್ಲಾ ದಂಡಾಧಿಕಾರಿಯದ್ದು ಮತ್ತು ಆತನಿಂದ ನಿರ್ದಿಷ್ಟಪಡಿಸಿದ ಅಧಿಕಾರಿಯದ್ದು.

ಅಧ್ಯಾಯ 5 : ಜಾಗೃತಿ ಸಮಿತಿಯ ರಚನೆ ಮತ್ತು ಅದರ ಕರ್ತವ್ಯಗಳು (ಪರಿಚ್ಛೇದ 13 - 15)

ಪರಿಚ್ಛೇದ 13 : ಸಂರಚನೆ : ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿ ಅಥವಾ ಅವರು ನೇಮಿಸಿದ ಒಬ್ಬ ವ್ಯಕ್ತಿ ಅಧ್ಯಕ್ಷರಾಗಿದ್ದಾರೆ. ಜಿಲ್ಲಾಧಿಕಾರಿಯು ಅನುಸೂಚಿತ ಜಾತಿ ಮತ್ತು ಜನಾಂಗಗಳಿಂದ ಮೂರು ಮಂದಿ, ಇಬ್ಬರು ಸಮಾಜ ಕಾರ್ಯಕರ್ತರು, ಜಿಲ್ಲೆಯ ಹಣಕಾಸು ಸಂಸ್ಥೆಗಳಿಂದ ಒಬ್ಬರನ್ನು ಜಿಲ್ಲಾ ಜಾಗೃತಿ ಸಮಿತಿಗೆ ನೇಮಿಸಬಹುದು. ಜಿಲ್ಲೆಯಲ್ಲಿ ಗ್ರಾಮೀಣಾಭಿವೃದ್ಧಿ ಬಗ್ಗೆ ಕೆಲಸ ಮಾಡುವ ಸರ್ಕಾರಿ ಅಥವಾ ಸರ್ಕಾರೇತರ ಮೂರು ವ್ಯಕ್ತಿಗಳನ್ನು ರಾಜ್ಯ ಸರ್ಕಾರವು ನೇಮಿಸಬಹುದು.

ಉಪವಿಭಾಗ ಮಟ್ಟದಲ್ಲಿ ಉಪವಿಭಾಗಾಧಿಕಾರಿ ಅಥವಾ ಆತನಿಂದ ನೇಮಿಸಲ್ಪಟ್ಟ ವ್ಯಕ್ತಿಯು ಅಧ್ಯಕ್ಷರಾಗಿದ್ದಾರೆ. ಉಪವಿಭಾಗಾಧಿಕಾರಿಯು ಅನುಸೂಚಿತ ಜಾತಿ ಮತ್ತು ಜನಾಂಗಗಳಿಂದ ಮೂರು ಮಂದಿ, ಇಬ್ಬರು ಸಮಾಜ ಕಾರ್ಯಕರ್ತರು ಉಪವಿಭಾಗದ ಹಣಕಾಸು ಸಂಸ್ಥೆಯಾದ ಒಬ್ಬರನ್ನು ಉಪವಿಭಾಗದ ಜಾಗೃತಿ ಸಮಿತಿಗೆ ನೇಮಿಸಬಹುದು. ಉಪವಿಭಾಗದದಲ್ಲಿ ಗ್ರಾಮೀಣಾಭಿವೃದ್ಧಿ ಬಗ್ಗೆ ಕೆಲಸ ಮಾಡುವ ಸರ್ಕಾರಿ ಮತ್ತು ಸರ್ಕಾರೇತರ ವ್ಯಕ್ತಿಗಳನ್ನು ಜಿಲ್ಲಾಧಿಕಾರಿಯು ನೇಮಿಸಬಹುದು.

ಜೀತಪದ್ಧತಿ ಮತ್ತು ಜೀತದಾಳುಗಳನ್ನು ಗುರುತಿಸುವ ತರಬೇತಿ ಕೈಪಿಡಿ

ಪೂರಕ ಓದುವಿಕೆ-VI

ಜೀತಪದ್ಧತಿ ರದ್ದತಿ ಅಧಿನಿಯಮ-ಒಂದು ಪಕ್ಷಿನೋಟ

S.10ರಲ್ಲಿ ನಿರ್ದಿಷ್ಟಪಡಿಸಿದ ವ್ಯಕ್ತಿಯು ಉಪವಿಭಾಗದ ಜಾಗೃತಿ ಸಮಿತಿಯಲ್ಲಿರುತ್ತಾನೆ.

ಪರಿಚ್ಛೇದ 14 : ಜಾಗೃತಿ ಸಮಿತಿಗಳ ಪ್ರಕಾರ್ಯಗಳು-

(1) ಪ್ರತಿಯೊಂದು ಜಾಗೃತಿ ಸಮಿತಿಯ ಪ್ರಕಾರ್ಯಗಳು ಈ ಕೆಳಗಿನಂತಿರತಕ್ಕದ್ದು:

(a) ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ ಉಪಬಂಧಗಳನ್ನು ಸೂಕ್ತ ರೀತಿಯಲ್ಲಿ ಕಾರ್ಯಗತಗೊಳಿಸಲಾಗಿದೆಯೆಂಬುದನ್ನು ಖಾತ್ರಿ ಮಾಡಿಕೊಳ್ಳಲು ಮಾಡಿದ ಪ್ರಯತ್ನಗಳ ಬಗ್ಗೆ ಮತ್ತು ಕೈಕೊಂಡ ಕ್ರಮದ ಬಗ್ಗೆ ಜಿಲ್ಲಾ ಮ್ಯಾಜಿಸ್ಟ್ರೇಟನಿಗೆ ಅಥವಾ ಅವನಿಂದ ಪ್ರಾಧಿಕೃತವಾದ ಯಾವನೇ ಅಧಿಕಾರಿಗೆ ಸಲಹೆ ಕೊಡುವುದು;

(b) ವಿಮೋಚಿತರಾದ ಜೀತದಾಳುಗಳ ಆರ್ಥಿಕ ಮತ್ತು ಸಾಮಾಜಿಕ ಪುನರ್ವಸತಿಗಾಗಿ ಅವಕಾಶ ಕಲ್ಪಿಸುವುದು;

(c) ವಿಮೋಚಿತ ಜೀತದಾಳುಗಳಿಗೆ ಸಾಕಷ್ಟು ಸಾಲಸೌಲಭ್ಯಗಳನ್ನು ಒದಗಿಸುವ ದೃಷ್ಟಿಯಿಂದ ಗ್ರಾಮೀಣ ಬ್ಯಾಂಕುಗಳ ಮತ್ತು ಸಹಕಾರಿ ಸಂಘಗಳ ಪ್ರಕಾರ್ಯಗಳನ್ನು ಸಂಯೋಜಿಸುವುದು;

(d) ಈ ಅಧಿನಿಯಮದ ಮೇರೆಗೆ ಗಮನಕ್ಕೆ ತೆಗೆದುಕೊಂಡಿರುವ ಅಪರಾಧಗಳ ಸಂಖ್ಯೆಯ ಮೇಲೆ ನಿಗಾ ಇಡುವುದು;

(e) ಈ ಅಧಿನಿಯಮದ ಮೇರೆಗೆ ಗಮನಕ್ಕೆ ತೆಗೆದುಕೊಳ್ಳಬೇಕಾದ ಅಪರಾಧ ಯಾವುದಾದರೂ ಇದೆಯೋ ಎಂಬುದರ ಬಗ್ಗೆ ಸಮೀಕ್ಷೆ ಮಾಡುವುದು;

(f) ವಿಮೋಚಿತನಾದ ಜೀತದಾಳಿನ ಅಥವಾ ಅವನ ಕುಟುಂಬದ ಯಾವನೇ ವ್ಯಕ್ತಿಯ ಅಥವಾ ಅವನ ಮೇಲೆ ಅವಲಂಬಿತನಾದ ಯಾವನೇ ಇತರ ವ್ಯಕ್ತಿಯ ವಿರುದ್ಧ ಯಾವುದೇ ಜೀತದ ಯಾವುದೇ ಪೂರ್ತಿ ಸಾಲವನ್ನು ಅಥವಾ ಅದರ ಯಾವುದೇ ಭಾಗವನ್ನು ಅಥವಾ ಜೀತದ ಸಾಲವೆಂದು ಅಂಥ ವ್ಯಕ್ತಿಯು ಕ್ಲೇಮು ಮಾಡಿದ ಇತರ ಯಾವುದೇ ಸಾಲವನ್ನು ವಸೂಲಿ ಮಾಡಲು ಹೂಡಿದ ಯಾವುದೇ ದಾವೆಯಲ್ಲಿ ಅವನ ಪರವಾಗಿ ಪ್ರತಿವಾದಿಸುವುದು.

(2) ವಿಮೋಚಿತ ಜೀತದಾಳಿನ ವಿರುದ್ಧ ಹೂಡಿದ ದಾವೆಯಲ್ಲಿ ಅವನ ಪರವಾಗಿ ಪ್ರತಿವಾದಿಸಲು ಜಾಗೃತಿ ಸಮಿತಿಯು ತನ್ನ ಸದಸ್ಯರಲ್ಲಿ ಒಬ್ಬರಿಗೆ ಪ್ರಾಧಿಕಾರವನ್ನು ಕೊಡಬಹುದು ಮತ್ತು ಹಾಗೆ ಪ್ರಾಧಿಕಾರವನ್ನು ಹೊಂದಿದ ಸದಸ್ಯನನ್ನು ಅಂತಹ ದಾವೆಯ ಉದ್ದೇಶಕ್ಕಾಗಿ ವಿಮೋಚಿತ ಜೀತದಾಳಿನ ಅಧಿಕೃತ ಪ್ರಾಧಿಕರ್ತನೆಂದು ಭಾವಿಸತಕ್ಕದು.

ಪರಿಚ್ಛೇದ 15 : ಜೀತದಾಳುವಿನ ಹೇಳಿಕೆಯನ್ನು ಯಜಮಾನನು ಅಲ್ಲಗಳೆದರೆ ಅದನ್ನು ರುಜುವಾತುಪಡಿಸುವ ಭಾರ ಯಜಮಾನನದು; ಜೀತದಾಳಿದ್ದಲ್ಲ.

ಅಧ್ಯಾಯ 6 : ಅಪರಾಧಗಳು, ಶಿಕ್ಷೆಗಳು ಮತ್ತು ಅಪರಾಧದ ವಿಚಾರಣೆಯ ಕ್ರಮ (ಪರಿಚ್ಛೇದ 16 - 23 ಮತ್ತು 9)

ಜೀತಪದ್ಧತಿ ಮತ್ತು ಜೀತದಾಳುಗಳನ್ನು ಗುರುತಿಸುವ ತರಬೇತಿ ಕೈಪಿಡಿ

ಪೂರಕ ಓದುವಿಕೆ-VI
ಜೀತಪದ್ಧತಿ ರದ್ದತಿ ಅಧಿನಿಯಮ-ಒಂದು ಪಕ್ಷಿನೋಟ

ಪರಿಚ್ಛೇದ 16 : ಜೀತದಾಳುವಿನಿಂದ ಬಲಾತ್ಕಾರವಾಗಿ ದುಡಿಸಿಕೊಂಡರೆ ಮೂರು ವರ್ಷ ಸೆರೆಮನೆ ಹಾಗೂ 2000 ರೂಪಾಯಿ ದಂಡ.

ಪರಿಚ್ಛೇದ 17 : ಜೀತಕ್ಕೋಸ್ಕರ ಮುಂಗಡ ನೀಡಿದರೆ ಮೂರು ವರ್ಷ ಸೆರೆಮನೆ ಹಾಗೂ 2000 ರೂಪಾಯಿ ದಂಡ.

ಪರಿಚ್ಛೇದ 18 : ಜೀತ ಪದ್ಧತಿಗೆ ಅನುಸಾರವಾಗಿ ಯಾವುದೇ ರೂಢಿ, ಸಂಪ್ರದಾಯ, ಒಪ್ಪಂದ, ಕರಾರು ಮತ್ತು ಇನ್ನಿತರ ಯಾವುದೇ ಸಾಧನಗಳನ್ನು ಜಾರಿಗೊಳಿಸಿದರೆ ಮೂರು ವರ್ಷ ಸೆರೆಮನೆ ಹಾಗೂ 2000 ರೂಪಾಯಿ ದಂಡ.

ಪರಿಚ್ಛೇದ 19 : ಜೀತದಾಳುವಿನ ಯಾವುದೇ ಆಸ್ತಿಯನ್ನು ಹಿಂತಿರುಗಿಸದಿದ್ದರೆ ಒಂದು ವರ್ಷ ಸೆರೆಮನೆ ಹಾಗೂ 1000 ರೂಪಾಯಿ ದಂಡ.

ಪರಿಚ್ಛೇದ 9 : ಸಾಲಿಗನು ಜೀತಸಾಲದ ಪರವಾಗಿ ಯಾವುದೇ ಪಾವತಿಯನ್ನು ಪಡೆದರೆ ಅವನಿಗೆ ಮೂರು ವರ್ಷ ತನಕ ಜೈಲುಶಿಕ್ಷೆ ಮತ್ತು ದಂಡವನ್ನು ವಿಧಿಸಬಹುದು. ವಿಧಿಸಿದ ದಂಡವನ್ನು ಸಾಲಿಗನು ಬ್ಯಾಂಕೊಂದರಲ್ಲಿ ಜಮಾಯಿಸಿ ಜೀತದಾಳುವಿಗೆ ಅದನ್ನು ಒದಗಿಸಬೇಕು.

ಪರಿಚ್ಛೇದ 20 : ಜೀತ ಪದ್ಧತಿಗೆ ಯಾವುದೇ ರೀತಿಯ ಪ್ರೋತ್ಸಾಹ / ಕುಮ್ಮಕು ನೀಡಿದರೆ ಪ್ರೋತ್ಸಾಹ ನೀಡಲಾದ ಅಪರಾಧದಷ್ಟೇ ಶಿಕ್ಷೆಯನ್ನು ವಿಧಿಸಲಾಗುವುದು.

ಪರಿಚ್ಛೇದ 21 : ಮೊದಲನೇ ಅಥವಾ ಎರಡನೇ ವರ್ಗದ ನ್ಯಾಯಿಕ ದಂಡಾಧಿಕಾರಿಯ ಅಧಿಕಾರವನ್ನು ಕಾರ್ಯಾಂಗ ದಂಡಾಧಿಕಾರಿಗಳಿಗೆ ರಾಜ್ಯ ಸರ್ಕಾರವು ನೀಡಬಹುದು.

ಪರಿಚ್ಛೇದ 22 : ಕಾನೂನಿನಡಿಯ ಅಪರಾಧಗಳು ಸಂಜ್ಞೆಯ ಮತ್ತು ಜಾಮೀನಿಯವಾಗಿವೆ.

ಪರಿಚ್ಛೇದ 23 : ಕಾನೂನಿನಡಿ ಒಂದು ಕಂಪೆನಿಯಲ್ಲಿ ಅಪರಾಧ ಜರುಗಿದರೆ ಆ ಕಂಪೆನಿಯ ಜವಾಬ್ದಾರಿ ಇರುವ ವ್ಯಕ್ತಿ ಮತ್ತು ಆ ಕಂಪೆನಿಯೂ ಅಪರಾಧಿಗಳೆನಿಸುವರು.

ಅಧ್ಯಾಯ 7 : ಉಳಿಕೆ ವಿಷಯಗಳು (ಪರಿಚ್ಛೇದ 24 - 27)

ಪರಿಚ್ಛೇದ 24 : ಈ ಕಾನೂನಿನಡಿ ರಾಜ್ಯಸರ್ಕಾರ, ರಾಜ್ಯಸರ್ಕಾರದ ಯಾವನೇ ಅಧಿಕಾರಿ, ಜಾಗೃತಿ ಸಮಿತಿಯ ಯಾವನೇ ಸದಸ್ಯ ಸದ್ಭಾವನೆಯಿಂದ ಮಾಡಿದ ಯಾವುದೇ ಕಾರ್ಯದ ಬಗ್ಗೆ ದಾವೆ ಹೂಡಲಾಗುವುದಿಲ್ಲ.

ಪರಿಚ್ಛೇದ 25 : ಕಾನೂನಿನಡಿ ಯಾವುದೇ ವಿಷಯಕ್ಕೆ ಸಂಬಂಧ ಪಟ್ಟಂತೆ ಯಾವುದೇ ಸಿವಿಲ್ ಕೋರ್ಟು ಹೊರತಾಗಿದೆ.

ಪರಿಚ್ಛೇದ 26: ಕೇಂದ್ರ ಸರ್ಕಾರವು ಈ ಕಾನೂನಿನಡಿ ನಿಯಮಗಳನ್ನು ರಚಿಸಬಹುದು.

ಪರಿಚ್ಛೇದ 27 : ಜೀತಪದ್ಧತಿ ರದ್ದತಿ ಅಧ್ಯಾದೇಶ, 1975ನ್ನು ರದ್ದುಪಡಿಸಲಾಗಿದೆ. ಆದರೆ ಅಧ್ಯಾದೇಶದಡಿಯಲ್ಲಿ ಇಷ್ಟರವರೆಗೆ ತೆಗೆದುಕೊಂಡ ಕ್ರಮವು ಕಾನೂನಿನಡಿ ತೆಗೆದುಕೊಂಡ ಕ್ರಮ ಎಂತಲೇ ಪರಿಗಣಿಸಲಾಗುವುದು.

ಪೂರಕ ಓದುವಿಕೆ - VII

ಜೀತ ಪದ್ಧತಿಗೆ ಕುರಿತಂತೆ ಜೀತ ಕಾನೂನಿನಲ್ಲಿರುವ ಮುಖ್ಯ ಪರಿಭಾಷೆಗಳು

2. ಪರಿಭಾಷೆಗಳು -

1. " **'ಮುಂಗಡ'** ಎಂದರೆ, ಒಬ್ಬ ವ್ಯಕ್ತಿಯು (ಸಾಲಲಿಗನು) ಇನ್ನೊಬ್ಬ ವ್ಯಕ್ತಿಗೆ (ಸಾಲಗಾರನಿಗೆ) ನಗದು ರೂಪದಲ್ಲಿ ಅಥವಾ ವಸ್ತು ರೂಪದಲ್ಲಿ ಅಥವಾ ಭಾಗಶಃ ನಗದು ರೂಪದಲ್ಲಿ ಅಥವಾ ಭಾಗಶಃ ವಸ್ತು ರೂಪದಲ್ಲಿ ಕೊಟ್ಟದ್ದು [S. 2(a)]."

2. " **'ಒಪ್ಪಂದ'** ಎಂದರೆ, ಸಾಲಗಾರ ಮತ್ತು ಸಾಲಿಗನ ನಡುವಿನ (ಲಿಖಿತ, ಬಾಯಿ ಮಾತಿನ ಅಥವಾ ಭಾಗಶಃ ಲಿಖಿತ ಮತ್ತು ಭಾಗಶಃ ಬಾಯಿ ಮಾತಿನ ಒಪ್ಪಂದವೆಂದು ಅರ್ಥ;

ಸಾಲಗಾರ ಮತ್ತು ಸಾಲಿಗನ ನಡುವಿನ ಒಪ್ಪಂದದ ಅಸ್ತಿತ್ವವನ್ನು ಸಾಮಾನ್ಯವಾಗಿ ಸಾಮಾಜಿಕ ಪದ್ಧತಿಯ ಮೇರೆಗೆ, ಬಲಾತ್ಕಾರದ ದುಡಿಮೆಯ ಕೆಳಕಂಡ ಪ್ರಕಾರಗಳಿಗೆ ಸಂಬಂಧಿಸಿದಂತೆ, ಪೂರ್ವಭಾವನೆ ಮಾಡಲಾಗುತ್ತದೆ:- ಆದಿಯಾಮಾರ್, ಬಾರಾಮಾಸಿಯ, ಬಸಹಯಾ, ಬೇಘೂ, ಭಗೇಲಾ, ಚೆರೂಮಾರ್, ಗಾರುಗಲ್ಲು, ಹಾಲಿ, ಹಾಲಿ, ಹಾರವಯಿ, ಹೊಲೆಯ, ಜಾನಾ, ಜೀತ, ಕಾಮಿಯ, ಖುಂದಿತ್-ಮುಂಡಿತ್, ಕುತಿಯ, ಲೆಖೇರಿ, ಮುಂರಿ, ಮೇಟ್, ಮುನೀಷ್ ಪದ್ಧತಿ, ನಿತ್-ಮಜೂರ್, ಪಲೇರು, ಪಡಿಯಾಲ್, ಪನ್ನಯಿಲಾಲ್, ಸಾಗಡಿ, ಸಂಜಿ, ಸಂಜಾವತ್, ಸೇವಕ, ಸೇವಕಿಯಾ, ಸೆರಿ, ವೆಟ್ಟಿ [S. 2(b)]."

3. " **'ನಾಮಮಾತ್ರ ಮಜೂರಿ'** ಎಂದರೆ.-

   (a) ಅದೇ ಅಥವಾ ಅಂತದೇ ದುಡಿಮೆಯ ಸಂಬಂಧದಲ್ಲಿ ಸರ್ಕಾರವು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ವಿಧಿಯ ಮೇರೆಗೆ ಗೊತ್ತುಪಡಿಸಿದ ಕನಿಷ್ಟ ಮಜೂರಿಗಿಂತ ಕಡಿಮೆಯಿರುವ ಮಜೂರಿ, ಮತ್ತು

   (b) ಯಾವುದೇ ದುಡಿಮೆಯ ಪ್ರಕಾರಕ್ಕೆ ಸಂಬಂಧಿಸಿದಂತೆ ಅಂತಹ ಕನಿಷ್ಟ ಮಜೂರಿಯನ್ನು ಗೊತ್ತುಪಡಿಸದಿರುವಲ್ಲಿ, ಅದೇ ಪ್ರದೇಶದಲ್ಲಿ ಕೆಲಸ ಮಾಡುತ್ತಿರುವ ದುಡಿಮೆದಾರರಿಗೆ ಅದೇ ಅಥವಾ ಅಂಥದೇ ದುಡಿಮೆಗಾಗಿ ಸಾಮಾನ್ಯವಾಗಿ ಸಂದಾಯ ಮಾಡುತ್ತಿರುವ ಮಜೂರಿಗಿಂತಲೂ ಕಡಿಮೆಯಿರುವ ಮಜೂರಿ [S. 2(i)]."

4. " **'ಜೀತ-ಸಾಲ'** ಎಂದರೆ, ಜೀತಗಾರಿಕೆ ಪದ್ಧತಿಯ ಮೇರೆಗೆ ಅಥವಾ ಅದಕ್ಕನುಸಾರವಾಗಿ ಜೀತದಾಳು ಪಡೆದ ಅಥವಾ ಪಡೆದನೆಂದು ಪೂರ್ವಭಾವನೆ ಮಾಡಲಾದ ಮುಂಗಡ [S. 2(d)]."

5. " **'ಜೀತಗಾರಿಕೆ'** ಎಂದರೆ, ಜೀತಗಾರಿಕೆ ಪದ್ಧತಿಯ ಮೇರೆಗೆ ಮಾಡುವ ಯಾವುದೇ ದುಡಿಮೆ ಅಥವಾ ಸೇವೆ [S. 2(b)]."

6. " **'ಜೀತದಾಳು'** ಎಂದರೆ, ಒಂದು ಜೀತ-ಸಾಲವನ್ನು ಮಾಡುವ ಅಥವಾ ಮಾಡಿರುವ, ಅಥವಾ ಮಾಡಿರುವನೆಂದು ಪೂರ್ವಭಾವನೆ ಮಾಡಲಾದ ಒಬ್ಬ ದುಡಿಮೆಗಾರ [S. 2(b)]."

7. " **'ಜೀತಗಾರಿಕೆ ಪದ್ಧತಿ'** ಎಂದರೆ, ಯಾವ ಪದ್ಧತಿ ಮೇರೆಗೆ ಒಬ್ಬ ಸಾಲಗಾರನು, ಕೆಳಕಂಡವುಗಳಿಗಾಗಿ ಸಾಲಿಗನೊಂದಿಗೆ ಒಪ್ಪಂದ ಮಾಡಿಕೊಳ್ಳುತ್ತಾನೋ,

ಪೂರಕ ಓದುವಿಕೆ-VII
ಜೀತ ಕಾನೂನಿನಲ್ಲಿರುವ ಬಹು ಮುಖ್ಯ ಪರಿಭಾಷೆಗಳು

ಮಾಡಿಕೊಂಡಿರುವನೋ ಅಥವಾ ಮಾಡಿಕೊಂಡಿರುವನೆಂದು ಪೂರ್ವಭಾವನೆ ಮಾಡಲಾಗಿದೆಯೋ ಆ ಬಲಾತ್ಕಾರದ ಅಥವಾ ಭಾಗಶಃ ಬಲಾತ್ಕಾರದ ದುಡಿಮೆಯ ಪದ್ಧತಿ:-

(i) ತಾನು ಅಥವಾ ತನ್ನ ಪಾರಂಪರಿಕ ಪೂರ್ವಜರಲ್ಲಿ ಅಥವಾ ವಂಶಜರಲ್ಲಿ ಯಾರಾದರೂ ತೆಗೆದುಕೊಂಡಿರುವ ಮುಂಗಡದ (ಅಂತಹ ಮುಂಗಡದ ಬಗ್ಗೆ ಯಾವುದೇ ದಸ್ತಾವೇಜಿನ ಸಾಕ್ಷ್ಯವಿರಲಿ, ಇಲ್ಲದಿರಲಿ) ಪ್ರತಿಫಲಕ್ಕಾಗಿ ಮತ್ತು ಅಂತಹ ಮುಂಗಡದ ಮೇಲೆ ಬಾಕಿಯಿರುವ ಬಡ್ಡಿಯೇನಾದರೂ ಇದ್ದರೆ ಅದರ ಪ್ರತಿಫಲಕ್ಕಾಗಿ; ಅಥವಾ

(ii) ಯಾವುದೇ ರೂಢಿಗತ ಅಥವಾ ಸಾಮಾಜಿಕ ಬಾಧ್ಯತೆಗೆ ಅನುಸಾರವಾಗಿ; ಅಥವಾ

(iii) ಉತ್ತರಾಧಿಕಾರದಿಂದ ತನಗೆ ಪ್ರಾಪ್ತವಾದ ಯಾವುದೇ ಬಾಧ್ಯತೆಗೆ ಅನುಸಾರವಾಗಿ; ಅಥವಾ

(iv) ತಾನು ಅಥವಾ ಪಾರಂಪರಿಕ ಪೂರ್ವಜರಲ್ಲಿ ಅಥವಾ ವಂಶಜರಲ್ಲಿ ಯಾರಾದರೂ ಪಡೆದಿದ್ದ ಯಾವುದೇ ಆರ್ಥಿಕ ಪ್ರತಿಫಲಕ್ಕಾಗಿ; ಅಥವಾ

(v) ತಾನು ಯಾವುದೇ ನಿರ್ದಿಷ್ಟ ಜಾತಿ ಅಥವಾ ಪಂಗಡದಲ್ಲಿ ಹುಟ್ಟಿದ ಕಾರಣದಿಂದಾಗಿ,-

ಅವನು,

(1) ತಾನಾಗಿ ಅಥವಾ ತನ್ನ ಕುಟುಂಬದ ಯಾವನೇ ವ್ಯಕ್ತಿಯ ಅಥವಾ ತನ್ನನ್ನು ಅವಲಂಬಿಸಿರುವ ಯಾವನೇ ವ್ಯಕ್ತಿಯ ಮೂಲಕ ಸಾಲಿಗನಿಗೆ, ಅಥವಾ ಸಾಲಿಗನ ಪ್ರಯೋಜನಕ್ಕಾಗಿ ಒಂದು ನಿರ್ದಿಷ್ಟ ಅವಧಿಗಾಗಿ ಅಥವಾ ಅನಿರ್ದಿಷ್ಟ ಅವಧಿಗಾಗಿ ಮಜೂರಿಯಿಲ್ಲದೆಯೆ ಅಥವಾ ನಾಮಮಾತ್ರ ಮಜೂರಿಗಾಗಿ ದುಡಿಮೆ ಅಥವಾ ಸೇವೆ ಸಲ್ಲಿಸಬೇಕಾಗುವುದು, ಅಥವಾ

(2) ಒಂದು ನಿರ್ದಿಷ್ಟ ಅವಧಿಗಾಗಿ ಅಥವಾ ಅನಿರ್ದಿಷ್ಟ ಅವಧಿಗಾಗಿ ಉದ್ಯೋಗ ಸ್ವಾತಂತ್ರ್ಯವನ್ನು ಅಥವಾ ಜೀವನೋಪಾಯದ ಇತರ ಮಾರ್ಗಗಳನ್ನು ಕಳೆದುಕೊಳ್ಳುವುದು, ಅಥವಾ

(3) ಭಾರತದ ರಾಜ್ಯ ಕ್ಷೇತ್ರದಾದ್ಯಂತ ಸ್ವತಂತ್ರವಾಗಿ ಸಂಚರಿಸಲು ಇರುವ ಅಧಿಕಾರವನ್ನು ಕಳೆದುಕೊಳ್ಳುವುದು, ಅಥವಾ

(4) ತನ್ನ ಯಾವುದೇ ಸ್ವತ್ತನ್ನು ಅಥವಾ ತನ್ನ ದುಡಿಮೆಯ ಅಥವಾ ತನ್ನ ಕುಟುಂಬದ ವ್ಯಕ್ತಿಯ ಅಥವಾ ತನ್ನನ್ನು ಅವಲಂಬಿಸಿರುವ ಯಾವನೇ ವ್ಯಕ್ತಿಯ ದುಡಿಮೆಯಿಂದ ಗಳಿಸದ ಯಾವುದೇ ಉತ್ಪಾದನೆಯನ್ನು ವಿನಿಯೋಗಿಸಲು ಅಥವಾ ಮಾರುಕಟ್ಟೆ ಮೌಲ್ಯದಲ್ಲಿ ಮಾರಾಟ ಮಾಡಲು ಇರುವ ಅಧಿಕಾರವನ್ನು ಕಳೆದುಕೊಳ್ಳುವುದು,

ಮತ್ತು ಯಾವುದರ ಮೇರೆಗೆ ಸಾಲಗಾರನ ಒಬ್ಬ ಜಾಮೀನುದಾರನು, ಸಾಲಗಾರನು ಋಣವನ್ನು ತೀರಿಸಲು ತಪ್ಪಿದ ಸಂದರ್ಭದಲ್ಲಿ ಸಾಲಗಾರನ ಪರವಾಗಿ ತಾನು ಜೀತಗಾರಿಕೆಯನ್ನು ಮಾಡುವುದಾಗಿ ಸಾಲಿಗನೊಂದಿಗೆ ಒಂದು ಒಪ್ಪಂದವನ್ನು ಮಾಡಿಕೊಳ್ಳುವನೋ ಅಥವಾ ಮಾಡಿಕೊಂಡಿರುವನೋ ಅಥವಾ ಮಾಡಿಕೊಂಡಿರುವನೆಂದು ಪೂರ್ವಭಾವನೆ ಮಾಡಲಾಗಿದೆಯೋ ಆ ಬಲಾತ್ಕಾರದ ಅಥವಾ ಭಾಗಶಃ ಬಲಾತ್ಕಾರದ ದುಡಿಮೆಯ ಪದ್ಧತಿಯನ್ನು ಇದು ಒಳಗೊಳ್ಳುತ್ತದೆ.

ಪ್ರಕರಣ-VII

ಜೀತ ಕಾನೂನಿನಲ್ಲಿರುವ ಮುಖ್ಯ ಪರಿಭಾಷೆಗಳು

ವಿವರಣೆ: ಸಂಶಯಗಳ ನಿವಾರಣೆಗಾಗಿ (1985ರ ತಿದ್ದುಪಡಿಯಿಂದ) ಘೋಷಿಸಿರುವುದೇನೆಂದರೆ ಬಲಾತಾ ರದ ಅಥವಾ ಭಾಗಶಃ ಬಲಾತಾ ರದ ದುಡಿಮೆಯ ಯಾವುದೇ ಪದ್ಧತಿ ಮೇರೆಗೆ ಗುತ್ತಿಗೆ ಕಾರ್ಮಿಕ (ನಿಯಂತ್ರಣ ಮತ್ತು ನಿಷೇಧ) ಅಧಿನಿಯಮ, 1970 (1970ರ 73)ರ ಪರಿಚ್ಛೇಧ 2 ಉಪ ಪರಿಚ್ಛೇಧ (1) ವಾಕ್ಯಭಾಗ (c)ಯಲ್ಲಿ ವ್ಯಾಖ್ಯಾನಿಸಲಾದ ಅಥವಾ ಅಂತಾರಾಜ್ಯ ವಲಸೆ ಕಾರ್ಮಿಕ (ಉದ್ಯೋಗದ ನಿಯಂತ್ರಣ ಮತ್ತು ಸೇವೆಯ ಪರಿಸ್ಥಿತಿಗಳು) ಅಧಿನಿಯಮ, 1979 (1979ರ 30)ರ ಪರಿಚ್ಛೇಧ 2 ಉಪ ಪರಿಚ್ಛೇಧ (1) ವಾಕ್ಯಭಾಗ (e)ಯಲ್ಲಿ ವ್ಯಾಖ್ಯಾನಿಸಲಾದ ಒಬ್ಬ ಕಾರ್ಮಿಕನು ಮೇಲಿನ ವಾಕ್ಯಭಾಗದ ಉಪ ಪರಿಚ್ಛೇಧ (1)ರಲ್ಲಿ ನಮೂದಿಸಲಾದ ಪರಿಸ್ಥಿತಿಗಳಲ್ಲಿ ದುಡಿಮೆ ಅಥವಾ ಸೇವೆಯನ್ನು ಸಲ್ಲಿಸುವ ನಿರ್ಬಂಧವಿದೆಯೋ ಅಥವಾ ಉಪಪರಿಚ್ಛೇಧ 2ರಿಂದ 4ರಲ್ಲಿ ನಮೂದಿಸಿದ ನಿರ್ಬಂಧಗಳಿಗೆ ಒಳಗಾಗಿದ್ದಾನೋ ಅದು ಈ ಉಪವಾಕ್ಯದಡಿ 'ಜೀತಗಾರಿಕೆ (/ಜೀತ) ಪದ್ಧತಿ' ಎನಿಸುವುದು (S. 2g)."

ಮೇಲಿನ ಪರಿಭಾಷೆಗಳನ್ನು ಸರಳ ಮಾತುಗಳಲ್ಲಿ ಮುಂದೆ ವಿವರಿಸಲಾಗಿದೆ

1. **ಮುಂಗಡ:** ಎಂದರೆ ಒಬ್ಬ ವ್ಯಕ್ತಿಯು (ಸಾಲಿಗ) ಇನ್ನೊಬ್ಬ ವ್ಯಕ್ತಿಗೆ (ಸಾಲಗಾರ) ಕೊಟ್ಟ ಹಣ ಅಥವಾ ವಸ್ತುಗಳು. ಅದನ್ನು ಸ್ವಲ್ಪ ಹಣದ ರೂಪದಲ್ಲಿ, ಸ್ವಲ್ಪ ವಸ್ತುಗಳ ರೂಪದಲ್ಲಿ ಕೊಡಬಹುದು [S. 2(a)].
2. **ಒಪ್ಪಂದ:** ಎಂದರೆ ಸಾಲಿಗ ಮತ್ತು ಸಾಲಗಾರನ ನಡುವೆ ಲಿಖಿತ ಅಥವಾ ಬಾಯಿಮಾತಿನ ಒಪ್ಪಂದ [S. 2(b)].
3. **ನಾಮಮಾತ್ರ ಮಜೂರಿ:** ಎಂದರೆ ಸರ್ಕಾರ ನಿಗಧಿಪಡಿಸಿರುವ ಕನಿಷ್ಟ ವೇತನಕ್ಕಿಂತ ಕಡಿಮೆ ಕೂಲಿ ಅಥವಾ ಸರ್ಕಾರ ಕನಿಷ್ಟವೇತನ ಗೊತ್ತುಪಡಿಸದಿದ್ದ ಕಡೆ ಪ್ರಚಲಿತ ಕೂಲಿಗಿಂತ ಕಡಿಮೆ ಕೂಲಿ [S. 2(i)].
4. **ಜೀತಸಾಲ:** ಎಂದರೆ ಜೀತಗಾರಿಕೆ ಪದ್ಧತಿ ಮೇರೆಗೆ ಅಥವಾ ಅದಕ್ಕನುಸಾರವಾಗಿ ಜೀತದಾಳು ಪಡೆದ ಅಥವಾ ಪಡೆದನೆಂದು ತಿಳಿದುಕೊಂಡಿರುವ ಮುಂಗಡ [S. 2(d)].
5. **ಜೀತ:** ಎಂದರೆ ಜೀತ ಪದ್ಧತಿ ಮೇರೆಗೆ ಮಾಡುವ ಯಾವುದೇ ದುಡಿಮೆ ಅಥವಾ ಸೇವೆ [S. 2(e)].
6. **ಜೀತದಾಳು:** ಎಂದರೆ ಒಂದು ಜೀತಸಾಲವನ್ನು ಮಾಡುವ ಅಥವಾ ಮಾಡಿರುವ ಅಥವಾ ಮಾಡಿರುವನೆಂದು ತಿಳಿದುಕೊಳ್ಳಲಾದ ಒಬ್ಬ ದುಡಿಮೆಗಾರ [S. 2(f)].
7. **ಜೀತಪದ್ಧತಿ** [S. 2(g)]: ಜೀತ ಪದ್ಧತಿ ಒಂದು ಬಲಾತ್ಕಾರದ ಅಥವಾ ಭಾಗಶಃ ಬಲಾತ್ಕಾರದ ದುಡಿಮೆಯ ಪದ್ಧತಿ. ಅದರಲ್ಲಿ,

1) ಸಾಲಗಾರನು ಸಾಲಿಗನಿಂದ ಸಾಲ ಪಡೆಯುತ್ತಾನೆ.

2) ಸಾಲ ಪಡೆಯುವಾಗ ಸಾಲಗಾರನು ಸಾಲಿಗನೊಂದಿಗೆ ಮಾಡಿರುವ ಒಪ್ಪಂದದಲ್ಲಿ ಕೆಳಗಿನ ಮೊದಲನೇ ಅಂಶ ಅಥವಾ ಅದಕ್ಕಿಂತ ಹೆಚ್ಚಿನ ಅಂಶಗಳು ಒಳಗೊಂಡಿರುತ್ತವೆ.

(1)ಸಾಲದ ಬದಲಾಗಿ ಸಾಲಿಗನಿಗೋಸ್ಕರ ದುಡಿಮೆ ಸಲ್ಲಿಸುವುದು.

i) ದುಡಿಮೆಯನ್ನು ಸ್ವಂತವಾಗಿ ಅಥವಾ ತನ್ನ ಕುಟುಂಬದ ಯಾವನೇ ವ್ಯಕ್ತಿಯ ಮೂಲಕ ಸಲ್ಲಿಸುವುದು.

ಜೀತಪದ್ಧತಿ ಮತ್ತು ಜೀತದಾಳುಗಳನ್ನು ಗುರುತಿಸುವ ತರಬೇತಿ ಕೈಪಿಡಿ

ii) ದುಡಿಮೆಯನ್ನು ಒಂದು ನಿರ್ದಿಷ್ಟ ಅಥವಾ ಅನಿರ್ದಿಷ್ಟ ಅವಧಿಗೆ ಸಲ್ಲಿಸುವುದು.

iii) ದುಡಿಮೆಗಾಗಿ ಪ್ರತ್ಯೇಕ ಮಜೂರಿ ಇಲ್ಲದಿರಬಹುದು ಅಥವಾ ಕೇವಲ ನಾಮಮಾತ್ರ ಮಜೂರಿ ಪಡೆಯಬಹುದು.

(2) ಸಾಲ ತೀರುವ ತನಕ ಬೇರೆಡೆ ಕೆಲಸಕ್ಕೆ ಹೋಗುವ ಸ್ವಾತಂತ್ರ್ಯ ಕಳೆದುಕೊಳ್ಳುವುದು.

(3) ಭಾರತದಲ್ಲಿ ಎಲ್ಲೆಡೆ ಸಂಚರಿಸುವ ಸ್ವಾತಂತ್ರ್ಯ ಕಳೆದುಕೊಳ್ಳುವುದು.

(4) ತನ್ನ ದುಡಿಮೆಯ ಯಾವುದೇ ಉತ್ಪಾದನೆಯನ್ನು ಸಾಲಿಗನಿಗೆ ಒಪ್ಪಿಸುವುದು.

3) ಮೇಲಿನ ಒಪ್ಪಂದವನ್ನು ಮಾಡಲು ಈ ಕೆಳಗಿನ ಒಂದು ಅಥವಾ ಹೆಚ್ಚು ವಿಷಯಗಳು ಕಾರಣವಾಗಬಹುದು :

(1) ತಾನು ಅಥವಾ ತನ್ನ ಕುಟುಂಬದ ಯಾವನೇ ವ್ಯಕ್ತಿ ತೆಗೆದುಕೊಂಡ ಮುಂಗಡ (ಅದಕೆ ದಸ್ತಾವೇಜಿನ ಸಾಕ್ಷಿ ಇರಲಿ, ಇಲ್ಲದಿರಲಿ) ಅಥವಾ ಅದರ ಬಡ್ಡಿ.

(2) ಸಂಪ್ರದಾಯ ಅಥವಾ ಸಾಮಾಜಿಕ ಒತ್ತಡ.

(3) ಉತ್ತರಾಧಿಕಾರದಿಂದ ಬಂದ ನಿರ್ಬಂಧ.

(4) ತಾನು ಅಥವಾ ತನ್ನ ಕುಟುಂಬದ ಯಾವನೇ ವ್ಯಕ್ತಿಯು ಪಡೆದ ಆರ್ಥಿಕ ಪ್ರಯೋಜನ.

(5) ತಾನು ಒಂದು ನಿರ್ದಿಷ್ಟ ಜಾತಿ ಅಥವಾ ಸಮುದಾಯದಲ್ಲಿ ಹುಟ್ಟಿರುವುದು.

(4) ಸಾಲಗಾರನ ಜಾಮೀನುದಾರನು ಸಾಲಗಾರನು ಋಣ ತೀರಿಸಲು ತಪ್ಪಿದ್ದಲ್ಲಿ ಸಾಲಗಾರನ ಬದಲಿಗೆ ಜೀತ ಮಾಡಲು ಒಪ್ಪಂದ ಮಾಡುವ ಬಲಾತ್ಕಾರದ ಅಥವಾ ಭಾಗಶಃ ಬಲಾತ್ಕಾರದ ದುಡಿಮೆಯ ಪದ್ಧತಿಯೂ ಜೀತ ಪದ್ಧತಿ ಎನಿಸುತ್ತದೆ. (S. 2(g))

(5) ಗುತ್ತಿಗೆ ಕಾರ್ಮಿಕರ ಕಾನೂನು ಮತ್ತು ಅಂತಾರಾಜ್ಯ ವಲಸೆ ಕಾರ್ಮಿಕರ ಕಾನೂನುಗಳಲ್ಲಿ ನಮೂದಿಸಿರುವ ಕಾರ್ಮಿಕರು 2)(1)ರಲ್ಲಿ ವಿವರಿಸಿದ ದುಡಿಮೆ ಅಥವಾ ಸೇವೆಯನ್ನು ಮಾಡುವಂತಾಗಿದ್ದರೆ, ಅಥವಾ 2)(2)ರಿಂದ (4)ರಲ್ಲಿ ವಿವರಿಸಿದ ಒಂದು ಅಥವಾ ಎಲ್ಲಾ ನಿರ್ಬಂಧಗಳಿಗೆ ಒಳಗಾಗಿದ್ದರೆ ಅಂತಹ ಬಲಾತ್ಕಾರದ ಅಥವಾ ಭಾಗಶಃ ಬಲಾತ್ಕಾರದ ದುಡಿಮೆಯ ಪದ್ಧತಿಯನ್ನೂ ಜೀತ ಪದ್ಧತಿ ಎಂದು ಕರೆಯಬಹುದು. (S. 2(g) 1985ರಲ್ಲಿ ತಿದ್ದುಪಡಿ ಮೂಲಕ ಕಾನೂನಿಗೆ ಸೇರಿಸಿದ ವಿವರಣೆ)

ಸಂಕ್ಷಿಪ್ತವಾಗಿ ಹೇಳುವುದಾದರೆ ಒಬ್ಬನು ಐದು ಕಾರಣಗಳಲ್ಲಿ ಯಾವುದೇ ಒಂದು ಕಾರಣಕ್ಕಾಗಿ (1. ಸಾಲ ಪಡೆದಿರುವುದು 2. ಬೇರೆ ಆರ್ಥಿಕ ಸೌಲಭ್ಯ ಪಡೆದಿರುವುದು 3. ವಂಶಪಾರಂಪರ್ಯದಿಂದ ಬಂದ ಭಾದ್ಯತೆ 4. ಸಾಮಾಜಿಕ ಸಂಪ್ರದಾಯ 5. ಒಂದು ಸಮುದಾಯಕ್ಕೆ ಸೇರಿರುವುದು) ಮುಂದೆ ಕಾಣಿಸಿದ ನಾಲು ಸ್ವಾತಂತ್ರ್ಯಗಳಲ್ಲಿ (1. ಕೂಲಿಗೆ ಸಂಬಂಧಪಟ್ಟಂತೆ 2. ಕೆಲಸಕ್ಕೆ ಸಂಬಂಧಪಟ್ಟಂತೆ 3. ಚಲಿಸಲಿಕ್ಕೆ ಸಂಬಂಧಪಟ್ಟಂತೆ 4. ಶ್ರಮದ ಪ್ರತಿಫಲಕ್ಕೆ ಸಿಗುವ ತಕ್ಕುದಾದ ಮಾರುಕಟ್ಟೆ ಬೆಲೆಗೆ ಸಂಬಂಧಪಟ್ಟಂತೆ) ಯಾವುದಾದರೂ ಒಂದು ಸ್ವಾತಂತ್ರ್ಯ ಕಳೆದುಕೊಂಡರೆ ಆತ ಜೀತ ಪದ್ಧತಿಗೆ ಒಳಗಾಗುತ್ತಾನೆ.

ಇನ್ನೂ ಸಂಕ್ಷಿಪ್ತವಾಗಿ ಹೇಳುವುದಾದರೆ ಒಬ್ಬನು ಸಾಲ ಪಡೆದಿರುವ ಅಥವಾ ಇನ್ನಿತರ ನಾಲ್ಕು ಕಾರಣಗಳಿಂದ ತನ್ನ ಶ್ರಮವನ್ನು ಮಾರುಕಟ್ಟೆಯ ಬೆಲೆಗೆ ಮಾರುವ ಸ್ವಾತಂತ್ರ್ಯವನ್ನು ಕಳೆದುಕೊಳ್ಳುವುದು,

ಪೂರಕ ಓದುವಿಕೆ-VIII
ಜೀತ ಪದ್ಧತಿ ಕುರಿತು ಎಲ್ಲಾ ಅಂಶಗಳ ಸರಳ ವಿವರಣೆ

ಪೂರಕ ಓದುವಿಕೆ - VIII

ಜೀತ ಪದ್ಧತಿ ಕುರಿತು ಎಲ್ಲಾ ಅಂಶಗಳ ಸರಳ ವಿವರಣೆ

ಜೀತ ಪದ್ಧತಿ ರದ್ದತಿ ಅಧಿನಿಯಮದಲ್ಲಿರುವ ವ್ಯಾಖ್ಯಾನಗಳು, ಸುಪ್ರೀಂ ಕೋರ್ಟಿನ ತೀರ್ಪುಗಳು ಹಾಗೂ ಎ. ಕೆ. ಚಕ್ರವರ್ತಿ ಸಮಿತಿಯ ವರದಿ (1994)ಯಲ್ಲಿಂಯ ಶಿಫಾರಸುಗಳನ್ನು ಗಮನದಲ್ಲಿಟ್ಟು ಜೀತದ ಎಲ್ಲಾ ಅಂಶಗಳ ವಿವರಣೆ ಇಲ್ಲಿ ನೀಡಲಾಗಿದೆ.

1. ಜೀತ ಪದ್ಧತಿ ಒಂದು ಬಲಾತ್ಕಾರದ ದುಡಿಮೆ (ಜೀತ ಕಾನೂನು ಪರಿಚ್ಛೇದ 2g)

ಬಲಾತ್ಕಾರ ಎಂದರೆ ಕೇವಲ ದೈಹಿಕ ಒತ್ತಡ ಅಥವಾ ಕಾನೂನಿನ ಪ್ರಕಾರದ ನಿರ್ಬಂಧ (ದಂಡ, ಸೆರೆವಾಸ) ಮಾತ್ರವಲ್ಲ. ಆರ್ಥಿಕ ಒತ್ತಡಗಳಿಂದ ನಾಮಮಾತ್ರ ಮಜೂರಿ ಅಥವಾ ಮಜೂರಿಯಿಲ್ಲದೇ ದುಡಿಯಲು ಒಪ್ಪಿಕೊಳ್ಳುವ ಪರಿಸ್ಥಿತಿಯೇ ಬಲಾತ್ಕಾರ. (ಪೀಪಲ್ಸ್ ಯೂನಿಯನ್ ಫಾರ್ ಡೆಮೊಕ್ರಾಟಿಕ್ ರೈಟ್ಸ್ ವಿರುದ್ಧ ಯೂನಿಯನ್ ಆಫ್ ಇಂಡಿಯಾ 1982, ಪ್ಯಾರಾ 15)

2. ಸಾಮಾನ್ಯವಾಗಿ ಜೀತದಾಳು ಸಾಲ ಪಡೆದಿರುತ್ತಾನೆ (ಜೀತ ಕಾನೂನು, ಪರಿಚ್ಛೇದ 2g).

- ಸಾಲವು ಹಣದ ರೂಪದಲ್ಲಿರಬಹುದು; ವಸ್ತು ರೂಪದಲ್ಲಿರಬಹುದು; ಸ್ವಲ್ಪ ಹಣ ಸ್ವಲ್ಪ ವಸ್ತುವಿನ ರೂಪದಲ್ಲೂ ಇರಬಹುದು (ಜೀತ ಕಾನೂನು, ಪರಿಚ್ಛೇದ 2a)
- ಸಾಲದ ಲೆಕ್ಕ ಮಾಡುವಾಗ ಅಸಲು ಮತ್ತು ಅದರ ಜೊತೆಗೆ ಬಡ್ಡಿಯನ್ನೂ ಸೇರಿಸಬಹುದು (ಜೀತ ಕಾನೂನು, ಪರಿಚ್ಛೇದ 2g). ಆದ್ದರಿಂದ ಬಡ್ಡಿಗೆ ಮಾತ್ರ ದುಡಿಮೆ ಸಲ್ಲಿಸಿದರೆ ಅದು ಜೀತ; ಅಸಲು ತೀರಿಸಲು ದುಡಿಮೆ ಸಲ್ಲಿಸುವುದು ಜೀತವಲ್ಲ ಎಂದು ಹೇಳುವುದು ಕಾನೂನಿಗೆ ವಿರೋಧ.
- ಮಾಡಿದ ಸಾಲಕ್ಕೆ ಲಿಖಿತ ದಸ್ತಾವೇಜಿನ ಆಧಾರ ಇರಬಹುದು; ಇಲ್ಲದೇ ಇರಬಹುದು. (ಜೀತ ಕಾನೂನು ಪರಿಚ್ಛೇದ 2g)
- ಜೀತ ಕಾನೂನು, ಪರಿಚ್ಛೇದ 15ರ (ರುಜುವಾತಿನ ಭಾರದ) ಪ್ರಕಾರ ಜೀತದಾಳು (ಅಥವಾ ಜಾಗೃತಿ ಸಮಿತಿಯು) ಜೀತಸಾಲ ಮಾಡಿದ್ದೇನೆಂದು (ಮಾಡಿದ್ದಾನೆಂದು) ಅರ್ಜಿ ಸಲ್ಲಿಸಿ ಯಜಮಾನ ಆ ಹೇಳಿಕೆಯನ್ನು ಅಲ್ಲಗಳೆದರೆ ಅದನ್ನು ಕಾನೂನು ರೀತ್ಯಾ ದೃಢಪಡಿಸ ಬೇಕಾಗಿರುವುದು ಯಜಮಾನ; ಜೀತದಾಳುವಲ್ಲ! ಅಂದರೆ ಜೀತದಾಳುವಿನ ಹೇಳಿಕೆಗೆ ಲಿಖಿತ ಆಧಾರ ಬೇಕಿಲ್ಲ. ಅಷ್ಟೇ ಅಲ್ಲ ಆ ಹೇಳಿಕೆಯನ್ನು ಸಮರ್ಥಿಸಬೇಕೆಂತಲೂ ಇಲ್ಲ.
- ಬಲಾತ್ಕಾರದ ಅಂಶ ದೃಢವಾದರೆ ಸಾಲ ಇಲ್ಲದಿದ್ದರೂ ಜೀತ ಎಂದು ಪರಿಗಣಿಸಬೇಕು ಅಥವಾ ಸಾಲ ಇಲ್ಲ ಎಂಬ ಒಂದೇ ಒಂದು ಕಾರಣಕ್ಕೆ ಜೀತದಾಳು ಅಲ್ಲ ಎಂದು ತಿಳಿದುಕೊಳ್ಳಬಾರದು. (ಬಂಧುವಾ ಮುಕ್ತಿ ಮೋರ್ಛಾ ವಿರುದ್ಧ ಯೂನಿಯನ್ ಆಫ್ ಇಂಡಿಯಾ, 1948, ಪ್ಯಾರಾ 24; ಚಕ್ರವರ್ತಿ ಸಮಿತಿ ವರದಿ 3.2, 3.3)

ಜೀತಪದ್ಧತಿ ಮತ್ತು ಜೀತದಾಳುಗಳನ್ನು ಗುರುತಿಸುವ ತರಬೇತಿ ಕೈಪಿಡಿ

ಪ್ರಕರಣ ಅಧ್ಯಯನ-VIII

3. ಜೀತದಾಳು ಯಜಮಾನನ ಜೊತೆ ಒಂದು ಒಪ್ಪಂದ ಮಾಡಿರುತ್ತಾನೆ. ಆ ಒಪ್ಪಂದದಲ್ಲಿ ನಾಲ್ಕು ಅಂಶಗಳು ಬರುತ್ತವೆ. ಆ ನಾಲ್ಕು ಅಂಶಗಳು ಒಟ್ಟಿಗೆ ಇರಬೇಕೆಂತಿಲ್ಲ. ನಾಲ್ಕರಲ್ಲಿ ಯಾವುದಾದರೂ ಒಂದು ಇದ್ದರೂ ಜೀತವನ್ನು ದೃಢೀಕರಿಸುತ್ತದೆ (ಜೀತ ಕಾನೂನು, ಪರಿಚ್ಛೇದ 2g (1)-(4).

ಆ ನಾಲ್ಕು ಅಂಶಗಳು ಬಲಾತ್ಕಾರದ/ಜೀತದ ಬೇರೆ ಬೇರೆ ಮುಖಗಳನ್ನು ತೋರಿಸುತ್ತವೆ. ಆ ನಾಲ್ಕು ಅಂಶಗಳು ಈ ಕೆಳಗಿನಂತಿವೆ:

1) ಸಾಲವನ್ನು ದುಡಿಮೆಯಿಂದ ತೀರಿಸುವುದು
(ಜೀತ ಕಾನೂನು ಪರಿಚ್ಛೇದ 2g(1).

- ❖ ದುಡಿಮೆಯನ್ನು ಸಾಲ ಪಡೆದ ವ್ಯಕ್ತಿ ಅಥವಾ ಅವನ ಮೇಲೆ ಅವಲಂಬಿತವಾಗಿರುವ ಬೇರೆ ಯಾವುದೇ ವ್ಯಕ್ತಿಯು ಸಲ್ಲಿಸಬಹುದು.
- ❖ ದುಡಿಮೆಗೆ ಇಂತಿಷ್ಟೇ ಅವಧಿ ಎಂದಿಲ್ಲ. ಅದು ನಿರ್ದಿಷ್ಟ ಕಾಲ ಅಥವಾ ಅನಿರ್ದಿಷ್ಟಕಾಲದವರೆಗೆ ಇರಬಹುದು. ಅಂದರೆ ವಂಶಪಾರಂಪ ರ್ಯವಾಗಿ ಅಥವಾ ಒಬ್ಬನ ಮರಣ ತನಕ ಅಥವಾ ಕನಿಷ್ಠ ಇಷ್ಟೇ ವರ್ಷದವರೆಗೆ ಬಲಾತ್ಕಾರದ ದುಡಿಮೆ ಸಲ್ಲಿಸಿದರೆ ಅದು ಮಾತ್ರ ಜೀತ ಆಗುತ್ತೆ ಎಂದು ಹೇಳಲಾಗದು. ಒಂದು ವರ್ಷಕ್ಕಿಂತಲೂ ಕಡಿಮೆ ಅಂದರೆ ಒಂದು ಕಾಲಕ್ಕೆ ಮಾತ್ರ ಸೀಮಿತವಾಗಿ, ಉದಾ: ನಾಟಿ ಕಾಲಕ್ಕೆ ಅಥವಾ ಸುಗ್ಗಿ ಕಾಲಕ್ಕೆ ಬಲಾತ್ಕಾರದ ದುಡಿಮೆ ಸಲ್ಲಿಸಿದರೂ ಅದು ಜೀತ ಆಗುತ್ತೆ [ಚಕ್ರವರ್ತಿ ಸಮಿತಿ ವರದಿ, 2.23.(iii)].
- ❖ ದುಡಿಮೆಗೆ ನಾಮಮಾತ್ರ ಮಜೂರಿ ಕೊಡಬಹುದು ಅಥವಾ ಮಜೂರಿ ಇಲ್ಲದೇ ಇರಬಹುದು. ನಾಮಮಾತ್ರ ಮಜೂರಿ ಅಂದರೆ, ಸರ್ಕಾರವು ಕನಿಷ್ಟ ವೇತನ ನಿಗದಿ ಪಡಿಸಿದ ಕಡೆಗಳಲ್ಲಿ ಕನಿಷ್ಟ ವೇತನಕ್ಕಿಂತ ಕಡಿಮೆ ಮಜೂರಿ; ಕನಿಷ್ಟ ವೇತನ ನಿಗದಿ ಪಡಿಸದ ಕಡೆಗಳಲ್ಲಿ ಪ್ರಚಲಿತ ಕೂಲಿಗಿಂತ ಕಡಿಮೆ ಕೂಲಿ (ಜೀತ ಪದ್ಧತಿ ರದ್ದತಿ ಅಧಿನಿಯಮ, ಪರಿಚ್ಛೇದ 2i).

ಸಾಮಾನ್ಯವಾಗಿ ಕಾನೂನಿನಡಿ ತನ್ನ ಸೇವೆಗೆ ಕನಿಷ್ಟ ವೇತನ ಸಿಗಬೇಕು ಎಂದು ಗೊತ್ತಿರುವಾಗ ಒಬ್ಬನು ಇನ್ನೊಬ್ಬನಿಗೆ ಕನಿಷ್ಟ ವೇತನಕ್ಕಿಂತ ಕಡಿಮೆ ಕೂಲಿಗೆ ಸೇವೆ ಸಲ್ಲಿಸಲಾರನು. ಒಬ್ಬನು ಮತ್ತೊಬ್ಬನಿಗೆ ಕನಿಷ್ಟ ವೇತನಕ್ಕಿಂತ ಕಡಿಮೆ ಇರುವ ಕೂಲಿಗೆ ಸೇವೆ ಸಲ್ಲಿಸಿದರೆ ಅವನು ಕೆಲವೊಂದು ಒತ್ತಡಗಳಿಂದ ಆ ರೀತಿ ಮಾಡುತ್ತಾನೆ ಎಂದು ನ್ಯಾಯಬದ್ಧವಾಗಿ ತಿಳಿದುಕೊಳ್ಳಬಹುದು.... ಒಬ್ಬ ವ್ಯಕ್ತಿಯು ಕನಿಷ್ಟ ವೇತನಕಿ ಂತ ಕಡಿಮೆ ವೇತನಕೆ ಮತ್ತೊಬ್ಬನಿಗೆ ಸೇವೆ ಸಲ್ಲಿಸಿದರೆ ಆ ಸೇವೆಯು ಸ್ಪಷ್ಟವಾಗಿ ಸಂವಿಧಾನದ ವಿಧಿ 23ರಲ್ಲಿ ಪ್ರಸ್ತಾಪಿಸಿದ ಬಲಾತಾ ರದ ದುಡಿಮೆಯಡಿ ಬರುತ್ತದೆ (ಪೀಪಲ್ಸ್ ಯೂನಿಯನ್ ಫಾರ್ ಡೆಮೊಕ್ರಾಟಿಕ್ ರೈಟ್ಸ್ ವಿರುದ್ಧ ಯೂನಿಯನ್ ಆಫ್ ಇಂಡಿಯಾ, 1982, ಪ್ಯಾರಾ 15).

ಒಬ್ಬ ಕಾರ್ಮಿಕನು ಬಲಾತ್ಕಾರದ ದುಡಿಮೆ ಸಲ್ಲಿಸಲು ಅವನ ಮೇಲೆ ನಿರ್ಬಂಧ ಹೇರಲಾಗಿದೆ ಎಂದು ತೋರಿಸಲ್ಪಟ್ಟರೆ ಅವನು ಪಡೆದ ಮುಂಗಡ ಅಥವಾ ಬೇರೆ ಆರ್ಥಿಕ ಪ್ರಯೋಜನದಿಂದ ಅದು ಮಾಡಲಾಗಿದೆ; ಆದ್ದರಿಂದ ಅವನು ಜೀತದಾಳು ಎಂದು

ಜೀತಪದ್ಧತಿ ಮತ್ತು ಜೀತದಾಳುಗಳನ್ನು ಗುರುತಿಸುವ ತರಬೇತಿ ಕೈಪಿಡಿ

ನ್ಯಾಯಾಲಯವು ತಿಳಿದುಕೊಳ್ಳುತ್ತದೆ (ಬಂಧುವಾ ಮುಕ್ತಿ ಮೋರ್ಚಾ ವಿರುದ್ಧ ಯೂನಿಯನ್ ಆಫ್ ಇಂಡಿಯಾ, 1984 ಪ್ಯಾರಾ 24). ಮಜೂರಿ ಇಲ್ಲದೇ ನಾಮಮಾತ್ರ ಮಜೂರಿಗೆ ಕೆಲಸ ಮಾಡಲು ಒಬ್ಬ ಕಾರ್ಮಿಕನ ಮೇಲೆ ಬಲಾತ್ಕಾರ ಮಾಡಿದರೆ ಆ ಕಾರ್ಮಿಕನು ಜೀತದಾಳುವೆಂದು ತಿಳಿದುಕೊಳ್ಳಬೇಕು (ನೀರಜ ಚೌಧರಿ ವಿರುದ್ಧ ಸ್ಟೇಟ್ ಆಫ್ ಮಧ್ಯಪ್ರದೇಶ, 1984, ಪ್ಯಾರಾ 3).

ಕನಿಷ್ಟ ವೇತನಕ್ಕಿಂತ ಕಡಿಮೆ ಕೂಲಿ ಕೊಟ್ಟ ಕೂಡಲೇ ಜೀತ ಎಂದು ಪರಿಗಣಿಸಬಹುದೇ?
ಕಾನೂನಿನ ಪ್ರಕಾರ ಮತ್ತು ಸುಪ್ರೀಂ ಕೋರ್ಟಿನ ತೀರ್ಪುಗಳನ್ನು ಒಂದು ರೀತಿಯಲ್ಲಿ ಅರ್ಥೈಸುವಾಗ ಹೌದೆನಿಸುತ್ತದೆ. ಆದರೆ ವಾಸ್ತವ ಗ್ರಾಮೀಣ ಪರಿಸ್ಥಿತಿಯನ್ನು ಗಮನಿಸಿದರೆ ಮತ್ತು ಜೀತ ಕಾನೂನನ್ನೂ ಸುಪ್ರೀಂ ಕೋರ್ಟಿನ ತೀರ್ಪುಗಳನ್ನೂ ಒಟ್ಟಾರೆಯಾಗಿ ಅರ್ಥೈಸಿದರೆ ಕೇವಲ ಕನಿಷ್ಟ ವೇತನ ದೊರಕದಿರುವುದನ್ನೇ ಜೀತ ಎಂದು ಪರಿಗಣಿಸಲಿಕ್ಕಾಗದು. ಅಸಂಘಟಿತ ಕ್ಷೇತ್ರದಲ್ಲಿ ಮತ್ತು ಪ್ರತ್ಯೇಕವಾಗಿ ವ್ಯವಸಾಯ ರಂಗದಲ್ಲಿ ಕನಿಷ್ಟ ವೇತನ ಸಿಗುವುದು ಬಹಳ ಅಪರೂಪ. ಕನಿಷ್ಟ ವೇತನ ಸಿಗದ ಮಂದಿಯಲ್ಲೂ ಎರಡು ಬಹು ಮುಖ್ಯ ವಿಧಗಳನ್ನು ನಾವು ನೋಡುತ್ತೇವೆ. ಒಂದು ವರ್ಗದವರು ಸಾಮಾನ್ಯವಾಗಿ ದಿನಗೂಲಿ ಲೆಕ್ಕದಲ್ಲಿ ಅಥವಾ ಗುತ್ತಿಗೆ ಮೂಲಕ ಕೂಲಿ ಪಡೆಯುವವರು. ಅವರಿಗೆ ದಿವಸದ ಕೊನೆಗೆ ಅಥವಾ ವಾರದ ಕೊನೆಗೆ ಅಥವಾ ಗುತ್ತಿಗೆ ಕೆಲಸದ ನಂತರ ಕೂಲಿ ಸಿಗುವುದು. ಇದು ಸಾಮಾನ್ಯವಾಗಿ ಕನಿಷ್ಟ ವೇತನಕ್ಕಿಂತ ಕಡಿಮೆ ಇರುತ್ತದೆ. ಅದನ್ನು ಪ್ರಚಲಿತ ಕೂಲಿ ಎಂದು ನಾವು ಕರೆಯಬಹುದು. ಇನ್ನೊಂದು ವರ್ಗದಲ್ಲಿ ಅಂಥಹ ಪ್ರಚಲಿತ ಕೂಲಿಯೂ ಸಿಗುವುದಿಲ್ಲ. ಅವರಿಗೆ ಹೆಚ್ಚಾಗಿ ವರ್ಷದ ಲೆಕ್ಕದಲ್ಲಿ 'ಸಂಬಳ' ನಿಗದಿಯಾಗಿರುತ್ತದೆ. ಕೆಲವು ಕಡೆ ತಿಂಗಳ ಲೆಕ್ಕದಲ್ಲಿ 'ಸಂಬಳ' ನಿಗದಿಯಾಗಿರಬಹುದು. ಕೆಲವೇ ಕೆಲವು ಪ್ರದೇಶಗಳಲ್ಲಿ ದಿನದ ಲೆಕ್ಕದಲ್ಲಿಯೂ ಕೂಲಿ ನಿಗದಿಯಾಗಬಹುದು. ಆದರೆ ಇವರೆಲ್ಲರ ಕೈಗೆ ಆ ಸಂಬಳ ಬರುವುದಿಲ್ಲ. ಬರಬೇಕಾದ ಸಂಬಳವನ್ನು ಮಾಡಿದ ಸಾಲದಿಂದ ಸಂಬಳದಿಂದ ವಜಾ ಮಾಡಲಾಗುವುದು.

ಸರ್ವೋಚ್ಛ ನ್ಯಾಯಾಲಯದ ಕೆಲವೊಂದು ತೀರ್ಪುಗಳ ಆಧಾರದ ಮೇಲೆ ಕನಿಷ್ಟ ವೇತನ ಪಡೆಯದ ಎಲ್ಲಾ ಕಾರ್ಮಿಕರನ್ನು ಜೀತದಾಳುಗಳೆಂದು ಪರಿಗಣಿಸುವುದಾದರೆ ಆಗ ಅವು ಅಷ್ಟೊಂದು ತೀವ್ರ ಸ್ವರೂಪದ ಜೀತವೆನಿಸದೆ ಮೇಲೆ ವಿವರಿಸಿದ ತೀವ್ರ ಸ್ವರೂಪದ ಜೀತವನ್ನು ಆದ್ಯತೆ ಮೇರೆಗೆ ನಿರ್ಮೂಲನೆಗೊಳಿಸಬೇಕು.

2) **ಸಾಲ ತೀರುವ ತನಕ ಬೇರೆ ಕಡೆ ಕೆಲಸಕ್ಕೆ ಹೋಗುವ ಸ್ವಾತಂತ್ರ್ಯವಿಲ್ಲ. ಇದು ಬಲಾತ್ಕಾರದ ಅಂಶವನ್ನು ಇನ್ನೂ ಹೆಚ್ಚು ಸ್ಪಷ್ಟವಾಗಿ ತೋರಿಸುತ್ತದೆ. ನಾಮಮಾತ್ರ ಮಜೂರಿ ಬಲಾತ್ಕಾರದ ಅಂಶ ತೋರಿಸಿದರೆ ಇದು ಜೀತದ ವೈಶಿಷ್ಟ್ಯವನ್ನು-ಬಂಧನಕ್ಕೊಳಪಟ್ಟಿರುವುದನ್ನು ಎತ್ತಿ ತೋರಿಸುತ್ತದೆ (ಜೀತ ಕಾನೂನು, ಪರಿಚ್ಛೇದ 2g(2).**

3) **ಭಾರತದ ಬೇರೆಡೆ ತನಗೆ ಇಷ್ಟವಿದ್ದಂತೆ ಸಂಚರಿಸುವಂತಿಲ್ಲ (ಜೀತ ಕಾನೂನು, ಪರಿಚ್ಛೇದ 2g(3).**

ಜೀತದಾಳುಗಳು ಯಜಮಾನನ ಊರಿನವರೇ ಆಗಿದ್ದರೆ ಅಥವಾ ಬೇರೆ ಹತ್ತಿರದ ಊರಿನವರೂ ಆಗಿದ್ದರೆ ರಾತ್ರಿ ಹೊತ್ತು ತಮ್ಮ ಮನೆಗಳಿಗೆ ಹೋಗಿ ಬರುತ್ತಾರೆ. ಅಥವಾ ತಮ್ಮ ಕುಟುಂಬದಲ್ಲಿ ಮಹತ್ವದ ಕಾರ್ಯಗಳಿದ್ದರೆ ಮನೆಗೆ ಹೋಗಿ

ಜೀತಪದ್ಧತಿ ಮತ್ತು ಜೀತದಾಳುಗಳನ್ನು ಗುರುತಿಸುವ ತರಬೇತಿ ಕೈಪಿಡಿ

ಪೂರಕ ಓದುವಿಕೆ-VIII

ಜೀತ ಪದ್ಧತಿ ಕುರಿತು ಎಲ್ಲಾ ಅಂಶಗಳ ಸರಳ ವಿವರಣೆ

ಬರುತ್ತಾರೆ. ಇವು ಬಲಾತ್ಕಾರದ ಅಂಶವನ್ನು ಅಲ್ಲಗಳೆಯುವುದಿಲ್ಲವೆಂದು ಚಕ್ರವರ್ತಿ ಸಮಿತಿ ವರದಿಯು ಸ್ಪಷ್ಟಪಡಿಸುತ್ತದೆ (2.23 iv).

4) **ದುಡಿಮೆಯ ಎಲ್ಲಾ ಉತ್ಪಾದನೆ ಯಜಮಾನನಿಗೆ ಸೇರಬೇಕು (ಜೀತ ಕಾನೂನು, ಪರಿಚ್ಛೇದ** 2g (4).

ಈ ಅಂಶ ಇಲ್ಲದಿದ್ದರೂ ಬಲಾತ್ಕಾರದ ಅಂಶ ಕಡಿಮೆಯಾಗುವುದಿ ಲ್ಲವೆಂದು ಚಕ್ರವರ್ತಿ ಸಮಿತಿ ವರದಿಯು ಹೇಳುತ್ತದೆ (2.23-v).

4. ಜೀತದ ಒಪ್ಪಂದಕ್ಕೆ ಈ ಕೆಳಗಿನ 5 ಕಾರಣಗಳಲ್ಲಿ ಒಂದಾಗಿರಬಹುದು (ಜೀತ ಕಾನೂನು, ಪರಿಚ್ಛೇದ 2g i-v):

1) ಮಾಡಿದ ಸಾಲ (ಅಸಲು ಮತ್ತು ಬಡ್ಡಿ ಇದ್ದರೆ ಬಡ್ಡಿ)

2) ಸಾಮಾಜಿಕ ಅಥವಾ ಸಂಪ್ರದಾಯದ ನಿರ್ಬಂಧ

3) ಉತ್ತರಾಧಿಕಾರದಿಂದ ಬಂದ ನಿರ್ಬಂಧ

4) ಪಡೆದ ಆರ್ಥಿಕ ಸೌಲಭ್ಯ. ಉದಾ: ಮನೆ, ಹೊಲ (ಜೀತ ಕಾನೂನು ಪರಿಚ್ಛೇದ 8 ಜೀತದಾಳುವಿಗೆ ಕೊಟ್ಟ ಮನೆಯನ್ನು ಯಜಮಾನ ಹಿಂದಕ್ಕೆ ಪಡೆಯಬಾರದು ಎಂದು ಹೇಳುತ್ತದೆ. ಕೊಟ್ಟ ಭೂಮಿಯನ್ನೂ ಬಿಡಿಸಬಾರದು ಎಂಬ ಸಲಹೆ ಇದೆ).

5) ನಿರ್ದಿಷ್ಟ ಜಾತಿಯಲ್ಲಿಯ ಹುಟ್ಟು

5. ಜೀತಸಾಲ ಮಾಡಿದಾಗ ಜಾಮೀನುದಾರನಿದ್ದರೆ ಆ ಜಾಮೀನು ದಾರನೂ ಜೀತದಾಳೆನಿಸುವನು (ಜೀತ ಕಾನೂನು,ಪರಿಚ್ಛೇದ 2g).

6. ಗುತ್ತಿಗೆ ಕಾರ್ಮಿಕ ಪದ್ಧತಿ ಅಧಿನಿಯಮ ಹಾಗೂ ಅಂತಾರಾಜ್ಯ ವಲಸೆ ಕಾರ್ಮಿಕರ ಅಧಿನಿಯಮದ ಅಡಿಯಲ್ಲಿ ಬರುವ ಕಾರ್ಮಿಕರು ಬಲಾತ್ಕಾರದ ದುಡಿಮೆಗೆ ಒಳಪಟ್ಟರೆ ಅವರು ಕೂಡಾ ಜೀತದಾಳುಗಳೆನಿಸುತ್ತಾರೆ (ಜೀತ ಕಾನೂನಿನ ಪರಿಚ್ಛೇದ 2g **ಗೆ 1982ರಲ್ಲಿ ಸೇರಿಸಿದ ವಿವರಣೆ).**

'ಜೀತ'
ಬಡತನ
ಅನಕ್ಷರತೆ
ಅಸ್ಪೃಶ್ಯತೆ
ಇತ್ಯಾದಿ....
ಅನಿಷ್ಟಗಳ
ಮುಂದುವರಿಕೆಗೆ
ಕಾರಣ.



ಪೂರಕ ಓದುವಿಕೆ - X

ಜೀತದಾಳುಗಳ ಸಮೀಕ್ಷೆ ಕುರಿತು ಎರಡು ಪಾತ್ರಾಭಿನಯಗಳು

I. ಪ್ರಚಲಿತವಾಗಿ ಅಧಿಕಾರಿಗಳು ನಡೆಸುವ ಸಮೀಕ್ಷೆಯ ಮಾದರಿ

ದೃಶ್ಯ - 1

ತಹಶೀಲ್ದಾರ್ ಕಚೇರಿ (R.I., VA, ಇತರೆ ಅಧಿಕಾರಿಗಳ ಜೊತೆ ಸಭೆ)

ತಹಶೀಲ್ದಾರ್ : ನೋಡಿ ಎಲ್ಲಾ R.I., VAಗಳಿಗೆ ನಾನು ಸೂಚನೆ ಮಾಡೋದು ಏನೆಂದರೆ ನಿಮಗೆ ಸಂಬಂಧಪಟ್ಟಂತೆ ಹಳ್ಳಿಗಳಿಗೆ ಹೋಗಿ ಜೀತದಾಳುಗಳ ಸರ್ವೆ ಮಾಡಿ, ವರದಿಯನ್ನು ಕೂಡಲೇ ಜಿಲ್ಲಾಧಿಕಾರಿಗಳಿಗೆ ಕಳಿಸಬೇಕು.

ಹಾಗೇ ಜನರಿಗೆಲ್ಲಾ ತಿಳಿಸಿ, ಜೀತಕ್ಕೆ ಇಟ್ಟುಕೊಳ್ಳೊದು ತಪ್ಪು ಮತ್ತು ಇರೋದು ತಪ್ಪು. ಒಂದು ವೇಳೆ ಇಂಥ ಪ್ರಕರಣ ಕಂಡು ಬಂದರೆ ಕೂಡಲೇ ಇಬ್ರ ಮೇಲೂ ಕೇಸ್ ಹಾಕ್ತಾರೆ.

VA : (ಪಕ್ಕಕ್ಕೆ ಒಂದು ದೂರವಾಣಿಯಲ್ಲಿ ಪಿಸುಮಾತಿನಲ್ಲಿ)

ನಮಸ್ಕಾರ ಪಟೇಲರೇ, ನಾನು VA ಮಾತಾಡುತ್ತಾ ಇದ್ದೀನಿ. ನಾಳೆ ಬೆಳ್ಳಿಗೆ 10 ಗಂಟೆಗೆ ನಿಮ್ಮ ಮನೆಹತ್ರ RIಯವರು ನಾವೆಲ್ಲಾ ಬರ್‍ತಾ ಇದ್ದೀವಿ. ಅದೇ ಜೀತ ಸಮೀಕ್ಷೆ ನಡೆಸಬೇಕು ಅಂತ... ತಾವು ಮನೆಯಲ್ಲೇ ಇರಿ... ಸ್ವಲ್ಪ... ಜೋಪಾನ...... ನಮಸ್ಕಾರ....

ದೃಶ್ಯ - 2

ಪಟೇಲ್: ನಮಸ್ಕಾರ R.I. ಸಾಹೇಬ್ರಿಗೆ ಏನು ಬಹಳ ದಿನದಿಂದ ಈ ಕಡೆ ಬರ್ಲೇ ಇಲ್ಲಾ. ಈಗ ಇದ್ದಕ್ಕಿದ್ದಾಗೇ.... ಬನ್ನಿ ಬನ್ನಿ.... ಲೇ.... ಸಿದ್ದ...... ಸಾಹೇಬ್ರಗೆ ಛೇರ್ ತಂದು ಹಾಕ್ಲ....

RI : ಅದೇ ಪಟೇಲರೇ ನಿಮ್ಮನ್ನು ನೋಡಿ ಶ್ಯಾನೆ ದಿನ ಆಯಿತು. ಅದಕ್ಕೆ ನೋಡ್ಕೊಂಡು ಹೋಗೋಣಾ ಅಂತ ಬಂದೆ..... ಹಾಗೇ ಅದೇ ಸರ್ಕಾರದೋರು ಜೀತದಾಳು ಗುರುತಿಸಿ, ಸರ್ವೆ ಮಾಡಿ ಅಂತ ನಮ್ ಪ್ರಾಣ ತಿಂತಾವರೇ..... ಮತ್ತೆ ಅದ್ಯಾರೋ ನಿಮ್ಮ ಮನೆಯಲ್ಲಿ ಜೀತಕ್ಕೆ ಇದ್ದಾರೆ ಅಂತ ತಿಳಿಸಿದ್ರು. ಅದಕ್ಕೆ ನಿಮ್ ಮಾತಾಡಿಸ್ಕೊಂಡು ಹೋಗೋಣ ಅಂತ ನಾವೆಲ್ಲ ಬಂದೀವಿ.

ಪಟೇಲ್ : ನೋಡಿ RI ಸಾಹೇಬ್ರೆ, ಈ ಸರ್ಕಾರದೋರ್ಗೆ ಕೆಲ್ಸ ಇಲ್ಲಾ..... ಇಲ್ ನೋಡಿ ನಮ್ಮ ಮನೆಲ್ಲಿ ಈ ಸಿದ್ದಯ್ಯ ಸುಮಾರು 10-15 ವರ್ಷದಿಂದಲೂ ಕೆಲ್ಸ ಮಾಡ್ತಾವನೇ..... ನನ್ನ ಹೆತ್ ಮಗನಿಗಿಂತಲೂ ಚೆನ್ನಾಗಿ ನೋಡ್ಕೊತ್ತೀನಿ. ಒತ್ತೊತ್ತೊಗೆ ಕಾಫಿ, ತಿಂಡಿ, ಊಟ, ವರ್ಷಕ್ಕೆ 2 ಜೊತೆ ಬಟ್ಟೆ...... ಏನಕ್ಕೂ ಕಡಿಮೆ ಮಾಡಿಲ್ಲ.... ಅಲ್ವೇನೋ ಸಿದ್ಧ ..... ?

ಸಿದ್ದಯ್ಯ : ಹೌದು ಸ್ವಾಮಿ.

ಜೀತಪದ್ಧತಿ ಮತ್ತು ಜೀತದಾಳುಗಳನ್ನು ಗುರುತಿಸುವ ತರಬೇತಿ ಕೈಪಿಡಿ

ಪೂರಕ ಓದುವಿಕೆ-X

ಜೀತದಾಳುಗಳನ್ನು ಗುರುತಿಸುವ ಕುರಿತು ಎರಡು ಪಾತ್ರಾಭಿನಯಗಳು

VA : ಅದ್ ನಮ್‌ಗೆ ಗೊತ್ತು ಪಟೇಲ್ರೆ..... ಏನ್ ಮಾಡೋದು ಸರ್ಕಾರಕ್ಕೆ ರಿಪೋರ್ಟ್ ಹಾಕ್‌ಬೇಕಲ್ಲ.

ಪಟೇಲ್: ಲೇ.... ಸಿದ್ದಾ..... ಹೋಗಿ ಆ ಮನೆ ಮುಂದೆ ಕೆಂದ್ ಎಳನೀರು ಮರ್‌ದಲ್ಲಿ ಚೆನ್ನಾಗಿರ ಎಳನೀರು ಕಿತ್ತ್‌ಗಂಡು ಬಾರ್ಲಾ.

(ಸಿದ್ಧಯ್ಯ ಎಳನೀರು ತಂದು ಕೊಚ್ಚಿ ಕೊಡುವನು)

ಪಟೇಲ್: ಕೊಡು ಸಿದ್ದಾ..... ಕುಡೀರಿ..... ಸ್ವಾಮಿ...... ನೋಡಿ ಈ ಸಿದ್ದಯ್ಯನವರ ಅಪ್ಪ ಹಾಕಿದ್ದ ಮರ...... ಇವತ್ತು ಮಗನ ಕಾಲದಲ್ಲಿ ಫಲ ಕೊಡ್ತಾ ಇದೆ..... ಕುಡೀರಿ..... ನೀವ್ ತಣ್ಣಗೆ ಇರಬೇಕು.... ನೀವಿದ್ರೆ ನಾವು....

RI : ಇಲ್ಲಾ ಪಟೇಲ್ರೆ. ನೀವ್ ಇದ್ರೆ.... ನಾವು....ರೀ.... VA.... ಸರಿ..... ಯಾರು ಇಲ್ಲಾ ಅಂತ ಬರೆದು ಆ ಸಿದ್ದಯ್ಯನ ಕೈಲಿ ಸಹಿ ಮಾಡ್ಸ್‌ಕೊಳ್ರಿ. ಹಾಗೇ ಪಟೇಲ್ರ್ ಹತ್ರ ಸಹಿ ತಗೋಳ್ಳಿ..... ಸರಿ, ಪಟೇಲ್ರೆ. ನಾವ್ ಬರ್ತೀವಿ. ಹಾಗೇ..... ನಮ್ಮವಳು ಸಾಂಬರ್ಗೆ ಕಾಯಿ ಇಲ್ಲಾ ಅಂತಿದ್ಲು.

ಪಟೇಲ್: ನಡೀರಿ ಸ್ವಾಮಿ.... ನೀವ್ ಏನ್ ಯೋಚನೆ ಮಾಡ್‌ಬೇಡಿ.... ಕಳಿಸಿ ಕೊಡ್ತೀನಿ.

II. ಕಾನೂನು ಪ್ರಕಾರ ನಡೆಸಬೇಕಾದ ಸಮೀಕ್ಷೆಯ ಮಾದರಿ

ದೃಶ್ಯ - 1

(RI, VA, ಸಂಘಟನೆ ಪ್ರತಿನಿಧಿಗಳು ಸರ್ವೆಗೆ ಹೋಗಲಿಕ್ಕೆ ಸಿದ್ಧತೆ)

RI : ರೀ, VA .... ಎಲ್ಲಾ ಬಂದ್ರೇನ್ರೀ ?

VA : ಹೌದ್ ಸಾರ್, ಎಲ್ಲಾ ರೆಡಿ ಸಾರ್.

RI : ನೋಡಿ ಕಳೆದ ವರ್ಷ ಜೀತದಾಳು ಇಲ್ಲಾ ಅಂತ ರಿಪೋರ್ಟ್ ಹಾಕ್ದಾಂಗೆ ಈ ಸಾರಿ ಮಾಡಂಗಿಲ್ಲಾ. DCಯವರು ಈ ಸಾರಿ ಕಠಿಣ ಕ್ರಮ ತಗೊತ್ತಾರೆ. ಬಹಳ ಉಷಾರಾಗಿ ಮಾಡ್‌ಬೇಕು. ಮೊನ್ನೆ ಬೇರೆ ತರಬೇತಿ ಕೂಡ ಕೊಟ್ಟಿದ್ದಾರೆ. ಆಮೇಲೆ ಬಹಳ ಮುಖ್ಯವಾಗಿ ಈ ಸಾರಿ ಪಟೇಲ್ರ್ ಮನೆ ಹತ್ರ ಹೋಗೊಂಗಿಲ್ಲ. ನೇರವಾಗಿ ದಲಿತರ ಕಾಲೋನಿಗೆ ಹೋಗಬೇಕು. ನಡೀರಿ ಹೋಗೊಣ.....

ದೃಶ್ಯ - 2

VA : ಓ ರಾಮಣ್ಣ...... ಯಜಮಾನ್‌ರೆ.... ಬನ್ನಿ.... ಬನ್ನಿ....

(ಊರಿನ ಮಧ್ಯಭಾಗದಲ್ಲಿ..... ಅಧಿಕಾರಿಗಳು..... ಗ್ರಾಮಸ್ಥರು..... ಜನಪ್ರತಿನಿಧಿಗಳು ಸೇರುವರು)

RI: ನೋಡಿ.... ಸರ್ಕಾರ್‌ದಿಂದ ನಮ್ಮ ಹಳ್ಳಿಗಳ ಬಗ್ಗೆ ಮತ್ತು ಜನರ ಬಗ್ಗೆ ಸರ್ವೆ ಮಾಡಿ ಅಂತ ಕಳಿಸಿದ್ದಾರೆ..... ಅದೆ ನಾವೆಲ್ಲ ಬಂದಿದ್ದೇವೆ.... ನಮ್ಮೂರಲ್ಲಿ ಯಾರ್‍ಯಾರಿಗೆ ಜಮೀನು ಇದೆ.... ಎಷ್ಟು ಜನರಿಗೆ ಇಲ್ಲಾ.... ಸ್ವಲ್ಪ ಚರ್ಚೆ ಮಾಡುವಾ.... ?

ಗ್ರಾಮಸ್ಥ-1: ಎಲ್ಲಿ ಸ್ವಾಮಿ..... ನಮ್ಮೂರಲ್ಲಿ ಎಲ್ಲರಿಗೂ ಜಮೀನಿಲ್ಲ. ಎಲ್ಲೋ ಒಂದ್ ಏಳೆಂಟ್ ಜನರಿಗೆ ಆದೆ ಸ್ವಾಮಿ.... ಇನ್ನೂ 30-40 ಜನರಿಗೆ ಜಮೀನು ಇಲ್ಲಾ.....

ಜೀತಪದ್ಧತಿ ಮತ್ತು ಜೀತದಾಳುಗಳನ್ನು ಗುರುತಿಸುವ ತರಬೇತಿ ಕೈಪಿಡಿ

ಪ್ರಾತ್ಯಕ್ಷಿಕೆ-X

ಜೀತದಾಳುಗಳನ್ನು ಗುರುತಿಸುವ ಕುರಿತು ಎರಡು ಪ್ರಾತ್ಯಕ್ಷಿಕೆಗಳು

RI : ಮತ್ತೆ ಜಮೀನು ಇಲ್ದಾ ಜನ ಜೀವನ ಹೇಗ್ ಮಾಡ್ತಾರೆ....?

ಗ್ರಾಮಸ್ಥ-2 : ಇನ್ನೇನು ಸಾರ್..... ಕೂಲಿ ಗೀಲಿ ಮಾಡ್ತಾರೆ ಇಲ್ಲಂದ್ರೆ ಬೇರೆ ಕಡೆ ಕೂಲಿಗೆ ಹೋಗ್ತಾರೆ.

RI : ಇದನ್ ಬಿಟ್ಟು ಬೇರೆ ತರದ ಕೂಲಿ ಏನು ಮಾಡ್ತಾರೆ.....?

ಗ್ರಾಮಸ್ಥ-3 : ಅದೇ ಸಾ.... ತೋಟದ ಕೆಲ್ಸ, ಜಮೀನು ಕೆಲ್ಸ, ಗದ್ದೆ ಕೆಲಸ.......

RI : ಸರಿ, ಸರ್ಕಾರಿ ಕೆಲಸದಲ್ಲಿ ಯಾರು ಇಲ್ವಾ.....?

ಗ್ರಾಮಸ್ಥ : ಅವ್ರೆ ಸ್ವಾಮಿ...... ಮೂರು ಜನ ಮೇಷ್ಟ್ರು, ಇಬ್ಬರು ಪೋಲೀಸ್..... ಇಬ್ಬರು ಕಾಂಪೌಂಡ್ರು ಇಷ್ಟು ಸ್ವಾಮಿ. ಇನ್ಯಾರು ಇಲ್ಲಾ......

RI : ಸರಿ, ಈ ರೀತಿ ಕೆಲಸಗಳನ್ನು ಬಿಟ್ಟು ಬೇರೆ ಇನ್ಯಾವ ರೀತಿ ಕೆಲಸ ಮಾಡ್ತಾರೆ?

(ಸ್ವಲ್ಪ ಮೌನ..... ಗುಸು ಗುಸು.... ಚರ್ಚೆ..... ಒಬ್ಬ ಯೋಚನೆ ಬಂದಂಗೆ)

ಗ್ರಾಮಸ್ಥ-1 : ಅದೇ ಮಾದಣ್ಣ..... ಆ ಸಿದ್ಧಣ್ಣ..... ಪಟೇಲ್ರ ಹಟ್ಟಿಲ್ಲಿ ಸುಮಾರು 10-12 ವರ್ಷದಿಂದ ಜೀತ ಮಾಡ್ತಾವನೇ......!

ಗ್ರಾಮಸ್ಥ-2 : ಏ..... ನಿಂಗೆ ಗೌಡರ ಮನೇಲಿ ಆ ಕೆಂಪಣ್ಣನೂ ಇಲ್ವೇನ್‌ಲಾ.....?

RI : ಯಾರು.... ಹೇಳಿ.......

ಗ್ರಾಮಸ್ಥ-1 : ಅದೇ ಸ್ವಾಮಿ.... ಈ ಸಿದ್ದಣ್ಣ ಪಟೇಲ್ರ ಹಟ್ಟಿಲ್ಲಿ ಸುಮಾರು ವರ್ಷದಿಂದ ಜೀತ ಮಾಡ್ತಾವನೇ.....

RI : ನೋಡಿ VA. ಈ ಕೇಸನ್ನ ಬರ್ಕಳ್ರಿ......

ರೀ.... ಸಿದ್ದಣ್ಣ. ಬನ್ನಿ ಮುಂದೆ..... ಕುಳಿತುಕೊಳ್ಳಿ.

ನೀವು ಎಷ್ಟು ವರ್ಷದಿಂದ ಜೀತ ಮಾಡ್ತಾ ಇದ್ದೀರಿ.....?

ಸಿದ್ದಣ್ಣ : 8 ವರ್ಷದಿಂದ ಸ್ವಾಮಿ.

RI : ಎಷ್ಟು ಸಾಲ ತಗೊಂಡಿದ್ದೀರಿ.....?

ಸಿದ್ದಣ್ಣ : 10 ಸಾವಿರ ಸ್ವಾಮಿ.

RI : ಎಷ್ಟು ಸಾಲ ತೀರಿದೆ, ಇವಾಗ....?

ಸಿದ್ದಣ್ಣ : ಗೊತ್ತಿಲ್ಲ ಸ್ವಾಮಿ.

RI : ಏನ್‌ಕ್ ಸಾಲ ತಗೊಂಡಿದ್ರಿ?

ಸಿದ್ದಣ್ಣ : ಮಗಳ ಮದುವೆ ಮಾಡಕ್ಕೆ ಸ್ವಾಮಿ.

RI : ಏನ್ ಕೆಲ್ಸ ಮಾಡ್ತಿರಿ?

ಸಿದ್ದಣ್ಣ : ತೋಟದ ಕೆಲ್ಸ, ಮನೆ ಕೆಲ್ಸ, ಉಳುಮೆ ಮಾಡೊದು, ಕಸ ತೆಗೆಯೋದು, ಸೌದೆ ಹೊಡೆಯೋದು, ತೋಟಕ್ಕೆ ನೀರು ಬಿಡೋದು, ಎಲ್ಲಾ ಕೆಲ್ಸ ಮಾಡ್ತೀನಿ ಸ್ವಾಮಿ.

ಜೀತಪದ್ಧತಿ ಮತ್ತು ಜೀತದಾಳುಗಳನ್ನು ಗುರುತಿಸುವ ತರಬೇತಿ ಕೈಪಿಡಿ

ಪೂರಕ ಓದುವಿಕೆ-X

ಜೀತದಾಳುಗಳನ್ನು ಗುರುತಿಸುವ ಕುರಿತು ಎರಡು ಪಾತ್ರಾಭಿನಯಗಳು

RI : ಬೆಳ್ಳಿಗೆ ಎಷ್ಟ್ ಗಂಟೆಗೆ ಹೋಗ್ತಿಯಾ?

ಸಿದ್ದಣ್ಣ : ಬೆಳ್ಳಿಗೆ 5 ಗಂಟೆಗೆ ಹೋಗ್ತೀನಿ, ಸಂಜೆ 8-9 ಗಂಟೆಗೆ ಬರ್ತಿನಿ.... ಒಂದೊಂದ್ ಸಲ ಅಲ್ಲೇ ಇರ್‌ಬೇಕು. ತೋಟಕ್ಕೆ ನೀರು ಕಟ್‌ಬೇಕು. ಗದ್ದೆ ಕೆಲಸ ಇದ್ದಾಗ ಅಲ್ಲಿ ಇರ್ತೀನಿ ಸ್ವಾಮಿ.

RI : ಊಟ..... ಬಟ್ಟೆ..... ?

ಸಿದ್ದಣ್ಣ : ಮೂರೋತ್ತು ಊಟ, ವರ್ಷಕ್ಕೆ ಎರಡು ಜೊತೆ ಬಟ್ಟೆ ಕೊಡ್ತಾರೆ ಸ್ವಾಮಿ.

RI : ರಜೆ ಕೊಡ್ತಾರ ?

ಸಿದ್ದಣ್ಣ : ಹಬ್ಬ-ಗಿಬ್ಬ ಇದ್ದಾಗ ಮತ್ತು ಉಷಾರಿಲ್ದೆ ಇದ್ದಾಗ ರಜಾ ಕೊಡ್ತಾರೆ. ಆದರೆ ಉಳಿದಾಳು ಹಾಕೋತ್ತಾರೆ.

RI : ರೀ.... VA. ಇದು ಜೀತಕ್ಕೆ ಬರುತ್ತೆ ಕಂಡ್ರಿ. ಬರ್‌ಕೊಳ್ಳಿ..... ನೋಡಿ, ಇನ್ನು ಪಕ್ಕ ಮಾಡ್ಲಿಕ್ಕೆ ಇನ್ನೊಂದೆರಡು ಪ್ರಶ್ನೆ ಕೇಳ್ತೀನಿ ಕಂಡ್ರಿ.

RI : ನೋಡಿ ಸಿದ್ದಣ್ಣನವರೇ.... ಈ ನಿಮ್ಮ ಸಾಲ ತೀರಿಸಲಿಕ್ಕೆ ನೀವು ಬೇರೆ ಕಡೆ ಕೂಲಿ ಕೆಲಸ ಮಾಡಬಹುದಲ್ಲಾ?

ಸಿದ್ದಣ್ಣ : ಅದ್ಯಾಗೆ ಸ್ವಾಮಿ? ಸಾಲ ತೀರೊವರ್‌ಗೂ ಬೇರೆ ಕಡೆ ಹೋಗೊಂಗಿಲ್ಲ..... ಸ್ವಾಮಿ.

RI : ಸರಿ ಸಿದ್ದಣ್ಣ. ಈಗ ನಿಮಗೆ ತಾಲ್ಲೂಕು ಆಫೀಸ್‌ನಲ್ಲಿ ಒಂದು ಜವಾನನ ಕೆಲ್ಸ ಖಾಲಿ ಇದೆ. ನಿಮಗೆ ತಿಂಗಳಿಗೆ ಎರಡು ಸಾವಿರ ಸಂಬಳ. ಬನ್ನಿ, ಅಲ್ಲಿಗೆ ಸೇರ್‌ಸ್ತೀನಿ.

ಸಿದ್ದಣ್ಣ : ಅದೆಂಗ್ ಸ್ವಾಮಿ, ದುಡ್ ಕೊಟ್ಟಿರೊ ಧಣಿ ಸುಮ್ನ ಬಿಟ್ಟಾರಾ. ಸಾಲ ತೀರೋವರ್‌ಗೂ ನಾನು ಬೇರೆ ಕಡೆ ಹೋಗೊಂಗಿಲ್ಲ..... ಆಗೇನಾದ್ರು ಮಾಡಿದ್ರೆ ನನ್ನನ್ನ ಸುಮ್ನೆ ಬಿಡ್ತಾರ..... ಎಲ್ಲಿದ್ರು ಎಳ್ ಕಂಡ್ ಬರ್ತಾರೆ.

RI : ನೋಡಿ VA.... ಇದು ಪಕ್ಕಾ ಜೀತಕ್ಕೆ ಬರ್ತೆ, ಅನುಮಾನನೇ ಇಲ್ಲಾ. ಸರಿ ನೋಡಿ, ಸಿದ್ದಣ್ಣ ನಿಮಗೆ ಜೀತ ಪರಿಹಾರಕ್ಕೆ ಸರ್ಕಾರಕ್ಕೆ ವರದಿ ಸಲ್ಲಿಸ್‌ತ್ತೀವಿ..... ಇಲ್ಲಿ ಸಹಿ ಮಾಡಿ..... ಹಾಗೆ ಎರಡು ಫೋಟೊ ಕೊಡಿ. ನೋಡಿ, ಹಾಗೇ ಗ್ರಾಮದವರ ಹತ್ತಿರ ಮಹಾಜರ್‌ಗೆ ಸಹಿ ಮಾಡ್ಸಿ....

RI : ನೋಡಿ, ನಿಮ್ಮೂರಲ್ಲಾಗಲಿ, ಪಕ್ಕದ ಊರಲ್ಲಾಗಲಿ ಈ ರೀತಿ ಜೀತ ಮಾಡ್ತಾ ಇದ್ರೆ ಕೂಡ್ಲೇ ನಮಗೆ ತಿಳಿಸಿ. ನಾವ್ ಬಂದು ವರದಿ ಮಾಡ್‌ಕಂಡು ಹೋಗ್ತೀವಿ. ಪರಿಹಾರಕ್ಕೆ ಸರ್ಕಾರಕ್ಕೆ ಬರಿತೀವಿ.

ನಮಸ್ಕಾರ..... ಬರ್ತೀವಿ......

ರಚನೆ: ಉಮೇಶ್, ಬಿ. ನೂರಲಕುಪ್ಪೆ

'ಜೀತಗಾರನನ್ನು'ಗುರುತಿಸಲು ಅನುಸರಿಸಬೇಕಾದ ವಿಧಾನ: ಶ್ರೀ ಎಸ್.ಆರ್.ಶಂಕರನ್‌ರವರ ಮಾರ್ಗದರ್ಶನಗಳು

ತನಿಖಾ ತಂಡದ ಅಧಿಕಾರಿಗಳು ಅಥವಾ ಬೇರೆ ಅಧಿಕಾರಿ ಅಥವಾ ಇನ್ನಿತರ ವ್ಯಕ್ತಿಗಳಿಗೆ ವಹಿಸಿರುವ ಕೆಲಸಗಳಿಗನುಗುಣವಾಗಿ ಹಳ್ಳಿಯನ್ನು ಮುಟ್ಟಿದ ಕೂಡಲೇ ಮುಖ್ಯ ಜಾಗಕ್ಕೆ ಹೋಗುವ ಮೊದಲು ಹರಿಜನರು ವಾಸಿಸುವ ಸ್ಥಳಗಳಿಗೆ ಹೋಗಬೇಕು. ಹಳ್ಳಿಯಲ್ಲಿರುವ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಮತ್ತು ಇನ್ನಿತರ ಹಿಂದುಳಿದ ಜಾತಿಯ ಕೃಷಿ ಕಾರ್ಮಿಕರನ್ನು ಹರಿಜನ ಕೇರಿಯಲ್ಲಿ ಗುಂಪು ಸೇರುವಂತೆ ಮಾಡಬೇಕು. ಅವರಲ್ಲಿ ಎಷ್ಟು ಜನ ದಿನಗೂಲಿಯ ಮೇಲೆ ಹಾಗೂ ಎಷ್ಟು ಜನ ಜೀತದಾಳುಗಳಾಗಿ ಕೆಲಸ ಮಾಡುತ್ತಿದ್ದಾರೆ ಎಂಬುದನ್ನು ತಿಳಿಸ್ಲು ಕೇಳಬೇಕು. ಇದಕ್ಕೆ ಅನುಕೂಲವಾಗುವಂತೆ ಅವರನ್ನು ಎರಡು ಪಂಗಡಗಳಾಗಿ ಮಾಡಬೇಕು ಅಥವಾ ಅವರಿಗೆ ಕೈ ಎತ್ತಲು ಸೂಚಿಸಬೇಕು.

ದಿನಗೂಲಿ ಕಾರ್ಮಿಕರಿಗೆ ಈ ಕೆಳಗಿನ ಪ್ರಶ್ನೆಗಳನ್ನು ಕೇಳಬಹುದು.

1. ನಿಮ್ಮನ್ನು ಯಾರಾದರೂ ಕೆಲಸಕ್ಕೆ ಕರೆದರೆ ನೀವು ಅವರ ಹತ್ತಿರ ಕೆಲಸ ಮಾಡುತ್ತೀರಾ?
1. ಕಳೆದ ವಾರ ಅಥವಾ ಹತ್ತು ದಿನಗಳಲ್ಲಿ ಯಾರ ಬಳಿ ಏನು ಕೆಲಸ ಮಾಡಿದ್ದೀರಿ?
2. ಗಂಡಸರಿಗೆ, ಹೆಂಗಸರಿಗೆ ಕೂಲಿ ದರ ಎಷ್ಟು?

ಸಾಧಾರಣವಾಗಿ ಅವರಿಂದ ಬರುವ ಉತ್ತರವು ಯಾರು ಕೆಲಸಕ್ಕೆ ಕರೆಯತ್ತಾರೋ ಅವರ ಹತ್ತಿರ ಹೋಗುತ್ತೇವೆ ಎಂಬುದು ಒಂದು ವಾರದ ಅಥವಾ ಹತ್ತು ದಿನಗಳ ಅವಧಿಯಲ್ಲಿ ಅವರು ಇಬ್ಬರು, ಮೂರು ಅಥವಾ ಹೆಚ್ಚಿನ ಸಂಖ್ಯೆಯ ವಿವಿಧ ಜನಗಳ ಹತ್ತಿರ ಕೆಲಸ ಮಾಡಿರುತ್ತಾರೆ. ಸರ್ವೇಸಾಮಾನ್ಯವಾಗಿ ಗಂಡಸರಿಗೆ ಮತ್ತು ಹೆಂಗಸರಿಗೆ ಸಿಗುವ ಕೂಲಿಯ ದರದಲ್ಲಿ ವ್ಯತ್ಯಾಸವಿರುತ್ತದೆ. ಕೂಲಿ ದರವು ದಿನಗೂಲಿಯಾಗಿದ್ದು (ಮಾಸಿಕ, ವಾರ್ಷಿಕವಲ್ಲದ) ಸಾಮಾನ್ಯವಾಗಿ ಗಂಡಸರಿಗೆ ರೂ. 2.50 ರಿಂದ ರೂ. 3.00 ಮತ್ತು ರೂ 1.50 ರಿಂದ 2.00 ರವರೆಗೆ ಹೆಂಗಸರಿಗೆ ಇರುತ್ತದೆ. ಈ ದರವು ಸ್ಥಳದಿಂದ ಸ್ಥಳಕ್ಕೆ ಮತ್ತು ಕೂಲಿ ಕೆಲಸಕ್ಕೆ ಹೆಚ್ಚಿನ ಬೇಡಿಕೆ ಇರುವ ಕಾಲದಲ್ಲಿ ಮತ್ತು ದುರ್ಭಿಕ್ಷ ಕಾಲದಲ್ಲಿ ವ್ಯತ್ಯಾಸವಾಗುವುದು. ಇದರಿಂದ ನಾವು ದಿನಗೂಲಿ ಕೆಲಸದ ಸ್ವರೂಪದ ಬಗ್ಗೆ ಮೊದಲು ತಿಳಿದುಕೊಳ್ಳಬಹುದು.

ಜೀತ

ದಿನಗೂಲಿ ಮಾಡದಿರುವವರು ಮೇಲ್ನೋಟಕ್ಕೆ ಜೀತಗಾರರಾಗಿರುತ್ತಾರೆ.

ಜೀತದಾಗಳಿಗೆ ಪ್ರಶ್ನೆಗಳು

ಪ್ರಶ್ನೆ 1: ನೀವು ಯಾರ ಹತ್ತಿರ ಮತ್ತು ಎಷ್ಟು ದಿನಗಳಿಂದ ಕೆಲಸ ಮಾಡುತ್ತಿದ್ದೀರಿ?
ಒಬ್ಬನೇ ಜಮೀನುದಾರನ ಹತ್ತಿರ ಒಂದು ವರ್ಷಕ್ಕೆ ಮೇಲ್ಪಟ್ಟು ಕೆಲಸ ಮಾಡುತ್ತಿದ್ದರೆ (ಜಮೀನುದಾರನ ಹತ್ತಿರ 5 ವರ್ಷದಿಂದ ಕೆಲಸ ಮಾಡುತ್ತಿದ್ದೇನೆಂದು ಹೇಳಿದರೆ) ಅದೇ ಮನುಷ್ಯನ ಹತ್ತಿರ ಕೆಲವೊಂದು ಕಾರಣದಿಂದ ಅವನು ಕೆಲಸ ಮಾಡುತ್ತಿದ್ದಾನೆಂದು ಭಾವನೆ ಬರುತ್ತದೆ.

ಪ್ರಶ್ನೆ 2: ನೀವು ಎಷ್ಟು ಹಣವನ್ನು ಸಾಲದ ರೂಪದಲ್ಲಿ ಪಡೆದಿದ್ದೀರಿ? ಯಾವಾಗ ಸಾಲ ತೆಗೆದುಕೊಂಡಿದ್ದೀರಿ? ಯಾವ ಉದ್ದೇಶಕ್ಕಾಗಿ ತೆಗೆದಿದ್ದೀರಿ?

ಆಂಧ್ರದ ತೆಲಂಗಾಣ ಪ್ರದೇಶದಲ್ಲಿ ಸ್ವಾಭಾವಿಕ ಉತ್ತರವು ಕೆಲವು ವರ್ಷಗಳ ಹಿಂದೆ ನಡೆದ ಅವನ ಮಗನ, ಮಗಳ ವಿವಾಹಕ್ಕಾಗಿ ತೆಗೆದುಕೊಂಡ ರೂ. 500.00 ಸಾಲವನ್ನು ತೀರಿಸುವುದಕ್ಕಾಗಿ ಅವನು ಜೀತ ಮಾಡುತ್ತಿರುತ್ತಾನೆ ಅಥವಾ ಮಗನನ್ನು ಜೀತಕ್ಕಾಗಿ ತೊಡಗಿಸಿರುತ್ತಾನೆ.
ಪ್ರಶ್ನೆ 3 : ಸಾಲದ ಮೇಲೆ ವಿಧಿಸುವ ಬಡ್ಡಿ ದರ ಎಷ್ಟು?

ಪೂರಕ ಓದುವಿಕೆ-XI

ಜೀತದಾಳುಗಳನ್ನು ಗುರುತಿಸುವ ವಿಧಾನ: ಎಸ್.ಆರ್.ಶಂಕರನ್‌ರವರ ಮಾರ್ಗದರ್ಶಿ

ಸಾಂಪ್ರದಾಯಿಕವಾಗಿ ಹೆಚ್ಚಿನ ಸ್ಥಳಗಳಲ್ಲಿ ಯಾವುದೇ ನೂರು ರೂಪಾಯಿಗಳ ಸಾಲಕ್ಕೆ ಬಡ್ಡಿ ಇರುವುದಿಲ್ಲ. ಉಳಿದ ಹಣಕ್ಕೆ ಸಾಮಾನ್ಯವಾಗಿ ತಿಂಗಳಿಗೆ ಬಡ್ಡಿದರ ತಿಂಗಳಿಗೆ ಶೇ.2.5 ಇರುತ್ತದೆ. ಕೆಲವು ಸಲ ಜಾರಿಯಲ್ಲಿರುವ ಬಡ್ಡಿದರವು ಇನ್ನೂ ಹೆಚ್ಚಿನದಾಗಿರುತ್ತದೆ.

ಪ್ರಶ್ನೆ 4 : ನಿಮ್ಮ ಮಾಸಿಕ ಕೂಲಿ ಎಷ್ಟು ಮತ್ತು ಸೌಲಭ್ಯಗಳೇನು?
ಜೀತಗಾರ ಕೆಲಸಗಾರರಿಗೆ ದಿನಗೂಲಿ ಇರುವುದಿಲ್ಲ. ಬದಲಾಗಿ ತಿಂಗಳು ಅಥವಾ ವಾರ್ಷಿಕ ಕೂಲಿ ಇರುತ್ತದೆ. ಸಾಮಾನ್ಯವಾಗಿ ಅವರಿಗೆ ಮೂರು ವಿಧವಾದ ರೂಪದಲ್ಲಿ ಹಣ ಬಟವಾಡೆ ಮಾಡಲಾಗುತ್ತದೆ.

ಅ. ಮಾಸಿಕ ಕೂಲಿ

ಹಣದ ರೂಪದಲ್ಲಿ ಕೊಟ್ಟರೆ ಚಿಕ್ಕಮಕ್ಕಳಿಗೆ ಕೂಲಿ ರೂ. 5 ರಿಂದ 10 ರವರೆಗೆ (ಅಥವಾ ಇನ್ನೂ ಕಡಿಮೆ) ದನಕಾಯುವ ವಯಸ್ಕರಿಗೆ ರೂ 40.00 ಗಳವರೆಗೆ ಆಗಬಹುದು. ಇದನ್ನು ಮಾಸಿಕವಾಗಿ ಕೊಡಲಾಗುತ್ತದೆ. ಇದಕ್ಕೆ ಬದಲಾಗಿ ಧಾನ್ಯ ರೂಪದಲ್ಲಿ (ಭತ್ತ) ಮಕ್ಕಳಿಗೆ ಹತ್ತು ಕೇಜಿ. ಯುವಕರಿಗೆ 20 ಕೇಜಿ ಮತ್ತು ವಯಸ್ಕರಿಗೆ 20 ಕೇಜಿ ಕೊಡಲಾಗುವುದು. ಗಮನಿಸಬೇಕಾದ ಇನ್ನೊಂದು ವಿಷಯವೇನೆಂದರೆ ಮಾಸಿಕ ಕೂಲಿಯ ಹಣವನ್ನು ಕೊಡದೆ ಅದನ್ನು ಸಾಲದ ಹಣಕ್ಕೆ ಹೊಂದಾಣಿಕೆ ಮಾಡಿಕೊಳ್ಳಲಾಗುವುದು. ಇದರಿಂದ ಕಾರ್ಮಿಕನು ನಗದು ರೂಪದಲ್ಲಿ ಏನನ್ನೂ ಪಡೆಯುವುದಿಲ್ಲ ಮತ್ತು ಹೊಸ ಸಾಲವನ್ನು ಪಡೆಯಲು ಬಲತ್ಕಾರ ಮಾಡಿದಂತೆ ಆಗುತ್ತದೆ.

ಆ. ಆಹಾರ

ಜೀತದಾಳುಗಳಿಗೆ ಆಹಾರ ನೀಡುವುದರಲ್ಲಿ ವ್ಯತ್ಯಾಸವಿದೆ. ಉದಾಹರಣೆಗೆ ಕೆಲವು ಕಡೆ ಜೀತದಾಳುಗಳಿಗೆ ಊಟವನ್ನು ಹಾಕುವುದಿಲ್ಲ. ಕೆಲವು ಕಡೆ ಒಂದು ರೊಟ್ಟಿಯನ್ನು, ಇನ್ನು ಕೆಲವು ಕಡೆ ದಿನಕ್ಕೆ ಎರಡು ಹೊತ್ತು ಊಟ ಕೊಡುವುದು ಸಾಮಾನ್ಯವಾಗಿರುತ್ತದೆ.

ಇ. ಇತರ ವಿಷಯಗಳು

ಜೀತದಾಳುಗಳಿಗೆ ಒಂದು ಉಣ್ಣೆಯ ಕಂಬಳಿ, ಒಂದು ಜೊತೆ ಚಪ್ಪಲಿ, ಹೊಗೆಸೊಪ್ಪು ಮತ್ತು ಹಬ್ಬಕ್ಕೆ ಬಟ್ಟೆಯನ್ನು ಕೊಡಲಾಗುವುದು. ಕೆಲವು ಕಡೆ ಉಣ್ಣೆಯ ಕಂಬಳಿ ಬದಲು ನಗದು ರೂಪದಲ್ಲಿ ಸ್ವಲ್ಪ ಹಣವನ್ನು ಕೊಡಲಾಗುವುದು. ಕೆಲವು ಪ್ರದೇಶಗಳಲ್ಲಿ ಹೊಗೆಸೊಪ್ಪು ಅಥವಾ ಉಣ್ಣೆಯ ಕಂಬಳಿ ನೀಡಲಾಗುವುದು.

ಈ. ಅಲ್ಪ ಮುಂಗಡ (ನಗದು)

ಜೀತದಾಳು ಜಮೀನುದಾರನಿಂದ ತನ್ನ ವಿವಿಧ ಅವಶ್ಯಕತೆಗಳಿಗೆ ಮುಂಗಡ ಹಣವನ್ನು ಪಡೆಯುತ್ತಾನೆ. ಇದನ್ನು ಸಾಲಕ್ಕೆ ಸೇರಿಸಲಾಗುತ್ತದೆ. ಈ ಸಹಾಯವನ್ನು ಜಮೀನುದಾರನು ನೀಡದೆ ಇರಬಹುದು. ಆದರೆ ಜಮೀನುದಾರನು ಒಳ್ಳೆಯ ಮನೋಭಾವದಿಂದ ಆಗಾಗ್ಗೆ ಮುಂಗಡ ಹಣವನ್ನು ನೀಡಿ ಅದನ್ನು ಸಾಲಕ್ಕೆ ಸೇರಿಸುತ್ತಾನೆ.

ಉ. ಕೆಲಸಕ್ಕೆ ಗೈರುಹಾಜರಾದರೆ ದಂಡ ವಿಧಿಸುವ ಬಗ್ಗೆ

ಜೀತದಾಳು ಯಾವುದಾದರೂ ನ್ಯಾಯ ಸಮ್ಮತವಾದ ಕಾರಣದಿಂದ ಅಥವಾ ಬೇರೆ ರೀತಿಯಿಂದ ಗೈರುಹಾಜರಾದರೆ ರಜವನ್ನು ಕೊಡುವುದಿಲ್ಲ. ಅದಕ್ಕಾಗಿ ಜೀತದಾಳು ದಂಡವನ್ನು ನೀಡಬೇಕಾಗುತ್ತದೆ. ದಂಡವು ಸಾಮಾನ್ಯ ಕೂಲಿಗಿಂತ ಎರಡರಷ್ಟು ಆಗಿರುತ್ತದೆ. ಅಂದರೆ ಅವನ ಒಂದು ದಿನದ ಗೈರುಹಾಜರಿಯನ್ನು ಸರಿದೂಗಿಸಲು ಎರಡು ದಿನ ಕೆಲಸ ಮಾಡಬೇಕು.
ಪ್ರಶ್ನೆ 5. ನೀವು ಕೆಲವು ವರ್ಷಗಳಿಂದ ಜಮೀನುದಾರನ ಹತ್ತಿರ ಕೆಲಸ ಮಾಡಿದ್ದೀರಿ. (ಬಹುತೇಕ ಜನರು ಕೆಲಸ ಮಾಡಿರುತ್ತಾರೆ) ಸಾಲವು ಸ್ವಲ್ಪವಾದರೂ ಕಡಿಮೆಯಾಗಿದೆಯೇ? ಅಥವಾ ಕೊನೇ

ಪೂರಕ ಓದುವಿಕೆ-XI

ಜೀತದಾಳುಗಳನ್ನು ಗುರುತಿಸುವ ವಿಧಾನ: ಎಸ್.ಆರ್.ಶಂಕರನ್‌ರವರ ಮಾರ್ಗದರ್ಶಿ

ಪಕ್ಷ ಬಡ್ಡಿಯನ್ನು ಕಟ್ಟಲಾಗಿದೆಯೇ?

ಇದಕ್ಕೆ ಉತ್ತರವು ಸಾಲದ ಹಣವು ಕಡಿಮೆಯಾಗಿರುವುದೇ ಇಲ್ಲ. ಅಥವಾ ಸಾಲದ ಮೊತ್ತವು ಜಾಸ್ತಿಯಾಗಿರುತ್ತದೆ. ಹೆಚ್ಚಿನ ಜೀತದಾಳುಗಳು ಅನಕ್ಷರಸ್ಥರಾಗಿರುವುದರಿಂದ ಸಾಲದ ವಿವರಗಳು ಗೊತ್ತಿರುವುದಿಲ್ಲ. ಸಂಬಂಧಪಟ್ಟ ಕಾಗದ ಪತ್ರಗಳನು ಜಮೀನುದಾರನು ಇಟ್ಟುಕೊಂಡಿರುತ್ತಾನೆಂದು ಮತ್ತು ಸಾಲವು ಹೆಚ್ಚಿಗೆ ಅಥವಾ ಕಡಿಮೆ ಆದ ಬಗ್ಗೆ ಹೇಗೆ ತಿಳಿದುಕೊಂಡೆ ಎಂದು ಕೇಳಿದರೆ ನಮಗೆ ಆ ರೀತಿ ತಿಳಿಸಲಾಗಿದೆ ಎಂದು ಹೇಳುತ್ತಾರೆ ಅಥವಾ ಸ್ಕೂಲ್ ಮಾಸ್ತರ ಹತ್ತಿರ ಪರಿಶೀಲಿಸಿದೆ ಎಂದು ಹೇಳುತ್ತಾರೆ.

ಪ್ರಶ್ನೆ 6. ಜಮೀನುದಾರರ ಹತ್ತಿರ ಎಷ್ಟು ದಿನಗಳವರೆಗೆ ಕೆಲಸ ಮಾಡಬೇಕಾಗಿದೆ? ಬೇರೆಯವರ ಹತ್ತಿರ ಕೆಲಸ ಮಾಡುವುದಕ್ಕೆ ಆಗುವುದಿಲ್ಲವೆ?

ಸಾಲವು ತೀರುವವರೆಗೆ ಅದೇ ಜಮೀನುದಾರನ ಬಳಿ ಕೆಲಸ ಮಾಡಬೇಕೆಂದು ಸ್ಪಷ್ಟವಾಗಿ ಹೇಳುತ್ತಾರೆ.

ಪ್ರಶ್ನೆ 7. ಸಾಲವು ಯಾವಾಗ ತೀರುತ್ತದೆ ಎಂದು ಯೋಚಿಸಿದ್ದೀಯಾ? (ಅವರ ಅಭಿಪ್ರಾಯ)

ಅವರು ಇದಕ್ಕೆ ಸುಲಭವಾಗಿ ಉತ್ತರ ಕೊಡಲು ಸಾಧ್ಯವಿಲ್ಲ. ಏತಕ್ಕೆಂದರೆ ಅವರಿಗೆ ವಿಷಯಗಳನ್ನು ಸ್ಪಷ್ಟವಾಗಿ ಊಹಿಸುವುದಕ್ಕೆ ಆಗುವುದಿಲ್ಲ. ಇದರಿಂದ ಗೊತ್ತಾಗುವ ವಿಷಯವೇನೆಂದರೆ ಅವರು ಸಾಲ ಮರುಪಾವತಿ ಆಗುವವರೆಗೆ ಜಮೀನುದಾರನ ಬಳಿ ಕೆಲಸ ಮಾಡಬೇಕು ಮತ್ತು ಸಾಲವನ್ನು ಮರುಪಾವತಿ ಮಾಡುವುದಕ್ಕೆ ಆಗುವುದಿಲ್ಲ. ಜೀತಗಾರನು ಸತ್ತರೂ ಸಾಲವು ತೀರುವುದಿಲ್ಲ. ಅದು ಅವನ ವಾರಸುದಾರನ ಮೇಲೆ ಬರುತ್ತದೆ. ಇವರು ವಂಶಪಾರಂಪರ್ಯವಾಗಿ ಜೀತದಾರರಾಗಿರುತ್ತಾರೆ.

ಮುಂದಿನ ಮಾರ್ಗದರ್ಶಕವಾಗುವ ಪ್ರಶ್ನೆಗಳು

ಈ ಸಂದರ್ಭದಲ್ಲಿ ಅವರಿಗೆ ಏನು ತಿಳುವಳಿಕೆ ಮತ್ತು ಅರಿವು ಆಗಿದೆ ಎಂಬುದನ್ನು ತಿಳಿಯಲು ಅವರಿಗೆ ಕೊನೆಯಲ್ಲಿ ಕೆಲವು ಈ ಕೆಳಗೆ ತಿಳಿಸಿದ ವಿಶಿಷ್ಟ ಪ್ರಶ್ನೆಗಳನ್ನು ಕೇಳಬಹುದು.

(ಅ) ಜೀತಗಾರನಿಗೆ ನಾವು ಹೈದರಾಬಾದ್‌ನಲ್ಲಿ ಜವಾನನ ಕೆಲಸ ಈಗಲೇ ಕೊಡಿಸುತ್ತೇವೆ. ತಿಂಗಳಿಗೆ ರೂ. 400 ಸಂಬಳವೆಂದರೆ ಅವನು ತಕ್ಷಣ ನಮ್ಮ ಜೊತೆ ಬರುತ್ತಾನೆಯೇ? ಎಂದು ಕೇಳಬೇಕು.

ಅದಕ್ಕೆ ಅವನು ಮೊದಲು ಉತ್ತರ ಹೇಳಲು ಹಿಂಜರಿಯುತ್ತಾನೆ. ಆಮೇಲೆ ಆಗುವುದಿಲ್ಲವೆಂದು ಹೇಳುತ್ತಾನೆ. ಪುನ: ಅವನಿಗೆ ತಿಂಗಳಿಗೆ ನಿನಗೆ ರೂ. 400 ಸಂಬಳ ಬರುತ್ತದೆ (ಹಳ್ಳಿಯಲ್ಲಿ ಪಡೆಯುವುದಕ್ಕಿಂತ ಹತ್ತು ಪಟ್ಟು ಹೆಚ್ಚಿಗೆ ಬರುತ್ತದೆ) ಎಂದು ಒತ್ತಿ ಹೇಳಬೇಕು ಮತ್ತು ಒಂದು ತಿಂಗಳಲ್ಲೇ ಅವನ ಸಾಲವನ್ನು ಜಮೀನುದಾರನಿಗೆ ಮರುಪಾವತಿ ಮಾಡಬಹುದು. ಆಗಲೂ ಸಹ ಇವನು ಬರುವುದಕ್ಕೆ ಆಗುವುದಿಲ್ಲವೆಂದು ಹೇಳುತ್ತಾನೆ. ಏಕೆಂದರೆ ಅವನು ಸಾಲವನ್ನು ಜಮೀನುದಾರನಿಗೆ ಮರುಪಾವತಿ ಮಾಡದೇ ಹೊರಗೆ ಹೋಗುವುದಕ್ಕೆ ಆಗುವುದಿಲ್ಲ.

(ಆ) ಆಮೇಲೆ ಅವನಿಗೆ ಇರುವ ಜೀತ ಕೆಲಸದಲ್ಲಿ ತಿಂಗಳಿಗ ರೂ. 40.00 ಸಿಗುತ್ತದೆ. (ಉದಾಹರಣೆ) ಬೇರೆ ಜಮೀನುದಾರನು ತಿಂಗಳಿಗೆ ರೂ. 100.00 ಕೊಟ್ಟರೆ ಅವನ ಬಳಿ ಕೆಲಸ ಮಾಡುವುದಿಲ್ಲವೇ? ಅವನಿಂದ ಸರಿಯಾದ ಪ್ರತಿಕ್ರಿಯೆಯನ್ನು ಪಡೆಯಲು ನಾವು ಪಕ್ಕದ ಹಳ್ಳಿಯ ಜಮೀನುದಾರನನ್ನು ಈ ಬಗ್ಗೆ ಮಾಡಿದ್ದೇವೆ ಇದು ನಿನಗೆ ಲಾಭದಾಯಕವಲ್ಲವೇ?

ಅವನು ಇದು ಹೆಚ್ಚಿನ ಲಾಭದಾಯಕವೆಂದು ಒಪ್ಪಿಕೊಳ್ಳುತ್ತಾನೆ. ಆದರೆ ಅವನು ಈಗಿನ ಜಮೀನುದಾರನಿಗೆ ಸಾಲಗಾರನಾಗಿರುವುದರಿಂದ ನಾನು ಈಗಲೇ ಬೇರೆ ಜಮೀನುದಾರರ

ಹತ್ತಿರ ಕೆಲಸಕ್ಕೆ ಹೋಗುವುದಕ್ಕೆ ಆಗುವುದಿಲ್ಲವೆಂದು ಹೇಳುತ್ತಾನೆ ಮತ್ತು ಅವನು ಈಗಿನ ಜಮೀನುದಾರನನ್ನು ಬಿಡಬೇಕಾದರೆ ಹೊಸ ಜಮೀನುದಾರನು ಸಾಲಕ್ಕೆ ಸಮನಾದ ಹಣವನ್ನು ಮುಂಗಡವಾಗಿ ಕೊಟ್ಟರೆ ಅದನ್ನು ಜಮೀನುದಾರನಿಗೆ ಪಾವತಿ ಮಾಡಿ ಹೊಸ ಜಮೀನುದಾರನ ಹತ್ತಿರ ಕೆಲಸಕ್ಕೆ ಹೋಗಬಹುದು.

(೩) ಆಮೇಲೆ ಅವನನ್ನು ನಾಗಾರ್ಜುನ ಜಲಾಶಯ ಕಟ್ಟುತ್ತಿರುವ ಜಾಗಕ್ಕೆ ಏತಕ್ಕೆ ಓಡಿಹೋಗಬಾರದು. ಅಲ್ಲಿ ಕಾರ್ಮಿಕರಿಗೆ ಹೆಚ್ಚಿನ ಬೇಡಿಕೆ ಇದೆ. ಮತ್ತು ಅಲ್ಲಿ ಅವನು ಸುಲಭವಾಗಿ ಹೆಚ್ಚಿನ ದಿನಕೂಲಿ ರೂ. 10.00 ಗಳನ್ನು ಪಡೆಯಬಹುದು ಎಂದು ಹೇಳಬೇಕು.

ನಾನು ಜಮೀನುದಾರನಿಗೆ ಸಾಲವನ್ನು ಕೊಡಬೇಕಾಗಿರುವುದರಿಂದ ಹೋಗುವುದಕ್ಕೆ ಆಗುವುದಿಲ್ಲವೆಂದು ತಿಳಿಸುತ್ತಾನೆ ಮತ್ತೆ ನಾನು ಏನಾದರೂ ಓಡಿಹೋದರೆ ನನ್ನನ್ನು ವಾಪಸ್ಸು ಕರೆತರಲು ಜಮೀನುದಾರನು ಅವನ ಕಡೆಯವರನ್ನು ಕಳುಹಿಸುತ್ತಾನೆ ಮತ್ತು ಹೊಡೆಯುತ್ತಾನೆ ಎಂದು ಹೇಳುತ್ತಾನೆ.

ಕೆಲವು ಪ್ರದೇಶಗಳಲ್ಲಿ ದೊರಕಿರುವ ಸ್ಪಷ್ಟ ಬರವಣಿಗೆಯ ದಾಖಲೆಗಳ ಪ್ರಕಾರ ಸಾಲಕ್ಕೋಸ್ಕರ, ಮಾಸಿಕ ಮಜೂರಿಗಾಗಿ ವ್ಯಕ್ತಿಯು ಕೆಲವು ವರ್ಷಗಳ ಕಾಲ ಜೀತಗಾರನಾಗುತ್ತಾನೆ. ಕೆಲವು ಪುರಾವೆಗಳ ಪ್ರಕಾರ ಸಾಲಕ್ಕೋಸ್ಕರ ವ್ಯಕ್ತಿಯು ಒತ್ತೆಯಾಳು ಆಗಿರುತ್ತಾನೆ ಮತ್ತು ಅವುಗಳನ್ನು ಜಮೀನುದಾರರಿಂದ ವಶಪಡಿಸಿಕೊಳ್ಳಬೇಕು. ಸಾಮಾನ್ಯವಾಗಿ ದಾಖಲೆಗಳನ್ನು ಬರೆಯಲಾಗುತ್ತದೆ ಅಥವಾ ಗ್ರಾಮ ಅಧಿಕಾರಿಗಳಿಂದ ದೃಢೀಕರಿಸಲಾಗಿರುತ್ತದೆ. ಉದಾಹರಣೆಗೆ ಹಳ್ಳಿಯ ಪಟೇಲ ಮತ್ತು ಪೋಲೀಸ್ ಪಟೇಲರಿಂದ ಮಾಹಿತಿಯನ್ನು ಸಂಗ್ರಹಿಸಬಹುದು. ಅವರುಗಳ ಗುಂಪೇ ಕೆಲಸಕ್ಕೆ ಜೀತಗಾರರನ್ನು ಇಟ್ಟುಕೊಂಡಿರುತ್ತಾರೆ.

ನಿರ್ಣಯ

ನಿರ್ಣಯವು ಈ ರೀತಿ ಇರುತ್ತದೆ. ಸಾಲ ಇರುವವರೆಗೆ ಕಾರ್ಮಿಕನಾಗಿ ಬೇರೆ ಕಡೆ ಕೆಲಸಕ್ಕೆ ಹೋಗುವ ಹಾಗಿಲ್ಲ. ಸಾಲ ಮುಗಿಯುವವರೆಗೆ ಅವನು ಅಲ್ಲಿಯೇ ಕೆಲಸ ಮಾಡಬೇಕು. ಅವನಿಗೆ ಸಾಲ ತೀರಿಸಲು ಸಾಧ್ಯವಿಲ್ಲ. ಅವನು ಜೀವನಪರ್ಯಂತ ಜೀತಗಾರನಾಗಿರುತ್ತಾನೆ. ಅವನ ನಂತರ ಅವನ ಮಗನೂ ಕೂಡ ಜೀತಗಾರನಾಗಿ ಮುಂದುವರಿಯುತ್ತಾನೆ.

ಟಿಪ್ಪಣಿ

1. ಇದು ಜೀತಗಾರನ ಸ್ಥಿತಿಯ ಬಗ್ಗೆ ಅವನಿಗೆ ಇರುವ ಅರಿವನ್ನು ಸ್ಪಷ್ಟವಾಗಿ ತೋರಿಸುತ್ತದೆ. ಅವನಿಗೆ ಅವನ ಮನಸ್ಸಿನಲ್ಲಿ ಸಾಲ ತೀರುವವರೆಗೂ ಜಮೀನುದಾರನ ಹತ್ತಿರ ಅನಿವಾರ್ಯವಾಗಿ ಕೆಲಸ ಮಾಡಬೇಕಾಗಿದೆ ಎಂದು ಸ್ಪಷ್ಟವಾಗಿರುತ್ತದೆ. ಸಾಲ ತೀರುವವರೆಗೂ ಕೆಲಸ ಮಾಡಬೇಕೆಂಬ ಒಪ್ಪಂದವನ್ನು ಭಂಗ ಮಾಡುವುದಕ್ಕೆ ಆಗುವುದಿಲ್ಲ, ಹಾಗೇನಾದರೂ ಆದರೆ ಅತಿ ಹೆಚ್ಚಿನ ದಂಡವನ್ನು ವಿಧಿಸಲು ಜಮೀನುದಾರನಿಗೆ ಹಕ್ಕಿರುತ್ತದೆ ಎಂಬ ತಿಳುವಳಿಕೆಯಲ್ಲಿರುತ್ತಾನೆ.

2. ಉತ್ತರವು ಆಶ್ಚರ್ಯಕರ ಸ್ವರೂಪದ್ದಾಗಿರುತ್ತದೆ. ಸಾಲವು ಯಾವಾಗ ತೀರುತ್ತದೆ ಎಂದು ದೇವರೆ ಬಲ್ಲ. ಯಾವಾಗ ತೀರುತ್ತದೆ ಎಂದು ಊಹಿಸಲು ಸಾಧ್ಯವಿಲ್ಲ. ಜೀತಗಾರನು ತನ್ನ ಸಾಲವು ಯಾವಾಗ ತೀರುತ್ತದೆ ಎಂಬ ಅನಿರ್ದಿಷ್ಟ ಪ್ರಶ್ನೆಗೆ ಉತ್ತರವಿಲ್ಲದೇ ಒದ್ದಾಡುತ್ತಿರುತ್ತಾನೆ.

ಜೀತಪದ್ಧತಿ ಮತ್ತು ಜೀತದಾಳುಗಳನ್ನು ಗುರುತಿಸುವ ತರಬೇತಿ ಕೈಪಿಡಿ

ಪೂರಕ ಓದುವಿಕೆ-XI


ಜೀತದಾಳುಗಳನ್ನು ಗುರುತಿಸುವ ವಿಧಾನ: ಎಸ್.ಆರ್.ಶಂಕರನ್‌ರವರ ಮಾರ್ಗದರ್ಶಿ

3. ನಿರ್ದಿಷ್ಟವಾಗಿ ಹೇಳಬಹುದಾದರೆ ಅವನಿಗೆ ಹೋಗುವುದಕ್ಕೆ ಬಿಡುವುದಿಲ್ಲ.
4. ಇದು ಒಂದು ಮಾದರಿಯ ಉತ್ತರವಾಗಿದ್ದು ಇದನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕು. ಈಗಿನ ಜಮೀನುದಾರನಿಂದ ಬೇರೆ ಜಮೀನುದಾರನ ಬಳಿ ಕೆಲಸಕ್ಕೆ ಹೋಗುವ ತಯಾರಿಯಲ್ಲಿ ಇರುವಾಗ ಅವನು ನೇರವಾಗಿ ಜಮೀನುದಾರರ ಬಳಿ ಸಾಲ ಪಡೆದುಕೊಂಡು ಹಿಂದಿನ ಜಮೀನುದಾರನ ಸಾಲವನ್ನು ತೀರಿಸಲು ಬದ್ಧನಾಗಿರುತ್ತಾನೆ. ಹೀಗೆ ಮಾಡದೇ ಇದ್ದರೆ ಅವನಿಗೆ ಹೋಗಲು ಅವಕಾಶ ಇರುವುದಿಲ್ಲ.

ಸಾಮಾನ್ಯ ಟಿಪ್ಪಣಿ

ಜೀತಗಾರಿಕೆ ಪದ್ಧತಿಯ ಮಹತ್ವದ ಕುರಿತು ಕೇಂದ್ರ ಸರ್ಕಾರದ ಕಾರ್ಮಿಕ ಮಂತ್ರಾಲಯದ ಪತ್ರಗಳ ಉದ್ಧೃತ ಭಾಗವು ಈ ರೀತಿ ಇರುತ್ತದೆ.

ಒಬ್ಬ ಬಡ ರೈತ ಅಥವಾ ಕೃಷಿ ಕಾರ್ಮಿಕನು ಸಣ್ಣ ಪ್ರಮಾಣದ ಸಾಲವನ್ನು ಪಡೆಯುತ್ತಾನೆ. ಅವನ ಸಾಲವು ಹೆಚ್ಚಿನ ಬಡ್ಡಿ ದರದಿಂದ, ಅತಿ ವೇಗದಿಂದ ಜಾಸ್ತಿಯಾಗುತ್ತದೆ. ಆಗ ಅವನಿಗೆ ಸಾಲ ತೀರಿಸಲು ಸಾಧ್ಯವಿಲ್ಲವೆಂದು ಗೊತ್ತಾದಾಗ ತನ್ನ ಆಸ್ತಿಯನ್ನು ಮಾರಾಟ ಮಾಡುತ್ತಾನೆ. ಆದರೂ ಕೂಡ ಸಾಲದಲ್ಲಿಯೇ ಮುಂದುವರಿಯುತ್ತಾನೆ. ಆಗ ಅವನು ತನಗೆ ಸಾಲ ಕೊಟ್ಟವರ ಬಳಿ ತೀರಾ ಕಡಿಮೆ ಕೂಲಿಗೆ ಕೆಲಸ ಮಾಡಲು ಪ್ರಾರಂಭಿಸುತ್ತಾನೆ ಮತ್ತು ಅವನ ಕೂಲಿಯಿಂದ ಸಾಲವನ್ನು ತೀರಿಸುವ ಆಸೆಯನ್ನು ಹೊಂದಿರುತ್ತಾನೆ. ತರ್ಕಶಾಸ್ತ್ರ ದ ಕ್ರೂರ ನಿಯಮಗಳ ಪ್ರಕಾರ ಸೋಲುತ್ತಾನೆ. ಸಾಲದ ಋಣವನ್ನು ತೀರಿಸಲು ಅತ್ಯಲ್ಪ ಕೂಲಿಗಾಗಿ ಆತನ ಮಕ್ಕಳು ಮತ್ತು ಮೊಮ್ಮಕ್ಕಳು ದುಡಿಯಲು ಪ್ರಾರಂಭಿಸುತ್ತಾರೆ. ಸಾಲ ನೀಡಿದವರಲ್ಲಿ ವಂಶಪಾರಂಪರ್ಯವಾಗಿ ವಾಸ್ತವವಾಗಿ ಗುಲಾಮರಾಗುತ್ತಾರೆ. ಇಡೀ ಕುಟುಂಬದ ಭವಿಷ್ಯವನ್ನು ಹಿಂದೆ ಮಾಡಿದ ಸಾಲಕ್ಕಾಗಿ ಒತ್ತೆ ಇಡಬೇಕಾಗುತ್ತದೆ. ಸಾಲವೇ ಅವರ ಅಂತ್ಯವಾಗುತ್ತದೆ. ಜೀತಗಾರನು ದಿವಾಳಿಯಾಗಿ ಕೊನೆಗೊಳ್ಳುತ್ತಾನೆ.



"ಜೀತದಾಳುಗಳ ತನಿಖೆಯನ್ನು ಅಧಿಕಾರಿಗಳು ಜೀತದೊಡೆಯರ ಮುಂದೆ ಮಾಡಲೇಬಾರದು"

ಜೀತಪದ್ಧತಿ ಮತ್ತು ಜೀತದಾಳುಗಳನ್ನು ಗುರುತಿಸುವ ತರಬೇತಿ ಕೈಪಿಡಿ

ಪೂರಕ ಓದುವಿಕೆ-XI

ಜೀತದಾಳುಗಳನ್ನು ಗುರುತಿಸುವ ವಿಧಾನ: ಎಸ್.ಆರ್.ಶಂಕರನ್‌ರವರ ಮಾರ್ಗದರ್ಶಿ

ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ,
ಪ್ರದೇಶಾಭಿವೃದ್ಧಿ ಕಾರ್ಯಕ್ರಮಗಳು
ಹಾಗೂ ಪದನಿಮಿತ್ತ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್
ರಾಜ್ ಇಲಾಖೆ, ಬಹುಮಹಡಿ ಕಟ್ಟಡ,
3ನೇ ಹಂತ 7ನೇ ಮಹಡಿ,
ಡಾ// ಬಿ.ಆರ್. ಅಂಬೇಡ್ಕರ್ ವೀಧಿ
ಬೆಂಗಳೂರು,

1. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು
2. ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.

ದಿನಾಂಕ : 14.10.19

ಮಾನ್ಯರೇ,

ವಿಷಯ:- ರಾಜ್ಯದಲ್ಲಿ ಜೀತದಾಳುಗಳನ್ನು ಗುರುತಿಸಲು ಮರುಸಮೀಕ್ಷೆ ಮಾಡುವ ಬಗ್ಗೆ.

ಉಲ್ಲೇಖ :- ಸರ್ಕಾರದ ಪತ್ರದ ಕ್ರಮಾಂಕ.ಗ್ರಾಲಿವ. 15..ಆರ್‌ಬಿಎಲ್. 99

ದಿನಾಂಕ. 4.5.99.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖನದಲ್ಲಿ ನಮೂದಿಸಿರುವ ಪತ್ರದಲ್ಲಿ ನಿಮ್ಮ ಜಿಲ್ಲೆಯಲ್ಲಿ ಹೊಸದಾಗಿ ಮರುಸಮೀಕ್ಷೆ ಮಾಡಿ ಜೀತದಾಳುಗಳನ್ನು ಗುರುತಿಸಲು ಹಾಗೂ ಸರ್ಕಾರಕ್ಕೆ ವರದಿಯನ್ನು ಒಪ್ಪಿಸಲು ಕೋರಲಾಗಿತ್ತು.

ಈ ವಿಷಯವನ್ನು ಕುರಿತು ಅನೇಕ ಜಿಲ್ಲಾಧಿಕಾರಿಗಳು ಶ್ರೀ.ಎಸ್.ಆರ್.ಶಂಕರನ್, ನಿವೃತ್ತ ಮುಖ್ಯ ಕಾರ್ಯದರ್ಶಿಗಳು, ಇವರ ವರದಿಯ ಪ್ರತಿಯನ್ನು ಕಳುಹಿಸಲು ಕೋರಿರುತ್ತಾರೆ.

ಆದ್ದರಿಂದ ಶ್ರೀ.ಎಸ್.ಆರ್.ಶಂಕರನ್ ರವರ ವರದಿಯನ್ನು ಆದಷ್ಟು ಮಟ್ಟಿಗೆ ಕನ್ನಡ ಭಾಷೆಗೆ ಭಾಷಾಂತರಿಸಿ, ಕನ್ನಡ ಮತ್ತು ಇಂಗ್ಲಿಷ್ ಪ್ರತಿಗಳೆರಡನ್ನು ಈ ಕೂಡ ಲಗತ್ತಿಸಿ ನಿಮ್ಮ ತಿಳುವಳಿಕೆಗಾಗಿ ಹಾಗು ಮುಂದಿನ ಕ್ರಮಕ್ಕಾಗಿ ರವಾನಿಸಿದೆ.

ಈ ವರದಿಯು ಆಂಧ್ರ ಪ್ರದೇಶ ರಾಜ್ಯಕ್ಕೆ ಸಂಬಂಧಪಟ್ಟಿದ್ದು 1976 ರಲ್ಲಿ ಶ್ರೀ.ಎಸ್.ಆರ್.ಶಂಕರನ್ ರವರಿಂದ ತಯಾರಿಸಲ್ಪಟ್ಟಿರುತ್ತದೆ. ಈ ವರದಿಯ ಜೊತೆಗೆ ನಿಮ್ಮ ಜಿಲ್ಲೆಯಲ್ಲಿ ಸದ್ಯದಲ್ಲಿ ಇರುವ ವಾಸ್ತವಾಂಶಗಳು ಹಾಗು ದರಗಳನ್ನು ಗಮನದಲ್ಲಿಟ್ಟುಕೊಂಡು ಜೀತದಾಳುಗಳ ಮರುಸಮೀಕ್ಷೆಯನ್ನು ಅತಿ ಎಚ್ಚರಿಕೆಯಿಂದ ನಡೆಸಿ. ಈ ಬಗ್ಗೆ ಸರ್ಕಾರಕ್ಕೆ ನಿಖರವಾದ ವರದಿಯನ್ನು ದಿನಾಂಕ.5.11.99 ರೊಳಗೆ ಕಳುಹಿಸಲು ಕೋರುತ್ತೇನೆ.

ತಮ್ಮ ವಿಶ್ವಾಸಿ,

ನಿರ್ದೇಶಕರ ಪರವಾಗಿ,
ಪ್ರದೇಶಾಭಿವೃದ್ಧಿ ಕಾರ್ಯಕ್ರಮಗಳು
ಹಾಗು ಪದವಿಮಿತ್ತ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಪೂರಕ ಓದುವಿಕೆ - XII A

ಜೀತದಾಳುಗಳನ್ನು ಗುರುತಿಸುವ ವಿಧಾನ

1976ರಲ್ಲಿ ಆಂಧ್ರ ಪ್ರದೇಶದ ತೆಲಂಗಾಣ ಭಾಗದಲ್ಲಿ ಜಿಲ್ಲಾಧಿಕಾರಿಯಾಗಿದ್ದ ಶ್ರೀ ಎಸ್. ಆರ್. ಶಂಕರನ್‌ರವರು ಸಿದ್ಧಪಡಿಸಿದ ಮಾರ್ಗದರ್ಶಿಯ ಸಾರಾಂಶ ಇಲ್ಲಿದೆ. ಜೊತೆಗೆ ಇನ್ನಿತರ ಸೂಕ್ತ ಅಂಶಗಳನ್ನೂ ಸೇರಿಸಲಾಗಿದೆ.

1. ಜೀತದಾಳುಗಳನ್ನು ಗುರುತಿಸುವ ಕಾರ್ಯದಳವು ತನಿಖೆಗೆ ಒಂದು ಊರಿಗೆ ಹೋಗುವಾಗ ಈ ಕೆಳಗಿನ ವಿಷಯಗಳನ್ನು ಗಮನದಲ್ಲಿಡಬೇಕು:

1) ಕಾರ್ಯದಳವು ನೇರವಾಗಿ ದಲಿತ ಕೇರಿಗೆ ಅಥವಾ ಆದಿವಾಸಿ ಜನರ ಹಾಡಿಗೆ ಹೋಗಬೇಕು. ಜೀತದಾಳುಗಳಲ್ಲಿ ಹೆಚ್ಚಿನವರು ದಲಿತರು ಅಥವಾ ಆದಿವಾಸಿ ಜನರು. ಅಧಿಕಾರಿಗಳ ಸಾಮಾನ್ಯ ಪದ್ಧತಿಯಂತೆ ಊರಿನ ಬಲಿಷ್ಠ ವರ್ಗದವರ ಮನೆಗಳಿಗಲ್ಲ.

2) ಯಾವುದೇ ಕಾರಣಕ್ಕೂ ಜೀತದಾಳುಗಳನ್ನು ಅವರ ಯಜಮಾನರ ಎದುರು ನಿಲ್ಲಿಸಿ ತನಿಖೆ ಮಾಡಬಾರದು. ಯಜಮಾನನ ಮುಂದೆ ನಿಲ್ಲಿಸಿದಾಗ ಯಜಮಾನನು ಮೊದಲು ಹೇಳಿಕೊಡದಿದ್ದರೂ ಯಜಮಾನನ ಭಯಕ್ಕೆ ಜೀತದಾಳು ತಾನು ಜೀತಕ್ಕಿದ್ದ ಸತ್ಯ ಸಂಗತಿಯನ್ನು ಒಪ್ಪಿಕೊಳ್ಳದೇ ಇರಬಹುದು. ಆ ಭಯದ ವಾತಾವರಣವನ್ನು ತಪ್ಪಿಸಲು ಜೀತದಾಳುವನ್ನು ಪ್ರತ್ಯೇಕವಾಗಿ ವಿಚಾರಿಸಬೇಕು.

3) ತನಿಖೆಯನ್ನು ದಲಿತ ಮುಖಂಡರು, ಜೀತದಾಳುಗಳ ತಂದೆತಾಯಿಗಳು ಮತ್ತು ಜೀತದಾಳುಗಳನ್ನೊಳಗೊಂಡ ಗುಂಪಿನಲ್ಲಿ ನಡೆಸುವುದು ಸೂಕ್ತ. ಗುಂಪು ವಿಚಾರಣೆಯಲ್ಲಿ ತಪ್ಪು ಮಾಹಿತಿಗಳನ್ನು ಪರೀಕ್ಷಿಸಿ ತಿದ್ದಲು ಅವಕಾಶವಿರುವುದು. ಪ್ರತಿ ಒಬ್ಬ ಜೀತದಾಳುವನ್ನು ವೈಯಕ್ತಿಕವಾಗಿ ವಿಚಾರಣೆ ನಡೆಸಿದರೆ ಸುಳ್ಳು ಮಾಹಿತಿಗಳನ್ನು ಕಂಡು ಹಿಡಿಯುವುದು ಕಷ್ಟ.

4) ಜೀತದಾಳುವಿನ ಹೇಳಿಕೆಗೆ ಯಾವುದೇ ಲಿಖಿತ ಆಧಾರ ಬೇಕಿಲ್ಲ (ಜೀತ ಕಾನೂನು, ವಿಧಿ 2g (i); 15).

5) ಜೀತದಾಳುಗಳನ್ನು ಕಂಡುಹಿಡಿಯಲು ಯಾವ ಪದ ಬಳಸುತ್ತಾರೆ ಎಂಬುದು ಮುಖ್ಯವಲ್ಲ. ಜೀತ ಕಾನೂನಿನಲ್ಲಿ ದೇಶದ ಬೇರೆ ಬೇರೆ ಪ್ರದೇಶಗಳಲ್ಲಿ ಬಳಸಲ್ಪಡುವ ಬೇರೆ ಬೇರೆ ಶಬ್ದಗಳ ಜೊತೆ ಜೀತ ಶಬ್ದದ ಪ್ರಸ್ತಾಪವಿದ್ದರೆ (ಪರಿಚ್ಛೇದ 2b ವಿವರಣೆ) ಕರ್ನಾಟಕದಲ್ಲಿ ಜೀತದ ಜೊತೆಗೆ ಸಂಬಳಕ್ಕಿರುವುದು, ಬಿಟ್ಟಿಚಾಕ್ರಿ, ಆಳುಮಗ, ಮನೆಯಾಳು ಮುಂತಾದ ಶಬ್ದಗಳನ್ನು ಬಳಸುತ್ತಾರೆ. ಕೆಲಸದ ಸಂಬಂಧಗಳು ಮತ್ತು ಕೆಲಸದ ಸಂಬಂಧಗಳಲ್ಲಿ ಜೀತ ಕಾನೂನು ಪರಿಚ್ಛೇದ 2 ಮತ್ತು ಸುಪ್ರೀಂ ಕೋರ್ಟಿನ ತೀರ್ಪುಗಳ ಪ್ರಕಾರ ಬಲಾತ್ಕಾರ ಮತ್ತು ನಿರ್ಬಂಧ ಇದೆಯೇ ಎಂದು ತಿಳಿದುಕೊಳ್ಳುವುದು ಮುಖ್ಯ. ಕೆಲಸ ಮಾಡಿಸುವಲ್ಲಿ ಬಲಾತ್ಕಾರ ಮತ್ತು ನಿರ್ಬಂಧ ಇದ್ದರೆ ಕಾನೂನು ಪ್ರಕಾರ ಅದು ಜೀತ ಆಗುತ್ತದೆ.

ಜೀತಪದ್ಧತಿ ಮತ್ತು ಜೀತದಾಳುಗಳನ್ನು ಗುರುತಿಸುವ ತರಬೇತಿ ಕೈಪಿಡಿ

ಪೂರಕ ಓದುವಿಕೆ-XII A

ಜೀತದಾಳುಗಳನ್ನು ಗುರುತಿಸುವ ವಿಧಾನದ ಮುಖ್ಯ ಅಂಶಗಳು

2. ತನಿಖೆ ನಡೆಸುವ ರೀತಿ:

1) ಗುಂಪಿನಲ್ಲಿ ಮೊದಲಿಗೆ ನಿಮ್ಮಲ್ಲಿ ಯಾರು ಜೀತದಾಳುಗಳು ಅಥವಾ ನಿಮ್ಮಲ್ಲಿ ಜೀತದಾಳುಗಳು ಇದ್ದಾರೆಯೇ ಎಂದು ಪ್ರಶ್ನಿಸಬಾರದು.

2) ದಿನಗೂಲಿ, ಗುತ್ತಿಗೆ, ಸ್ವಂತ ಜಮೀನಿನಲ್ಲಿ ಕೆಲಸ, ಸ್ವಂತ ಜಮೀನಿನಲ್ಲಿಯ ಕೆಲಸದ ಜೊತೆಗೆ ಕೂಲಿ ಕೆಲಸ, ಸ್ವಂತ ವ್ಯಾಪಾರ, ಸರ್ಕಾರಿ ಅಥವಾ ಖಾಸಗಿ ನೌಕರಿ ಅಥವಾ ಕಛೇರಿ ಕೆಲಸಗಳನ್ನು ಊರಲ್ಲಿ ಯಾರ‍್ಯಾರು ಮಾಡುತ್ತಾರೆಂದು ಮೊದಲು ತಿಳಿದುಕೊಳ್ಳುವುದು.

3) ಇದಾದ ಮೇಲೆ ಈ ಎಲ್ಲಾ ಕೆಲಸಗಳನ್ನು ಬಿಟ್ಟು ಬೇರೆ ಕೆಲಸ ಮಾಡುವವರು ಇದ್ದಾರೆಯೇ ಎಂದು ತಿಳಿದುಕೊಳ್ಳುವುದು. ಮೇಲ್ಕಾಣಿಸಿದ ಕೆಲಸಗಳನ್ನು ಬಿಟ್ಟು ಬೇರೆ ರೀತಿಯ ಕೆಲಸ ಮಾಡುವವರು ಇದ್ದಾರೆ ಎಂದರೆ ಅವರು ಜೀತದಾಳುಗಳೆಂದು ಗುಮಾನಿ ಬರುವುದು. ಪ್ರತ್ಯೇಕವಾಗಿ ಒಬ್ಬ ಯಜಮಾನನಲ್ಲಿಯೇ ದೀರ್ಘಕಾಲ ಕೆಲಸ ಮಾಡುತ್ತಾನೆಂದಾದರೆ ಆ ಗುಮಾನಿ ಬರುವುದು ಸಹಜ. ಆ ಗುಮಾನಿಯನ್ನು ದೃಢಪಡಿಸಲು ಮುಂದಿನ ಪ್ರಶ್ನೆಗಳನ್ನು ಕೇಳಬಹುದು.

4) ಆ ಪ್ರಶ್ನೆಗಳೆಂದರೆ: ಅವರು ಯಾರ ಮನೆಯಲ್ಲಿ ಕೆಲಸ ಮಾಡುತ್ತಾರೆ? ಅಲ್ಲಿ ಎಷ್ಟು ವರ್ಷಗಳಿಂದ ಕೆಲಸ ಮಾಡುತ್ತಾರೆ? ಆ ರೀತಿ ಕೆಲಸ ಮಾಡಲು ಕಾರಣವೇನು? ಸಾಲಕ್ಕೆ ಬಡ್ಡಿ ಇದೆಯೇ? ಇದ್ದರೆ ಬಡ್ಡಿ ದರ ಎಷ್ಟು? ಕೊಡಬೇಕಾದ ಮಜೂರಿ (ಸಂಬಳ) ಎಷ್ಟು? ಊಟ, ಬಟ್ಟೆ ಕೊಡುತ್ತಾರೆಯೇ? ದಿವಸಕ್ಕೆ ಎಷ್ಟು ಹೊತ್ತು ಕೆಲಸ ಮಾಡಬೇಕು? ವಾರದಲ್ಲಿ / ವರ್ಷದಲ್ಲಿ ಬಿಡುವು / ರಜೆ ಇದೆಯೇ? ಇನ್ನು ಎಷ್ಟು ಸಾಲ ಬಾಕಿ ಇದೆ? ಇನ್ನೆಷ್ಟು ಸಮಯ ಅಲ್ಲಿ ಕೆಲಸ ಮಾಡಬೇಕು? ಈ ಪ್ರಶ್ನೆಗಳಿಗೆ ಸಿಗುವ ಉತ್ತರಗಳು ಅವನು ಜೀತದಾಳುವೋ ಅಲ್ಲವೋ ಎಂಬುದನ್ನು ಸ್ಪಷ್ಟಪಡಿಸುತ್ತವೆ.

3. ಜೀತದಾಳುಗಳೆಂದು ಸ್ಪಷ್ಟಪಡಿಸಿದ ಮೇಲೆ ಆ ತೀರ್ಮಾನವನ್ನು ದೃಢೀಕರಿಸಲು ಕೆಳಗಿನ ಎರಡು ಮೂರು ಪ್ರಶ್ನೆಗಳನ್ನು ಗುರುತಿಸಿದ ಜೀತದಾಳುಗಳಿಗೆ ಕೇಳಬಹುದು:

1) ತಹಶೀಲ್ದಾರರ ಕಛೇರಿಯಲ್ಲಿ ತಿಂಗಳಿಗೆ ಎರಡು ಸಾವಿರ ರೂಪಾಯಿ ಸಂಬಳದ ಪೇದೆ ಕೆಲಸ ನಿನಗೆ ಕೊಡಿಸುವೆ. ನೀನು ಆ ಕೆಲಸಕ್ಕೆ ಈಗಲೇ ಬರಲಿಕ್ಕೆ ತಯಾರಿದ್ದೀಯಾ?

2) ನಿನಗೆ ಈಗ ಸಿಗುವ ಸಂಬಳಕ್ಕಿಂತ ಎರಡು ಪಾಲು ಜಾಸ್ತಿ ಸಂಬಳ ಕೊಡಲು ಪಕ್ಕದ ಊರಿನ ಒಬ್ಬ ಯಜಮಾನ ಒಪ್ಪಿದ್ದಾನೆ. ಅವರನ್ನು ನಾವು ಭೇಟಿಯಾಗಿ ಬಂದಿದ್ದೀವಿ. ನಿನಗೆ ಅದೇ ಒಳ್ಳೆಯದಲ್ಲವೇ?

3) ಪಕ್ಕದ ಊರಲ್ಲಿ ದಿನಕ್ಕೆ 50 ರೂಪಾಯಿ ಲೆಕ್ಕದಲ್ಲಿ ಕೂಲಿ ಸಿಗುತ್ತದೆ. ಅಲ್ಲಿ ಕೆಲಸಕ್ಕೆ ತುಂಬಾ ಬೇಡಿಕೆ ಇದೆ. ನೀನು ಹೋಗುತ್ತೀಯಾ?

ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರ, ಹೇಗೆ ಸ್ವಾಮಿ ಹೋಗಲಿ; ನನ್ನ ಸಾಲ ತೀರಿಸುವ ತನಕ ಎಲ್ಲೂ ಹೋಗಲಿಕ್ಕಾಗುವುದಿಲ್ಲ; ಒಂದು ವೇಳೆ ತಪ್ಪಿಸಿಕೊಂಡು ಹೋದರೂ ಯಜಮಾನನು ತನ್ನ ಆಳುಗಳಿಂದ ನನ್ನನ್ನು ಹಿಡಿದು ತಂದು ಕಟ್ಟಿಸಿ ಹಾಕಿ ಹೊಡೆಯಬಹುದು ಮುಂತಾದ ಉತ್ತರಗಳನ್ನು ಕೊಡಬಹುದು. ಅಂತಹ ಯಾವುದೇ ಉತ್ತರಗಳು ಅವನು ಜೀತದಾಳು ಎಂಬುದನ್ನು ದೃಢಪಡಿಸುತ್ತವೆ ಮತ್ತು ಅವನಿಗೆ ಕಾನೂನಿನನ್ವಯ ಸೌಲಭ್ಯಗಳು ಸಿಗಲೇ

ಪೂರಕ ಓದುವಿಕೆ - XII B

ಜೀತದಾಳುಗಳ ಗುರುತಿಸುವಿಕೆ ಮತ್ತು ಬಿಡುಗಡೆ

(ಕರ್ನಾಟಕ ಸರ್ಕಾರದ ಕ್ರಿಯಾ ಯೋಜನೆ: ಜೀತದಾಳುಗಳ ಗುರುತಿಸುವಿಕೆ, ಬಿಡುಗಡೆ ಮತ್ತು ಪುನರ್ವಸತಿ ಹಾಗೂ ಅಪರಾಧಿಗಳ ಮೇಲೆ ಕ್ರಮ ಜರುಗಿಸುವ ಕುರಿತು- ಇದರ ಅಧ್ಯಾಯ 4ರಿಂದ)

0. ಕಾನೂನಿನ 12ನೇ ಪರಿಚ್ಛೇದದ ಪ್ರಕಾರ ತನ್ನ ಕಾರ್ಯವ್ಯಾಪ್ತಿಯಲ್ಲಿ ಜೀತಪದ್ಧತಿ ಅಥವಾ ಇನ್ನಿತರ ಯಾವುದೇ ಬಲಾತ್ಕಾರದ ದುಡಿಮೆ ಹೇರಲ್ಪಟ್ಟಿದ್ದರೆ ಅದರ ಬಗ್ಗೆ ವಿಚಾರಣೆ ಮಾಡುವ, ಅಂದರೆ ಜೀತದಾಳುಗಳನ್ನು ಗುರುತಿಸುವ, ಕರ್ತವ್ಯ ಜಿಲ್ಲಾಧಿಕಾರಿ ಮತ್ತು ಪರಿಚ್ಛೇದ 10ರಲ್ಲಿ ನಮೂದಿಸಿದ ಪ್ರತಿ ಅಧಿಕಾರಿಯದ್ದು ಮತ್ತು ಗುರುತಿಸಿದ ಮೇಲೆ ಅಂತಹ ಬಲಾತ್ಕಾರದ ದುಡಿಮೆಯನ್ನು ನಿರ್ಮೂಲನೆಗೊಳಿಸಲು ಬೇಕಾದ ಕ್ರಮಗಳನ್ನು ಅವರು ಕೈಗೊಳ್ಳಬೇಕು. ಅಂದರೆ ಗುರುತಿಸಿದ ಜೀತದಾಳುಗಳನ್ನು ಬಿಡುಗಡೆಗೊಳಿಸಿ ಪುನರ್ವಸತಿಗೊಳಿಸಬೇಕು ಮತ್ತು ಜೀತವನ್ನು ಕಾರ್ಯಾಚರಣೆ ಮಾಡುವ ವ್ಯಕ್ತಿಗಳ ಮೇಲೆ ಕಾನೂನು ಕ್ರಮ ಜರುಗಿಸಬೇಕು.

ಕರ್ನಾಟಕ ಸರ್ಕಾರವು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಿದ ಸೂಚನಾ ಪತ್ರ ನಂ. SLW 20 LBD 76 (1) ದಿನಾಂಕ 30-3-1976ದ ಮೂಲಕ ಪರಿಚ್ಛೇದ10ರಲ್ಲಿ ವಿಧಿಸಿದ ಅಧಿಕಾರಗಳನ್ನು ಬಳಸಿ ರಾಜ್ಯದ ಎಲ್ಲಾ ಜಿಲ್ಲಾ ದಂಡಾಧಿಕಾರಿಗಳಿಗೆ 1-4-1976ರಿಂದ ತಮ್ಮ ಕಾರ್ಯಕ್ಷೇತ್ರದಲ್ಲಿ ಪರಿಚ್ಛೇದ 10ರ ಪ್ರಕಾರ ಎಲ್ಲಾ ಅಧಿಕಾರಗಳನ್ನು ಮತ್ತು ಎಲ್ಲಾ ಕರ್ತವ್ಯಗಳನ್ನು ವಿಧಿಸಿದೆ.(ಅನುಸೂಚಿ 9.6 ನೋಡಿ). ಅದೇ ಪರಿಚ್ಛೇದವು ಜಿಲ್ಲಾದಂಡಾಧಿಕಾರಿಯು ತನ್ನ ಮೇಲೆ ವಿಧಿಸಿದ ಎಲ್ಲಾ ಅಧಿಕಾರಗಳನ್ನು ಚಲಾಯಿಸಲು ಮತ್ತು ಕರ್ತವ್ಯಗಳನ್ನು ನಿರ್ವಹಿಸಲು ತನ್ನ ಕೈಕೆಳಗಿನ ಅಧಿಕಾರಿಯೊಬ್ಬನನ್ನು ನೇಮಿಸಬಹುದು ಎಂದು ಸೂಚಿಸುತ್ತದೆ.

1. ಜೀತದಾಳುಗಳ ಗುರುತಿಸುವಿಕೆ

1.1 ಜಿಲ್ಲಾ ದಂಡಾಧಿಕಾರಿಗಳು ಅಥವಾ ಅವರು ನೇಮಿಸಲ್ಪಟ್ಟ ಅಧಿಕಾರಿಯು ಜೀತದಾಳುಗಳನ್ನು ಗುರುತಿಸಬೇಕು. "ಕಾನೂನು ಒಪ್ಪಿಕೊಂಡಿರುವ ಅಪರಾಧಗಳ ಮೇಲೆ ನಿಗಾ ಇಡಲು" ಮತ್ತು ಕಾನೂನು ಒಪ್ಪಿಕೊಂಡಿರುವ ಯಾವುದಾದರೂ ಅಪರಾಧಗಳು ನಡೆದಿವೆಯೇ ಎಂದು ಸಮೀಕ್ಷೆ ಮಾಡುವ ಉದ್ದೇಶ (ಪರಿಚ್ಛೇದ 14) ದಿಂದ ಕಾನೂನಿನ 13 ಪರಿಚ್ಛೇದದಡಿ ರಚಿಸಲಾದ ಜಾಗೃತಿ ಸಮಿತಿಯೂ ಜೀತದಾಳುಗಳನ್ನು ಗುರುತಿಸಬೇಕು. ಜೊತೆಗೆ ಕರ್ನಾಟಕ ಪಂಚಾಯತ್ ರಾಜ್ ಕಾನೂನು 1993ರ ಪರಿಚ್ಛೇದ 58A ಪ್ರಕಾರ ಪ್ರತಿ ಗ್ರಾಮ ಪಂಚಾಯತಿಯ ಕಾರ್ಯದರ್ಶಿಗಳು ಜೀತದಾಳುಗಳ ಬಗ್ಗೆ ಜಿಲ್ಲಾಧಿಕಾರಿಗಳಿಗೆ ವರದಿಯನ್ನು ನೀಡಬೇಕು. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು 8-11-2004ರಂದು ಹೊರಡಿಸಿದ (ಗ್ರಾಅಪ: 17. ಆರ್ ಬಿಎಲ್ 2004) ಸುತ್ತೋಲೆಯ ಪ್ರಕಾರ ಗ್ರಾಮ ಪಂಚಾಯತಿ ಕಾರ್ಯದರ್ಶಿಗಳು ಉಪ ವಿಭಾಗಾಧಿಕಾರಿಗಳಿಗೂ ಜೀತದಾಳುಗಳ ಬಗ್ಗೆ ವರದಿಯನ್ನು ಕೊಡಬೇಕು.

1.2 ಜಿಲ್ಲಾಧಿಕಾರಿಗಳು ಮತ್ತು ಉಪ ವಿಭಾಗಾಧಿಕಾರಿಗಳು ನಿಯತಕಾಲಿಕವಾಗಿ, ಅಂದರೆ

ಜೀತಪದ್ಧತಿ ಮತ್ತು ಜೀತದಾಳುಗಳನ್ನು ಗುರುತಿಸುವ ತರಬೇತಿ ಕೈಪಿಡಿ

ಪೂರಕ ಓದುವಿಕೆ - XII B

ಜೀತದಾಳುಗಳ ಗುರುತಿಸುವಿಕೆ ಮತ್ತು ಬಿಡುಗಡೆ

ಕರ್ನಾಟಕ ಸರ್ಕಾರದ ಕ್ರಿಯಾ ಯೋಜನೆ

ಮೂರು ವರ್ಷಗಳಿಗೊಮ್ಮೆ ಜೀತದಾಳುಗಳ ಸಮೀಕ್ಷೆಯನ್ನು ಮಾಡುತ್ತಿರಬೇಕು. ಜಿಲ್ಲಾ ಪಂಚಾಯತಿಯ ಅಧ್ಯಕ್ಷರು ಮತ್ತು ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ತಮ್ಮ ಕ್ಷೇತ್ರವ್ಯಾಪ್ತಿಯ ಗ್ರಾಮ ಪಂಚಾಯತಿ ಕಾರ್ಯದರ್ಶಿಗಳು ವರ್ಷಕ್ಕೊಮ್ಮೆ ಅಥವಾ ಪ್ರತಿ ಮೂರು ವರ್ಷಕ್ಕೊಮ್ಮೆಯಾದರೂ ಜೀತದಾಳುಗಳ ಬಗ್ಗೆ ಜಿಲ್ಲಾಧಿಕಾರಿಗಳು ಮತ್ತು ಉಪ ವಿಭಾಗಾಧಿಕಾರಿಗಳಿಗೆ ವರದಿ ಸಲ್ಲಿಸುವಂತೆ ನೋಡಿಕೊಳ್ಳಬೇಕು. ಜಿಲ್ಲಾಧಿಕಾರಿಗಳು ಮತ್ತು ಉಪ ವಿಭಾಗಾಧಿಕಾರಿಗಳಿಗೆ ಅವರವರ ಜಾಗೃತ ಸಮಿತಿಗಳು ಸಮೀಕ್ಷೆ ಕಾರ್ಯದಲ್ಲಿ ನೆರವಾಗಬೇಕು. ಜಾಗೃತಿ ಸಮಿತಿಗಳ ರಚನೆ ಮತ್ತು ಪ್ರಕಾರ್ಯಗಳನ್ನು ಕಾನೂನಿನ 13 ಮತ್ತು 14ನೇ ಪರಿಚ್ಛೇದಗಳಲ್ಲಿ ವಿವರಿಸಲಾಗಿದೆ. ಜಾಗೃತಿ ಸಮಿತಿಗಳು ಕನಿಷ್ಟ ಎರಡು ತಿಂಗಳಿಗೊಮ್ಮೆ ಸಭೆ ಸೇರಬೇಕು (ಗ್ರಾಅಪ :8 ಆರ್‌ಬಿಎಲ್ 2002, ದಿನಾಂಕ: 11.11.2002). ಜಾಗೃತಿ ಸಮಿತಿಗಳನ್ನು ಎರಡು ವರ್ಷಕ್ಕೊಮ್ಮೆ ಪುನರ್‌ರಚಿಸಲಾಗುವುದು. ಅವನ್ನು ಪುನರ್‌ರಚಿಸುವಾಗ ಸರಿಯಾದ ತಿಳುವಳಿಕೆ ಮತ್ತು ಪ್ರಗತಿಪರ ಚಿಂತನೆ ಇರುವ ವ್ಯಕ್ತಿಗಳನ್ನೂ ಅನುಸೂಚಿತ ಜಾತಿ ಮತ್ತು ಜನಾಂಗಗಳು, ಕಾರ್ಮಿಕ ಸಂಘಟನೆಗಳು ಮತ್ತು ಸರ್ಕಾರೇತರ ಸಂಸ್ಥೆಗಳ ಮುಖಂಡರನ್ನೂ ಸೇರಿಸುವಂತೆ ನೋಡಿಕೊಳ್ಳಬೇಕು.

1.3 ಕರ್ನಾಟಕ ಸರ್ಕಾರವು ಮೂರು ಮಂದಿ ಸದಸ್ಯರಿರುವ ಜಿಲ್ಲಾ ಸಮಿತಿಯೊಂದನ್ನು ರಚಿಸಿದೆ. ಅದರ ಅಧ್ಯಕ್ಷತೆಯನ್ನು ಜಿಲ್ಲಾ ಪಂಚಾಯತಿ ಅಧ್ಯಕ್ಷರು ವಹಿಸುವರು. ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ಸದಸ್ಯ ಕಾರ್ಯದರ್ಶಿಗಳಾಗಿರುವರು. ಜಿಲ್ಲಾಧಿಕಾರಿಗಳು ಸದಸ್ಯರಾಗಿರುವರು (ಸರ್ಕಾರಿ ಆದೇಶ ಸಂಖ್ಯೆ ಗ್ರಾಅಪ. 13. ಆರ್‌ಬಿಎಲ್ 2003 ದಿನಾಂಕ. 06–09–2004). ಈ ಸಮಿತಿಯು ಕನಿಷ್ಟ ಪ್ರತಿ ಮೂರು ತಿಂಗಳಿಗೆ ಸಭೆ ಸೇರಬೇಕು. ಜೀತದಾಳುಗಳನ್ನು ಗುರುತಿಸಿ ಬಿಡುಗಡೆಗೊಳಿಸುವ ಮತ್ತು ಅಪರಾಧಿಗಳನ್ನು ಶಿಕ್ಷಿಸುವ ಜವಾಬ್ದಾರಿ ಜಿಲ್ಲಾಧಿಕಾರಿಗಳಿಗಿರುತ್ತದೆ. ಅವರನ್ನು ಗುರುತಿಸಲಿಕ್ಕೆ ನೆರವಾಗುವ ಮತ್ತು ಅವರಿಗೆ ಪುನರ್ವಸತಿ ಕಲ್ಪಿಸುವ ಜವಾಬ್ದಾರಿ ಜಿಲ್ಲಾ ಪಂಚಾಯತಿ ಅಧ್ಯಕ್ಷರು ಮತ್ತು ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳದ್ದಾಗಿರುತ್ತದೆ. (ಕರ್ನಾಟಕದ ಕ್ಷೇತ್ರಾಧಿಕಾರಿಗಳಿಗೆ ಜೀತ ಸಮಸ್ಯೆ ಕುರಿತು ತಿಳುವಳಿಕೆ ನೀಡಲು ಬೆಂಗಳೂರಿನ ನ್ಯಾಶನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯುನಿವರ್ಸಿಟಿಯಲ್ಲಿ 2003ರ ಅಕ್ಟೋಬರ್ 9–10ರಂದು ಕರ್ನಾಟಕ ಸರ್ಕಾರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾರ್ಮಿಕ ಇಲಾಖೆಗಳೊಂದಿಗೆ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ಆಯೋಜಿಸಿದ ಎರಡು ದಿನಗಳ ಕಮ್ಮಟದ ಫಲಿತಾಂಶ).

1.4 ಜೀತದಾಳು ಮತ್ತು ಬಾಲ ಕಾರ್ಮಿಕರಿಗೆ ಸಂಬಂಧ ಪಟ್ಟ ಎಲ್ಲಾ ಕಾರ್ಯಗಳಿಗೆ ಜಿಲ್ಲಾಧಿಕಾರಿಗಳು ಕೇಂದ್ರ ಬಿಂದುವಾಗಿರುತ್ತಾರೆ. ಅವರು ತಮ್ಮ ಅಧ್ಯಕ್ಷತೆಯಲ್ಲಿ ಒಂದು ಜಿಲ್ಲಾ ವೇದಿಕೆಯನ್ನು ರಚಿಸಬೇಕು. ಆ ವೇದಿಕೆಯ ಉದ್ದೇಶ ಸರ್ಕಾರೇತರ ಸಂಸ್ಥೆಗಳ ಜೊತೆ ಜೀತದಾಳು ಮತ್ತು ಬಾಲ ಕಾರ್ಮಿಕರಿಗೆ ಸಂಬಂಧ ಪಟ್ಟ ವಿಷಯಗಳ ಬಗ್ಗೆ ಆಗಿಂದಾಗ್ಗೆ ಸಮಾಲೋಚನೆ ನಡೆಸುವುದು. ಸರ್ಕಾರೇತರ ಸಂಸ್ಥೆಗಳಿಗೆ ಜೀತದಾಳು ಮತ್ತು ಬಾಲ ಕಾರ್ಮಿಕರ ಗುರುತಿಸುವಿಕೆ ಮತ್ತು ಪುನರ್ವಸತಿಗೆ ಸಂಬಂಧ ಪಟ್ಟಂತೆ ಯೋಜನೆಗಳನ್ನು ರೂಪಿಸುವುದು ಮತ್ತು ಅವನ್ನು ನಿರ್ವಹಿಸುವ ಜವಾಬ್ದಾರಿಯನ್ನು ವಹಿಸಲಾಗುವುದು ಮತ್ತು ಆ ಕೆಲಸಗಳಿಗೆ ಬೇಕಾಗುವ ಧನಸಹಾಯವನ್ನು ಒದಗಿಸಲಾಗುವುದು. ಜೀತದಾಳುಗಳ ಬಗ್ಗೆ

ಪೂರಕ ಓದುವಿಕೆ - XII B
ಜೀತದಾಳುಗಳ ಗುರುತಿಸುವಿಕೆ ಮತ್ತು ಬಿಡುಗಡೆ
ಕರ್ನಾಟಕ ಸರ್ಕಾರದ ಕ್ರಿಯಾ ಯೋಜನೆ

ಕೆಲಸಮಾಡುವ ಸರ್ಕಾರೇತರ ಸಂಸ್ಥೆಗಳು ತಮ್ಮ ಸಾಮರ್ಥ್ಯ ಹಾಗೂ ಪ್ರಾಮಾಣಿಕತೆಯನ್ನು ಖಾತ್ರಿ ಮಾಡುವ ರೀತಿಯಲ್ಲಿ ಒಂದು ವೇದಿಕೆ ರಚಿಸಿ ಜೀತದಾಳುಗಳ ಗುರುತಿಸುವಿಕೆ ಮತ್ತು ಪುನರ್ವಸತಿ ಕಾರ್ಯದಲ್ಲಿ ಸರ್ಕಾರವು ತಮ್ಮನ್ನು ತೊಡಗಿಸಿಕೊಳ್ಳುವಂತೆ ನೋಡಬಹುದು.

1.5 ಜಿಲ್ಲಾಧಿಕಾರಿಗಳು ಜೀತದಾಳುಗಳನ್ನು ಸ್ವಲ್ಪ ಪ್ರಮಾಣದಲ್ಲಿ ತಾವೇ ಖುದ್ದಾಗಿ ಗುರುತಿಸಬೇಕು ಮತ್ತು ಉಪ ವಿಭಾಗಾಧಿಕಾರಿಗಳು ಜಿಲ್ಲೆಯಲ್ಲಿಯ ಜೀತದಾಳುಗಳ ಗುರುತಿಸುವಿಕೆಯ ಪ್ರಕ್ರಿಯೆಯನ್ನು ಕ್ರಿಯಾಶೀಲವಾಗಿ ಮುನ್ನಡೆಸಬೇಕು. ಪಂಚಾಯತಿ ಇಲಾಖೆಯ ಅಧಿಕಾರಿಗಳೂ ಜೀತದಾಳುಗಳ ಬಗ್ಗೆ ವರದಿ ಕೊಡುವಂತೆ ಉಪ ವಿಭಾಗಾಧಿಕಾರಿಗಳು ಮುತುವರ್ಜಿ ವಹಿಸಬೇಕು. ಈ ರೀತಿ ಅಧಿನಿಯಮವು ಪಕ್ಷಪಾತವಿಲ್ಲದೇ ಅನುಷ್ಠಾನಗೊಳ್ಳುವಂತೆ ಅವರು ನೋಡಿಕೊಳ್ಳಬೇಕು ಮತ್ತು ಯಾವುದೇ ರೀತಿಯ ಈ ಒತ್ತಡಗಳಿಗೆ ಅವರು ಮಣಿಯುವಂತಿರಬಾರದು. (ಸುತ್ತೋಲೆ ನಂ. ಗ್ರಾಅಪ. 13. ಆರ್‌ಬಿಎಲ್ 2003 ದಿನಾಂಕ 29-04-2004).

1.6 ಜೀತದಾಳು ಮತ್ತು ಬಾಲ ಕಾರ್ಮಿಕ ಸಮಸ್ಯೆಗಳಿಗೆ ಸಂಬಂಧ ಪಟ್ಟಂತೆ ಸಾಂಸ್ಥಿಕ ನೆನಪನ್ನು ಉಳಿಸಿಕೊಳ್ಳಲು ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ತಮ್ಮ ವರ್ಗಾವಣೆ ಸಮಯದಲ್ಲಿ ಪದಮುಕ್ತ ಅಧಿಕಾರಿಯು ಪದಗ್ರಾಹಿ ಅಧಿಕಾರಿಗೆ ಪ್ರಭಾರ ವರ್ಗಾವಣೆ ಪ್ರಪತ್ರದಲ್ಲಿ ಆ ವಿಷಯಗಳಿಗೆ ಸಂಬಂಧಪಟ್ಟಂತೆ ಜಿಲ್ಲೆಯಲ್ಲಿ ಕೈಗೊಂಡ ಹಾಗೂ ಕೈಗೊಳ್ಳಲಿರುವ ಕೆಲಸಕಾರ್ಯಗಳ ಬಗ್ಗೆ ವಿವರವಾದ ಟಿಪ್ಪಣಿಯನ್ನು ಕೊಡಬೇಕು.

1.7 ಜೀತದಾಳುಗಳನ್ನು ಗುರುತಿಸುವ ಕೆಲಸವು ಸರಿಯಾಗಿ ನಡೆಯಬೇಕಾದರೆ ಕಂದಾಯ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಎಲ್ಲಾ ಅಧಿಕಾರಿಗಳು, ಜೀತದಾಳುಗಳನ್ನು ಗುರುತಿಸುವ ಮತ್ತು ಪುನರ್ವಸತಿಗೊಳಿಸುವ ಕೆಲಸಕ್ಕೆ ಸಂಬಂಧಪಟ್ಟ ಇನ್ನಿತರ ಇಲಾಖೆಯ ಅಧಿಕಾರಿಗಳು, ಪಂಚಾಯತಿಗಳ ಚುನಾಯಿತ ಸದಸ್ಯರು, ನ್ಯಾಯಾಲಯದ ಅಧಿಕಾರಿಗಳು ಮತ್ತು ಆರಕ್ಷಕರು/ಪೊಲೀಸರುಗಳಿಗೆ ಜೀತಕ್ಕೆ ಸಂಬಂಧಪಟ್ಟ ವಿಷಯಗಳ ಬಗ್ಗೆ ಸಂವೇದನಾ ತರಬೇತಿಗಳನ್ನು ನಡೆಸಬೇಕು. ಜೀತಕ್ಕೆ ಸಂಬಂಧಪಟ್ಟ ವಿಷಯಗಳೆಂದರೆ ಜೀತದ ಬಗ್ಗೆ ಸಂವಿಧಾನದಲ್ಲಿರುವ ಅಂಶಗಳು, ಜೀತಪದ್ಧತಿ ರದ್ದತಿ ಕಾನೂನಿನಲ್ಲಿರುವ ಅಂಶಗಳು, ಅವುಗಳಲ್ಲಿ ಮುಖ್ಯವಾಗಿ ಜೀತದ ವ್ಯಾಖ್ಯಾನ ಮತ್ತು ಅದನ್ನು ಅರ್ಥೈಸುವುದು ಹಾಗೂ ಜೀತದಾಳುಗಳನ್ನು ಸರಿಯಾಗಿ ಗುರುತಿಸುವ ವಿಧಾನ. ಜೀತದಾಳುಗಳನ್ನು ಪುನರ್ವಸತಿಗೊಳಿಸುವ ಕೆಲಸದಲ್ಲಿ ಜೊತೆಗೂಡುವ ಹಣಕಾಸು ಸಂಸ್ಥೆಗಳ ಅಧಿಕಾರಿಗಳಿಗೂ ಸಂವೇದನಾ ತರಬೇತಿಗಳನ್ನು ನಡೆಸಬೇಕು.

1.8 ಜೀತದಾಳುಗಳನ್ನು ಗುರುತಿಸುವ ಮುಂಚೆ ಜೀತದಾಳುಗಳಲ್ಲಿ ಧೈರ್ಯ ತುಂಬಲು ಅವರಿಗೆ ಸಂವೇದನಾ ತರಬೇತಿಗಳನ್ನು ನಡೆಸಬೇಕು. ಬಿಡುಗಡೆಗೊಳಿಸಿದ ಜೀತದಾಳುಗಳಿಗೂ ಸಂವೇದನಾ ತರಬೇತಿಗಳನ್ನು ನಡೆಸಬೇಕು. ಗುರುತಿಸಿದ ಮತ್ತು ಬಿಡುಗಡೆಗೊಳಿಸಿದ ಜೀತದಾಳು ಮತ್ತು ಬಾಲಕಾರ್ಮಿಕರಿರುವ ಕುಟುಂಬಗಳಿಗೆ ಕಾನೂನಿನಲ್ಲಿರುವ ಸೌಲಭ್ಯಗಳು ಹಾಗೂ ಕರ್ತವ್ಯಗಳು ಮತ್ತು ತಮ್ಮ ಪುನರ್ವಸತಿ ಕಾರ್ಯಕ್ರಮಗಳನ್ನು ಸಂಘಟಿತರಾಗಿ, ಸ್ವಾವಲಂಬಿಯಾಗಿ, ಗುಂಪು ಆಧಾರದ ಮೇಲೆ ಮತ್ತು ಸಹಕಾರಿ ತತ್ವಗಳ ಮೇಲೆ ನಡೆಸಲು ಬೇಕಾದ ಕೌಶಲ್ಯಗಳ ಬಗ್ಗೆ ಸಂವೇದನಾ ತರಬೇತಿಗಳನ್ನು

ಜೀತಪದ್ಧತಿ ಮತ್ತು ಜೀತದಾಳುಗಳನ್ನು ಗುರುತಿಸುವ ತರಬೇತಿ ಕೈಪಿಡಿ

ಪೂರಕ ಓದುವಿಕೆ - XII B

ಜೀತದಾಳುಗಳ ಗುರುತಿಸುವಿಕೆ ಮತ್ತು ಬಿಡುಗಡೆ

ಕರ್ನಾಟಕ ಸರ್ಕಾರದ ಕ್ರಿಯಾ ಯೋಜನೆ

ಪುನರ್ವಸತಿ ಕಾರ್ಯಕ್ರಮಗಳನ್ನು ಕೈಗೊಳ್ಳುವ ಮುಂಚೆ ಮತ್ತು ಅವನ್ನು ಅನುಷ್ಠಾನಗೊಳಿಸುವಾಗ ನಡೆಸಿಕೊಂಡು ಹೋಗಬೇಕು.

1.9 ಅಧಿಕಾರಿಗಳು ಮತ್ತು ಜೀತದಾಳುಗಳಿಗೆ ಸಂವೇದನಾ ತರಬೇತಿಗಳನ್ನು ನಡೆಸುವುದು ಅತ್ಯವಶ್ಯಕ. ಏಕೆಂದರೆ ಇಷ್ಟರವರೆಗೆ ಜೀತದಾಳುಗಳನ್ನು ಗುರುತಿಸುವಲ್ಲಿ ಎದುರುಗೊಳ್ಳುವ ಸಮಸ್ಯೆಗಳಿಗೆ ಕಾರಣ ಇಂತಿರುವುವು: 1) ಜೀತದಾಳುಗಳಲ್ಲಿ ಹೆಚ್ಚಿನವರು ಅನುಸೂಚಿತ ಜಾತಿ ಮತ್ತು ಜನಾಂಗಕ್ಕೆ ಸೇರಿದವರಾಗಿದ್ದು ತಮ್ಮ ಮೇಲೆ ದೌರ್ಜನ್ಯವೆಸಗುವ ಮತ್ತು ತಮ್ಮ ಕೆಲಸಕ್ಕೆ ಚ್ಯುತಿ ಬರುವ ಭಯದಿಂದ ತಾವು ಜೀತದಾಳುಗಳೆಂದು ಒಪ್ಪಿಕೊಳ್ಳಲು ಅವರು ಮುಂದೆ ಬರುವುದಿಲ್ಲ. 2) ಯಥಾಸ್ಥಿತಿಯನ್ನು ಕಾಪಾಡಲು ಮಾಲಿಕರು ದೌರ್ಜನ್ಯದ ವಾತಾವರಣವನ್ನು ನಿರ್ಮಿಸುತ್ತಾರೆ. 3) ಪರ್ಯಾಯ ಉದ್ಯೋಗದ ಅವಕಾಶಗಳು ಇಲ್ಲದೇ ಇರುವುದು. 4) ಜಾಗೃತಿ ಸಮಿತಿಗಳು ಕ್ರಿಯಾಶೀಲವಾಗಿಲ್ಲದಿರುವುದು; ಸ್ಥಳೀಯ ಅಧಿಕಾರಿಗಳು ಸಂವೇದನಾರಹಿತರಾಗಿರುವುದು ಮತ್ತು ಜೀತ ಕುರಿತು ವಿಚಾರ ಹಾಗೂ ಸಮಸ್ಯೆಗಳ ಬಗ್ಗೆ ಅರಿವು ಇಲ್ಲದೇ ಇರುವುದು; ಮತ್ತು ಯಾವುದೇ ಸ್ವಯಂ ಸೇವಾ ಸಂಸ್ಥೆಯು ತಾವಾಗಿ ಜೀತದಾಳುಗಳನ್ನು ಗುರುತಿಸಲು ಮುಂದೆ ಬರದೇ ಇರುವುದು ಮತ್ತು ತಪ್ಪಾಗಿ ಜೀತದಾಳುಗಳನ್ನು ಗುರುತಿಸಿದಾಗ ಅದನ್ನು ನಿಲ್ಲಿಸದೇ ಇರುವುದು. (ಜೀತ ಪದ್ಧತಿ ನಿರ್ಮೂಲನೆ, ಜೀತ ಗುರುತಿಸುವಿಕೆ, ಬಿಡುಗೊಡೆಗೊಳಿಸುವುದು ಮತ್ತು ಪುನರ್ವಸತಿಗೊಳಿಸುವ ಬಗ್ಗೆ ಒಂದು ಕೈಪಿಡಿ, ಕಾರ್ಮಿಕ ಇಲಾಖೆ, ಭಾರತ ಸರ್ಕಾರ, ಫೆಬ್ರುವರಿ 2004, ನಂ. 2. 5, ಪುಟ 5).

1.10 ಮೇಲೆ ವಿವರಿಸಿದ ಎಲ್ಲಾ ಸಂವೇದನಾ ತರಬೇತಿಗಳನ್ನು ವಿಶ್ವಾಸಾರ್ಹ ಸರ್ಕಾರೇತರ ಸಂಸ್ಥೆಗಳಿಗೂ ಕಾನೂನು ನೆರವು ಸಮಿತಿಗಳಿಗೂ ವಹಿಸಿ ಕೊಡಬಹುದು.

1.11 ಜೀತದಾಳುಗಳನ್ನು ಗುರುತಿಸುವ ಕಾರ್ಯವು ಕಾನೂನಿನಲ್ಲಿ ನಮೂದಿಸಿದ ಪ್ರಕಾರ ನಡೆಯಬೇಕು ಮತ್ತು ಎಸ್. ಆರ್. ಶಂಕರನ್‌ರವರು ಹಾಕಿಕೊಟ್ಟ ಮಾರ್ಗದರ್ಶಿಗಳನ್ನು ಅನುಸರಿಸಬೇಕು. ಆ ಮಾರ್ಗದರ್ಶಿಗಳನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕಾರ್ಯದರ್ಶಿಗಳು 1999ರಲ್ಲಿ ಕನ್ನಡ ಭಾಷಾಂತರದೊಂದಿಗೆ ಎಲ್ಲಾ ಜಿಲ್ಲಾಧಿಕಾರಿಗಳಿಗೆ ರವಾನಿಸಿದ್ದಾರೆ. ಕಾನೂನಿನ ಪ್ರಕಾರ ಕ್ರಮಕೈಗೊಳ್ಳುವ ಅಧಿಕಾರಿಗಳು ಆ ಮಾರ್ಗದರ್ಶಿಗಳನ್ನು ಅನುಸರಿಸಲೇಬೇಕು.

ಆ ಮಾರ್ಗದರ್ಶಿಯಲ್ಲಿರುವ ಮುಖ್ಯಾಂಶಗಳನ್ನು ಹೀಗಿವೆ:

1) ಜೀತದಾಳುಗಳ ತನಿಖೆಯನ್ನು ದಲಿತ ಅಥವಾ ಆದಿವಾಸಿ ಜನರ ಕೇರಿಯಲ್ಲಿಯೇ ನಡೆಸಬೇಕು; ಸವರ್ಣೀಯ ಕೇರಿಗಳಲ್ಲಲ್ಲ.

2) ಜೀತದಾಳುಗಳ ತನಿಖೆಯನ್ನು ಯಾವುದೇ ಕಾರಣಕ್ಕೂ ಅವರ ಮಾಲೀಕರ ಎದುರುಗಡೆ ನಡೆಸಲೇಬಾರದು.

3) ತನಿಖಾ ಅಧಿಕಾರಿಗಳು ಕೆಲಸದ ಪರಿಸ್ಥಿತಿಗಳ ಬಗ್ಗೆ ಮಾಹಿತಿ ಪಡೆಯಬೇಕು. ಹಲಕೆಲವು ಸೂಕ್ತ ಪ್ರಶ್ನೆಗಳ ಮೂಲಕ ಆ ಕೆಲಸದ ಪರಿಸ್ಥಿತಿಗಳಲ್ಲಿ ಬಲಾತ್ಕಾರದ ಅಂಶಗಳಿವೆಯೇ ಎಂಬ ತೀರ್ಮಾನಕ್ಕೆ ಬರಬೇಕು. ನೇರವಾಗಿ ನೀವು ಜೀತದಾಳುಗಳೋ ಎಂದು ಕೇಳುವುದು ಫಲಕಾರಿಯಾಗ ಲಾರದು. ತನಿಖೆಯಿಂದ ಸರಿಯಾದ ಮಾಹಿತಿ ಸಿಗಬೇಕಾದರೆ ಜೀತದಾಳು ಅಥವಾ ಮಾಲಿಕರ ಹೇಳಿಕೆಗಳನ್ನೇ ಒಪ್ಪಿಕೊಳ್ಳುವುದು ಎಂದಲ್ಲ ಅಥವಾ ಅವರು ಕೆಲವೊಂದು ಪರಿಭಾಷೆಗಳನ್ನು ಬಳಸುತ್ತಾರೋ ಅಥವಾ ಇಲ್ಲವೋ ಎಂತಲ್ಲ, ಬದಲು ವಾಸ್ತವವಾಗಿ

ಜೀತಪದ್ಧತಿ ಮತ್ತು ಜೀತದಾಳುಗಳನ್ನು ಗುರುತಿಸುವ ತರಬೇತಿ ಕೈಪಿಡಿ

ಪೂರಕ ಓದುವಿಕೆ - XII B

ಜೀತದಾಳುಗಳ ಗುರುತಿಸುವಿಕೆ ಮತ್ತು ಬಿಡುಗಡೆ

ಕರ್ನಾಟಕ ಸರ್ಕಾರದ ಕ್ರಿಯಾ ಯೋಜನೆ

ಕೆಲಸ ಮಾಡುವ ಸಂದರ್ಭಗಳು ಕಾನೂನಿನಲ್ಲಿ ನಮೂದಿಸಿದ ಪ್ರಕಾರ ಬಲಾತ್ಕಾರದ ದುಡಿಮೆಯನ್ನು ಸ್ಪಷ್ಟಪಡಿಸುತ್ತವೆಯೋ ಇಲ್ಲವೋ ಎಂದು ವೈಯಕ್ತಿಕ ತೀರ್ಮಾನಕ್ಕೆ ಬರುವುದು.

1.12 ಮೇಲ್ಕಾಣಿಸಿದ ಮಾರ್ಗದರ್ಶನಗಳಿಗೆ ಇನ್ನೊಂದು ಅಂಶವನ್ನು ಸೇರಿಸಬಹುದು. ತನಿಖೆಯನ್ನು ಏಕಾಂತದಲ್ಲಿ, ಒಬ್ಬೊಬ್ಬರಾಗಿ ಮತ್ತು ಗೌಪ್ಯದಲ್ಲಿ ನಡೆಸುವ ಬದಲು ಬಹಿರಂಗ ಪ್ರದೇಶದಲ್ಲಿ ಸಾಮೂಹಿಕವಾಗಿ ಮತ್ತು ದಲಿತರು ಅಥವಾ ಆದಿವಾಸಿ ಜನರು ಅಥವಾ ಅವರ ಮುಖಂಡರ ಸಮಕ್ಷಮದಲ್ಲಿ ನಡೆಸುವುದು ಒಳಿತು. ಇದರಿಂದ ಮಾಹಿತಿ ಒಟ್ಟು ಮಾಡುವಾಗಲೇ ಅವುಗಳ ಸತ್ಯಾಸತ್ಯತೆಗಳ ಬಗ್ಗೆ ಮರುಪರಿಶೀಲನೆ ಮಾಡುವ ಅವಕಾಶ ಸಿಗುವುದು ಮತ್ತು ಸುಳ್ಳು ಮಾಹಿತಿಗಳನ್ನು ತಳ್ಳಿಹಾಕಲು ಸಾಧ್ಯವಾಗುವುದು.

1.13 ಅಂತಿಮವಾಗಿ ಜೀತದಾಳುಗಳನ್ನು ಸರಿಯಾಗಿ ಅಂದರೆ ಕಾನೂನು ಅಪೇಕ್ಷಿತ ರೀತಿಯಲ್ಲಿ ಗುರುತಿಸ ಬೇಕಾದರೆ ಜೀತ ಮತ್ತು ಅದಕ್ಕೆ ಸಂಬಂಧ ಪಟ್ಟಂತೆ ಈ ಕೆಳಗಿನ ಸ್ಪಷ್ಟ ವಿಚಾರಗಳನ್ನು ತನಿಖೆ ಸಮಯದಲ್ಲಿ ನೆನಪಿನಲ್ಲಿಡಬೇಕು:

1) ಬಲಾತ್ಕಾರದ ದುಡಿಮೆ ಎಂದರೆ ದೈಹಿಕ ಬಲಾತ್ಕಾರ ಅಥವಾ ಹಿಂಸೆ ಕಡ್ಡಾಯವಾಗಿ ಇರಬೇಕೆಂದಿಲ್ಲ. ಜೀತದಲ್ಲಿ ದೈಹಿಕ ಬಲಾತ್ಕಾರದ ಒಂದಿಷ್ಟು ಅಂಶ ಇದ್ದೇ ಇರುವುದಾದರೂ ನೇರ ದೈಹಿಕ ಬಲ ಪ್ರಯೋಗ ಎಲ್ಲಾ ಜೀತದ ಪ್ರಕರಣಗಳಲ್ಲಿ ಇರಬೇಕೆಂದಿಲ್ಲ. ಕಾನೂನಿನ ಪ್ರಕಾರ ಸಾಮಾಜಿಕ ಮತ್ತು ಆರ್ಥಿಕ ಕಾರಣಗಳಿಂದಾಗಿ ನಾಮಮಾತ್ರ ಮಜೂರಿಗೆ ಕೆಲಸ ಮಾಡಲು ಒಬ್ಬ ವ್ಯಕ್ತಿಯು ಒಪ್ಪಿಕೊಳ್ಳುವಂತೆ ಮಾಡುವುದೇ ಬಲಾತ್ಕಾರದ ದುಡಿಮೆ. (ಪೀಪಲ್ಸ್ ಯೂನಿಯನ್ ಫಾರ್ ಡೆಮೊಕ್ರಾಟಿಕ್ ರೈಟ್ಸ್ ಮತ್ತಿತರರು ವಿರುದ್ಧ ಯೂನಿಯನ್ ಆಫ್ ಇಂಡಿಯಾ ಮತ್ತಿತರರು, ಪ್ಯಾರಾ ಸಂಖ್ಯೆ 14-15, AIR 1982 SC 1473)

2) ಕಾನೂನಿನಲ್ಲಿ ಜೀತದಾಳುವಿನ ವಯೋಮಿತಿಯನ್ನು ನಿರ್ಧರಿಸಿಲ್ಲ (ಪರಿಚ್ಛೇದ 2g). ಜೀತದಾಳುಗಳು ಯಾವ ವಯಸ್ಸಿನವರೂ ಆಗಿರಬಹುದು. ಬಾಲ ಜೀತದಾಳುಗಳನ್ನು ಜೀತದಾಳುಗಳೆಂದೇ ಗುರುತಿಸಬೇಕು ಮತ್ತು ಅವರ ಪ್ರಯುಕ್ತ ಬಾಲ ಕಾರ್ಮಿಕ ನಿಷೇಧ ಕಾನೂನಿನಡಿಯೂ ಕ್ರಮ ಕೈಗೊಳ್ಳಬೇಕು.

3) ಜೀತ ಅವಧಿಗೆ ಕಾಲಮಿತಿಯನ್ನೂ ಕಾನೂನು ಹಾಕಿಲ್ಲ (ಪರಿಚ್ಛೇದ 2g). ಜೀತವು ಎಷ್ಟು ಕಾಲಕ್ಕೂ ಇರಬಹುದು. ಒಂದು ವರ್ಷ ತನಕವೂ ಅದು ವಿಸ್ತರಿಸಬೇಕೆಂದಿಲ್ಲ. ಆದ್ದರಿಂದ ಜೀತವು ಜೀವನ ಪರ್ಯಂತವಿರಬಹುದು; ಹಲವು ವರ್ಷ ತನಕ ಅದು ಹರಡ ಬಹುದು ಅಥವಾ ಕೆಲವೇ ಕೆಲವು ವರ್ಷಗಳ ವ್ಯಾಪ್ತಿ ಅದಕ್ಕಿರಬಹುದು; ಕೇವಲ ಒಂದೇ ಒಂದು ವರ್ಷಕ್ಕೆ ಅದು ಸೀಮಿತಗೊಳ್ಳಬಹುದು ಅಥವಾ ಒಂದೇ ಒಂದು ಋತುವಿಗೆ (ಉದಾ: ನಾಟಿಕಾಲ, ಸುಗ್ಗಿಕಾಲಕ್ಕೆ) ಅದು ಅನ್ವಯಿಸಬಹುದು. ಜೀತದ ತೀರ್ಮಾನಕ್ಕೆ ಬರಬೇಕಾದರೆ ಕೆಲಸದ ಸಂದರ್ಭದಲ್ಲಿ ಬಲಾತ್ಕಾರವಿದೆಯೇ ಎಂದು ಕಂಡು ಹಿಡಿಯಬೇಕು. ಕಾನೂನಿನ ಪ್ರಕಾರ ಕಾಲಾವಧಿ ಜೀತದ ತೀರ್ಮಾನಕ್ಕೆ ಬರಲು ನಿರ್ಣಾಯಕವಲ್ಲ. (ಎ.ಕೆ. ಚಕ್ರವರ್ತಿ ವರದಿ: 2. 23 iii- ಸಾರಾಂಶ3.4).

4) ಕಾನೂನಿನ ಪ್ರಕಾರ ಜೀತವಿರಲು ಲಿಖಿತ ದಾಖಲೆಯ ಅವಶ್ಯಕತೆಯಿಲ್ಲ (ಅನುಚ್ಛೇದ 2g). ಪರಿಚ್ಛೇದ 15ರ ಪ್ರಕಾರ ಜೀತಸಾಲದ ಬಗೆಗಿನ ಯಾವುದೇ ಪ್ರತಿಪಾದನೆಯನ್ನು ಸುಳ್ಳು ಎಂದು ತೋರಿಸುವ ಜವಾಬ್ದಾರಿ ಮಾಲಿಕರದ್ದು. ಜೀತದಾಳು ತನ್ನ ಪ್ರತಿಪಾದನೆಗೆ

ಜೀತಪದ್ಧತಿ ಮತ್ತು ಜೀತದಾಳುಗಳನ್ನು ಗುರುತಿಸುವ ತರಬೇತಿ ಕೈಪಿಡಿ

ಪ್ರಕರಣ - XIII B
ಜೀತದಾಳುಗಳ ಗುರುತಿಸುವಿಕೆ ಮತ್ತು ಬಿಡುಗಡೆ
ಕರ್ನಾಟಕ ಸರ್ಕಾರದ ಕ್ರಿಯಾ ಯೋಜನೆ

ಯಾವುದೇ ಆಧಾರ ತೋರಿಸಬೇಕೆಂದಿಲ್ಲ.

5) ಜೀತದಾಳುಗಳನ್ನು ಗುರುತಿಸುವ ಕಾರ್ಯ ಒಂದು ಸಾರಿ ನಡೆದು ಹೋಗಬೇಕಾಗಿರುವ ಪ್ರಕ್ರಿಯೆಯಲ್ಲ. ಬದಲಿಗೆ ಅದು ನಿರಂತರವಾಗಿ ನಡೆಯುತ್ತಾ ಇರಬೇಕು. ಜೀತ ಇರುವಿಕೆಯ ಬಗ್ಗೆ ಅಧಿಕಾರಿಗಳ ಗಮನ ಸೆಳೆದ ಪ್ರತಿ ಸಂದರ್ಭದಲ್ಲೂ ಜೀತದ ತನಿಖೆಯಾಗಬೇಕು. ನಿಯತಕಾಲಿಕವಾಗಿ, ಅಂದರೆ ಮೂರು ವರ್ಷಕ್ಕೊಮ್ಮೆ ಜೀತ ಸಮೀಕ್ಷೆಯನ್ನು ಜಿಲ್ಲಾಧಿಕಾರಿಗಳು, ಉಪ ವಿಭಾಗಾಧಿಕಾರಿಗಳು ಮತ್ತು ಗ್ರಾಮ ಪಂಚಾಯತಿಗಳು ನಡೆಸುವುದು ಉಚಿತ.

6) ಜೀತದಾಳುಗಳನ್ನು ಗುರುತಿಸುವ ಅಧಿಕಾರಿಗಳು ವಾರ್ತಾಪತ್ರಿಕೆಗಳಲ್ಲಿಯ ವರದಿಗಳು ಮತ್ತು ಸ್ವಯಂ ಸೇವಾ ಸಂಸ್ಥೆಗಳು ನೀಡುವ ದೂರುಗಳನ್ನು ಸೂಕ್ತವಾಗಿ ಪರಿಗಣಿಸಬೇಕು. ಅನುಸೂಚಿತ ಜಾತಿ ಮತ್ತು ಜನಾಂಗಗಳು, ಕೃಷಿಕಾರ್ಮಿಕರು ಮತ್ತಿತರ ಅಸಂಘಟಿತ ಕಾರ್ಮಿಕರಿಗೆ ಪ್ರಾಮಾಣಿಕ ಹಾಗೂ ಸಮರ್ಥ ಸೇವೆ ಸಲ್ಲಿಸುವ ಸರ್ಕಾರೇತರ ಸಂಸ್ಥೆಗಳ ಸಹಾಯವನ್ನು ಜೀತದಾಳುಗಳನ್ನು ಗುರುತಿಸುವಲ್ಲಿ ಪಡೆಯಬೇಕು. ಅದೇ ರೀತಿ, ಜೀತ ಮುಕ್ತರ ಯಾವುದೇ ಸಂಘಟನೆಗಳು, ವಿದ್ಯಾರ್ಥಿ ಸ್ವಯಂಸೇವಕರು, ಪ್ರತ್ಯೇಕವಾಗಿ ಅನುಸೂಚಿತ ಜಾತಿ ಮತ್ತು ಜನಾಂಗಗಳು, ಕೃಷಿಕಾರ್ಮಿಕರು ಮತ್ತಿತರ ಅಸಂಘಟಿತ ಕಾರ್ಮಿಕರ ಸಮುದಾಯಗಳಿಂದ ಬಂದ ವಿದ್ಯಾರ್ಥಿ ಸ್ವಯಂಸೇವಕರನ್ನೂ ಜೀತದಾಳುಗಳನ್ನು ಗುರುತಿಸುವಲ್ಲಿ ತೊಡಗಿಸಿಕೊಳ್ಳಬೇಕು.

7) ಕಂದಾಯ ಇಲಾಖೆ, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಆದಿವಾಸಿ ಜನರ ಸಂಶೋಧನಾ ಕೇಂದ್ರ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗಳು ಮನೆ ನಿವೇಶನ ಹಂಚಿಕೆ, ಮನೆ ಹಂಚಿಕೆ ಮುಂತಾದ ವಿಷಯಗಳಿಗೆ ನಡೆಸುವ ಕೌಟುಂಬಿಕ ಸಮೀಕ್ಷೆಗಳಲ್ಲಿ ಜೀತದಾಳುಗಳನ್ನು ಗುರುತಿಸುವ ಕೆಲಸವೂ ರಾಷ್ಟ್ರೀಯ ಸ್ಯಾಂಪಲ್ ಸರ್ವೆ ಸಂಘಟನೆ ನಡೆಸುವ ಸಮೀಕ್ಷೆಗಳ ಮಾದರಿಯಲ್ಲಿ ಕಡ್ಡಾಯವಾಗಿ ನಡೆಯಬೇಕು.

1. 14 ಜೀತದಾಳುಗಳನ್ನು ಗುರುತಿಸಲು ಕಾಲಮಿತಿ:

ಕರ್ನಾಟಕದಲ್ಲಿ ಸಾಮಾನ್ಯವಾಗಿ ಉಗಾದಿಯ ಸ್ವಲ್ಪ ಸಮಯದ ನಂತರ ಜೀತ ಸಂಬಂಧಗಳ ಬಗ್ಗೆ ಒಪ್ಪಂದಗಳಾಗುತ್ತವೆ. ಆದ್ದರಿಂದ ನಿಯತಕಾಲಿಕವಾಗಿ ಮೂರು ವರ್ಷಗಳಿಗೊಮ್ಮೆ ನಡೆಸುವ ಸಮೀಕ್ಷೆಗಳನ್ನು ಎಪ್ರಿಲ್ ತಿಂಗಳಿಂದ ನಡೆಸುವುದು ಸೂಕ್ತ. ಮೊದಲು ಗ್ರಾಮ ಪಂಚಾಯತಿ ಕಾರ್ಯದರ್ಶಿಗಳು ಎಪ್ರಿಲ್‌ನಿಂದ ಒಂದು ತಿಂಗಳೊಳಗಾಗಿ ಜಿಲ್ಲಾಧಿಕಾರಿಗಳು ಮತ್ತು ಉಪ ಜಿಲ್ಲಾಧಿಕಾರಿಗಳಿಗೆ ಜೀತದಾಳುಗಳ ಬಗ್ಗೆ ವರದಿ ಸಲ್ಲಿಸಬೇಕು. ಜಿಲ್ಲಾಧಿಕಾರಿಗಳು ಮತ್ತು ಉಪ ಜಿಲ್ಲಾಧಿಕಾರಿಗಳು ಮುಂದಿನ ಒಂದು ತಿಂಗಳೊಳಗಾಗಿ ಜಾಗೃತಿ ಸಮಿತಿಯ ನೆರವಿನಿಂದ ಆ ವರದಿಗಳ ಆಧಾರದ ಮೇಲೆ ಮತ್ತು ಸ್ವತಂತ್ರವಾಗಿ ಸಮೀಕ್ಷೆ ನಡೆಸಬೇಕು. ಸಮರ್ಥ ಮತ್ತು ಪ್ರಾಮಾಣಿಕ ಸರ್ಕಾರೇತರ ಸಂಸ್ಥೆಗಳ ಜೊತೆಗೂಡಿ ಸಮೀಕ್ಷೆ ಮಾಡುವುದು ಅಥವಾ ಅವರಿಂದಲೇ ಸಮೀಕ್ಷೆ ನಡೆಸುವುದು ಒಳ್ಳೆಯದು.

ಜೀತಪದ್ಧತಿ ಮತ್ತು ಜೀತದಾಳುಗಳನ್ನು ಗುರುತಿಸುವ ತರಬೇತಿ ಕೈಪಿಡಿ

ಪೂರಕ ಓದುವಿಕೆ - XII B

ಜೀತದಾಳುಗಳ ಗುರುತಿಸುವಿಕೆ ಮತ್ತು ಬಿಡುಗಡೆ

ಕರ್ನಾಟಕ ಸರ್ಕಾರದ ಕ್ರಿಯಾ ಯೋಜನೆ

2. ಜೀತದಾಳುಗಳ ಬಿಡುಗಡೆ

2.1 ಜೀತ ಗುರುತಿಸುವ ಪ್ರಕ್ರಿಯೆ ಮೂಲಕ ಒಬ್ಬ ವ್ಯಕ್ತಿಯು ಜೀತದಾಳು ಎಂದು ಖಾತ್ರಿ ಆದ ಮೇಲೆ ಜಿಲ್ಲಾ ದಂಡಾಧಿಕಾರಿ ಅಥವಾ ಉಪವಿಭಾಗೀಯ ದಂಡಾಧಿಕಾರಿಯು ಅವನ್ನು ಬಿಡುಗಡೆ ಮಾಡಲು ಆದೇಶ ಕಳುಹಿಸಿ ಜೀತದಾಳುವಿಗೆ ಬಿಡುಗಡೆ ಪತ್ರವೊಂದನ್ನು ನೀಡಬೇಕು. ಬಿಡುಗಡೆ ಪತ್ರಗಳ ನಕಲನ್ನು ಆಯಾ ಗ್ರಾಮ ಪಂಚಾಯತಿಯ ಕಾರ್ಯದರ್ಶಿಯವರಿಗೆ ಕಳುಹಿಸಬೇಕು.

2.2 ಜೀತದಾಳುಗಳ ಗುರುತಿಸುವಿಕೆ ಮತ್ತು ಬಿಡುಗಡೆ ಏಕಕಾಲಕ್ಕೆ ನಡೆಯಬೇಕು. ಅದರಿಂದ ಜೀತದಾಳುಗಳ ಪುನರ್ವಸತಿಯಲ್ಲಿ ವಿಳಂಬವನ್ನು ನಿಲ್ಲಿಸಿ ಅವರು ಜೀತಕ್ಕೆ ಮರಳಿ ಹೋಗುವುದನ್ನು ತಡೆಗಟ್ಟಬಹುದು.

ಜೀತದಾಳುವನ್ನು ಗುರುತಿಸಿದ ಎರಡು ವಾರಗಳಲ್ಲಿ ಅವರ ಬಿಡುಗಡೆಯೂ ಆಗಬೇಕು ಮತ್ತು ಅವರ ಪುನರ್ವಸತಿಯನ್ನು ಆ ಕೂಡಲೇ ಕೈಗೊಳ್ಳಬೇಕು. ಬಿಡುಗಡೆ ಪತ್ರವು ಮುಕ್ತ ಜೀತದಾಳುವಿಗೆ ಕೇಂದ್ರ ಪುರಸ್ಕೃತ ಯೋಜನೆ (ಕೇಪುಯೋ)ಯಡಿ ಪುನರ್ವಸತಿ ಸೌಲಭ್ಯ ಹಾಗೂ ಎಲ್ಲಾ ಬಡತನ ನಿರ್ಮೂಲನೆಯ ಯೋಜನೆಗಳು, ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಮುಂದುವರಿಕೆಯ ಯೋಜನೆಗಳ ಸೌಲಭ್ಯ ಪಡೆಯುವ ಅರ್ಹತೆ ನೀಡುತ್ತದೆ.

2.3 ಕೇಪುಯೋಯಡಿ ಪುನರ್ವಸತಿ ಸೌಲಭ್ಯಕ್ಕೆ ನಿರ್ಧರಿಸಲಾಗಿದ್ದ 20000 ರೂಪಾಯಿಗಳಿಂದ 1000 ರೂಪಾಯಿಗಳನ್ನು ಬಿಡುಗಡೆ ಮಾಡಿದಾಗಲೇ ಪ್ರತಿ ಮುಕ್ತ ಜೀತದಾಳುವಿಗೆ ಅವರ ದಿನನಿತ್ಯದ ಖರ್ಚಿಗೆಂದು ನೀಡಬೇಕು.

2.4 ಕರ್ನಾಟಕ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಆಯೋಜಿಸಿದ "ಜೀತದಾಳುಗಳ ಪುನರ್ವಸತಿ ಸಹಾಯ ಧನ" ಯೋಜನೆಯಡಿಯಲ್ಲಿ ಪ್ರತಿ ಮುಕ್ತ ಜೀತದಾಳುವಿಗೆ ಅವರು ಬಿಡುಗಡೆ ಹೊಂದಿದ ತಿಂಗಳಿನಿಂದ ಮುಂದಿನ ಎರಡು ವರ್ಷಗಳ ತನಕ ಪ್ರತಿ ತಿಂಗಳಿಗೆ 300 ರೂಪಾಯಿಗಳ ಸಹಾಯಧನವನ್ನು ನೀಡಬೇಕು (ಸರ್ಕಾರ ಆದೇಶ ಗ್ರಾಅಪ 15 ಆರ್‌ಬಿಎಲ್. 2004 ಬೆಂಗಳೂರು, ದಿನಾಂಕ 21-01-2006).

4.2.5. ಬಿಡುಗಡೆ ಆದ ತಕ್ಷಣ ಅಥವಾ ಬಹು ಬೇಗನೆ ಕಾನೂನಿನ ಪ್ರಕಾರ ಜೀತದಾಳುವಿಗೆ ಒದಗುವ ಪರಿಣಾಮಗಳು

1) ಜೀತದ ಯಾವುದೇ ಒಪ್ಪಂದವು ಅನೂರ್ಜಿತವಾಗುತ್ತದೆ (ಪರಿಚ್ಛೇದಗಳು 4-5).

2) ಜೀತಸಾಲವನ್ನು ತೆರುವ ಹೊಣೆಯು ಇಲ್ಲವಾಗುತ್ತದೆ (ಪರಿಚ್ಛೇದ 6).

3) ತೊಡೆದು ಹಾಕಿದ ಜೀತಸಾಲದ ಬಗ್ಗೆ ಯಾವುದೇ ಪಾವತಿಯನ್ನು ಸಾಲಗಾರನು ಪಡೆಯಲಾಗದು (ಪರಿಚ್ಛೇದ9).

4) ಜೀತದಾಳುವಿನ ಯಾವುದೇ ಆಸ್ತಿಯು ಅಡಮಾನದಿಂದ ಮುಕ್ತವಾಗುತ್ತದೆ (ಪರಿಚ್ಛೇದ 7).

5) ಜೀತಸಮಯದಲ್ಲಿ ಜೀತದಾಳುವಿಗೆ ವಾಸವಾಗಿರಲು ನೀಡಲಾಗಿದ್ದ ಹೊಲ-ಮನೆಯಿಂದ ಮುಕ್ತ ಜೀತದಾಳುವನ್ನು ಹೊರದೂಡುವಂತಿಲ್ಲ (ಪರಿಚ್ಛೇದ 8).

ಜೀತಪದ್ಧತಿ ಮತ್ತು ಜೀತದಾಳುಗಳನ್ನು ಗುರುತಿಸುವ ತರಬೇತಿ ಕೈಪಿಡಿ


ಪೂರಕ ಓದುವಿಕೆ - XII B

ಜೀತದಾಳುಗಳ ಗುರುತಿಸುವಿಕೆ ಮತ್ತು ಬಿಡುಗಡೆ

ಕರ್ನಾಟಕ ಸರ್ಕಾರದ ಕ್ರಿಯಾ ಯೋಜನೆ

6) ಕಾನೂನಿನ ಅನುಷ್ಠಾನದ 30 ದಿನಗಳೊಳಗೆ ಜೀತದಾಳುವಿನ ಆಸ್ತಿಯನ್ನು ಜೀತದಾಳುವಿಗೆ ಮರಳಿಸದಿದ್ದರೆ ಮರಳಿಸದ ವ್ಯಕ್ತಿಯ ಮೇಲೆ 1000 ರೂಪಾಯಿ ದಂಡ ವಿಧಿಸಬಹುದು ಮತ್ತು ಆ ದಂಡದಿಂದ ಮರಳಿಸದ ಪ್ರತಿ ದಿನವೊಂದಕ್ಕೆ 5 ರೂಪಾಯಿಯಂತೆ ಮುಕ್ತ ಜೀತದಾಳುವಿಗೆ ನೀಡಬೇಕು (ಪರಿಚ್ಛೇದ 19).

2.6 ಒಬ್ಬ ಜೀತದಾಳುವಿನ ಬಿಡುಗಡೆ ಕುರಿತು ಒಂದು ಮುಖ್ಯವಾದ ಸ್ಪಷ್ಟತೆಯನ್ನು ಇಲ್ಲಿ ಒದಗಿಸುವುದು ಸೂಕ್ತ. ಮೇಲಿನ ಎಲ್ಲಾ ವಿವರಗಳಿಂದ ಖಚಿತವಾಗುವುದೇನೆಂದರೆ ಒಬ್ಬ ಜೀತದಾಳುವನ್ನು ಬಿಡುಗಡೆಗೊಳಿಸುವುದೆಂದರೆ ಅವರ ಕೆಲಸದ ಮೂಲದಿಂದ ಬಿಡುಗಡೆ ಗೊಳಿಸುವುದಲ್ಲ; ಬದಲಾಗಿ ಸ್ವಾತಂತ್ರ್ಯವಿಲ್ಲದಿರುವಿಕೆ, ಬಲಾತ್ಕಾರ ಮತ್ತು ಶೋಷಣೆಯನ್ನು ಒಳಗೊಂಡಿರುವ ಕೆಲಸದ ಸಂದರ್ಭಗಳಿಂದ ಮುಕ್ತಗೊಳಿಸುವುದು. ಒಬ್ಬ ಜೀತದಾಳುವನ್ನು ಬಿಡುಗಡೆಗೊಳಿಸಿದ ಮೇಲೆ, ಜೀತದಾಳುವು ಒಪ್ಪಿದರೆ, ಅವರನ್ನು ಕೆಲಸದಿಂದ ಬಿಡಿಸದಂತೆಯೂ ಮತ್ತು ಮುಕ್ತವಾದ ಹಾಗೂ ಶೋಷಣೆ ಇಲ್ಲದ ರೀತಿಯಲ್ಲಿಯೂ ಶಾಸನಾತ್ಮಕವಾಗಿಯೂ ಅವರು ಅದೇ ಮಾಲೀಕರಲ್ಲಿ ಕೆಲಸ ಮುಂದುವರೆಸುವಂತೆಯೂ ಸಂಬಂಧಪಟ್ಟ ಅಧಿಕಾರಿಗಳು ನೋಡಿಕೊಳ್ಳಬೇಕು. ಈ ಸಂದರ್ಭದಲ್ಲಿ ಎಸ್. ಮುರುಳೀಧರರವರು1998ರ ಮೇ 14ರಂದು ಸಲ್ಲಿಸಿದ "ಜೀತ ಕುರಿತ ಮೊಕದ್ದಮೆಯ ಬಗ್ಗೆ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ವರದಿ"ಯಿಂದ ಉದ್ಧರಿಸುವುದು ಔಚಿತ್ಯಪೂರ್ಣವಾಗಿದೆ. "ಬಿಡುಗಡೆ ಮಾಡುವುದು ಎಂದರೆ ದೈಹಿಕವಾಗಿ ಬೇರೆಡೆ ಸಾಗಿಸಬೇಕೆಂದಿಲ್ಲ. ಜೀತ ಕಾನೂನಿನ ಪರಿಚ್ಛೇದ-8 ಜೀತದಾಳುವು ಜೀತದ ಸಮಯದಲ್ಲಿ ಪಡೆದಿರುವ ವಸತಿ ಪ್ರದೇಶದ ಸ್ವಾಮ್ಯತೆಯನ್ನು ರಕ್ಷಿಸುತ್ತದೆ. ಬಿಡುಗಡೆ ಅಂದರೆ ಸಾಲದಿಂದ ವಿಮೋಚನೆ ಗೊಳಿಸುವಿಕೆ (ಪರಿಚ್ಛೇದ-6), ಅಡಮಾನದಿಂದ ವಿಮೋಚನೆಗೊಳಿಸುವಿಕೆ (ಪರಿಚ್ಛೇದ-7) ಮತ್ತು ಶೋಷಣೆಯಿಂದ ವಿಮೋಚನೆಗೊಳಿಸುವಿಕೆಯಾಗಿದೆ. ಬೇರೆ ರೀತಿಯಲ್ಲಿ ಹೇಳುವುದಾದರೆ ಬಿಡುಗಡೆಯ ಮುಂಚೆ ಜೀತದಾಳುವಾಗಿದ್ದ ಕೆಲಸಗಾರ ತನ್ನ ಕೆಲಸವನ್ನು ಕಳೆದುಕೊಳ್ಳದೇ ಹಲವಾರು ಕಾರ್ಮಿಕ ಕಾನೂನುಗಳ ಪ್ರಕಾರ ಅವರು ಕೆಲಸವನ್ನು ಮುಂದುವರಿಸುವಂತೆ ನೋಡಿಕೊಳ್ಳುವ ಒಂದು ವ್ಯವಸ್ಥೆ ಇರಬೇಕು. ಆ ಕಾರ್ಮಿಕ ಕಾನೂನುಗಳಲ್ಲಿ ಮುಖ್ಯವಾದವೆಂದರೆ ಕನಿಷ್ಟ ವೇತನ ಅಧಿನಿಯಮ ಮತ್ತು ವೇತನ ನೀಡುವ ಅಧಿನಿಯಮ. ಜೀತದಿಂದ ಬಿಡುಗಡೆಗೊಳಿಸಿ ಕೆಲಸದಲ್ಲಿ ಮುಂದುವರಿಯುತ್ತಿರುವ ಕೆಲಸಗಾರರಿಗೆ ಜೀತ ಮಾಡುತ್ತಿದ್ದಷ್ಟು ವರ್ಷ ಕನಿಷ್ಟ ವೇತನದಡಿ ದೊರಕಬೇಕಾಗಿರುವ ವೇತನವನ್ನು ಅದರ ಬಡ್ಡಿ ಜೊತೆ ದೊರಕಿಸುವಂತೆ ಬಿಡುಗಡೆಗೊಳಿಸುವ ಅಧಿಕಾರಿಗಳು ನೋಡಿಕೊಳ್ಳಬೇಕು."



ಜೀತ ನಿಷೇಧ : ಮೂಲಭೂತ ಹಕ್ಕು

-ಸಂವಿಧಾನದ ಅನುಚ್ಛೇದ 23 ರಂತೆ

ಪೂರಕ ಓದುವಿಕೆ – XIII A

ಜೀತ ಪದ್ಧತಿ ನಿರ್ಮೂಲನೆಗೆ ಕ್ರಮಗಳು: ಸಂಕ್ಷಿಪ್ತವಾಗಿ

(ಕರ್ನಾಟಕ ಸರ್ಕಾರದ ಕ್ರಿಯಾ ಯೋಜನೆ: ಜೀತದಾಳುಗಳ ಗುರುತಿಸುವಿಕೆ, ಬಿಡುಗಡೆ ಮತ್ತು ಪುನರ್ವಸತಿಯಿಂದ ಹಾಗೂ ಅಪರಾಧಿಗಳ ಮೇಲೆ ಕ್ರಮ ಜರುಗಿಸುವ ಕುರಿತು- ಇದರ ಅಧ್ಯಾಯ 7ರಿಂದ)

1) ಜೀತದಾಳುಗಳ ಸಮೀಕ್ಷೆ ಪ್ರತಿ ಮೂರು ವರ್ಷಕ್ಕೊಮ್ಮೆ ನಡೆಯಬೇಕು. ಉಗಾದಿ ನಂತರದ ಎಪ್ರಿಲ್‌ನಿಂದ ಎರಡು ತಿಂಗಳುಗಳೊಳಗಡೆ ಅದನ್ನು ನಡೆಸಿದರೆ ಒಳ್ಳೆಯದು. ಗ್ರಾಮ ಪಂಚಾಯತಿ ಕಾರ್ಯದರ್ಶಿಗಳು ತಮ್ಮ ವ್ಯಾಪ್ತಿಯಲ್ಲಿ ಇರುವ ಜೀತದಾಳುಗಳ ಬಗ್ಗೆ ಜಿಲ್ಲಾಧಿಕಾರಿಗಳು ಮತ್ತು ಉಪ ವಿಭಾಗಾಧಿಕಾರಿಗಳಿಗೆ ಎಪ್ರಿಲ್‌ನಿಂದ ಒಂದು ತಿಂಗಳೊಳಗೆ ವರದಿ ಸಲ್ಲಿಸಬೇಕು. ಜಿಲ್ಲಾಧಿಕಾರಿಗಳು ಮತ್ತು ಉಪ ವಿಭಾಗಾಧಿಕಾರಿಗಳು ಆ ವರದಿಗಳನ್ನಾಧರಿಸಿ ಮತ್ತು ಸ್ವತಂತ್ರವಾಗಿ ತಮ್ಮ ಜಾಗೃತಿ ಸಮಿತಿಯೊಂದಿಗೆ ನಂತರದ ಒಂದು ತಿಂಗಳಲ್ಲಿ ತನಿಖೆ ನಡೆಸಬೇಕು. ಸಮೀಕ್ಷೆಯನ್ನು ಸಮರ್ಥ ಮತ್ತು ಪ್ರಾಮಾಣಿಕ ಸರ್ಕಾರೇತರ ಸಂಸ್ಥೆಗಳ ಜೊತೆಗೂಡಿ ನಡೆಸುವುದೇ ಸೂಕ್ತ ಅಥವಾ ಅವರೇ ನಡೆಸಲು ಅವರಿಗೆ ವಹಿಸಿಕೊಡಬಹುದು. ಜೀತ ಪ್ರಕರಣಗಳ ಬಗ್ಗೆ ತಮ್ಮ ಗಮನ ಸೆಳೆದ ಪ್ರತಿ ಸಾರಿ ಜಿಲ್ಲಾಧಿಕಾರಿಗಳು ಮತ್ತು ಉಪ ವಿಭಾಗಾಧಿಕಾರಿಗಳು ಅವುಗಳ ಬಗ್ಗೆ ತನಿಖೆ ನಡೆಸಬೇಕು. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕಂದಾಯ ಇಲಾಖೆ, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಮತ್ತು ಆದಿವಾಸಿ ಜನರ ಅಧ್ಯಯನ ಕೇಂದ್ರಗಳು ನಡೆಸುವ ಕೌಟುಂಬಿಕ ಸಮೀಕ್ಷೆಗಳಲ್ಲಿ ಜೀತದಾಳುಗಳ ತನಿಖೆಯನ್ನೂ ನಡೆಸಬೇಕು.

2) ಜೀತದಾಳುಗಳ ಗುರುತಿಸುವಿಕೆ ಮತ್ತು ಸಮೀಕ್ಷೆಯ ಅಂಗವಾಗಿ ಜೀತ ಎಂದರೇನು ಮತ್ತು ಜೀತದಾಳುಗಳನ್ನು ಸರಿಯಾದ ರೀತಿಯಲ್ಲಿ ಗುರುತಿಸುವುದು ಹೇಗೆ ಎಂಬುದರ ಬಗ್ಗೆ ಸಮೀಕ್ಷೆ ನಡೆಸುವವರಿಗೆ ಜಾಗೃತಿ ಮತ್ತು ಸಂವೇದನಾ ತರಬೇತಿಗಳನ್ನು ನಿಯತಕಾಲಿಕವಾಗಿ ನಡೆಸಬೇಕು. ಜೀತದಾಳುಗಳು ಮತ್ತಿತರ ದುರ್ಬಲ ವರ್ಗಗಳ ಜನರಿಗೂ ಅಂತಹ ತರಬೇತಿಗಳನ್ನು ನಡೆಸಬೇಕು.

3) ಗುರುತಿಸಿದ ಜೀತದಾಳುಗಳನ್ನು ಜಿಲ್ಲಾಧಿಕಾರಿಗಳು ಅಥವಾ ಉಪ ವಿಭಾಗಾಧಿಕಾರಿಗಳು ಗುರುತಿಸಿದ 15 ದಿನಗಳ ಒಳಗೆ ಬಿಡುಗಡೆ ಪತ್ರದೊಂದಿಗೆ ಬಿಡುಗಡೆಗೊಳಿಸಬೇಕು. ಅವುಗಳ ಪ್ರತಿಯನ್ನು ಗ್ರಾಮ ಪಂಚಾಯತಿ ಕಾರ್ಯದರ್ಶಿಗಳಿಗೆ ಮತ್ತು ತಾಲೂಕು ಪಂಚಾಯತಿಗಳ ಕಾರ್ಯ ನಿರ್ವಹಣಾಧಿಕಾರಿಗಳಿಗೂ ಕಳುಹಿಸಿ ಕೊಡಬೇಕು.

4) ಜೀತದಾಳುವನ್ನು ಬಿಡುಗಡೆಗೊಳಿಸುವ ಸಂದರ್ಭದಲ್ಲಿ ಅವರಿಗೆ ಕೇಂದ್ರೀಯ ಪುರಸ್ಕೃತ ಯೋಜನೆ (ಕೇಪುಯೋ)ಯಡಿ1000 ರೂಪಾಯಿಗಳನ್ನು ನೀಡಬೇಕು. ಜೀತದಾಳುಗಳ ಸಹಾಯಧನ ಯೋಜನೆಯಲ್ಲಿ ಪ್ರತಿ ಜೀತದಾಳುವಿಗೆ ಪ್ರತಿ ತಿಂಗಳು 300 ರೂಪಾಯಿಗಳನ್ನು ಬಿಡುಗಡೆಗೊಳಿಸಿದ ತಿಂಗಳಿಂದ ಎರಡು ವರ್ಷದ ತನಕ ಮಂಜೂರು ಮಾಡಬೇಕು.

5) ಜೀತದ ಕ್ರೂರ ಪ್ರಕರಣಗಳಲ್ಲಿ ಅಪರಾಧಿಗಳ ವಿರುದ್ಧ ದಾವೆ ಹೂಡಬೇಕು. (ಬೇರೆ ಪ್ರಕರಣಗಳಲ್ಲಿ ಮಾಲಿಕರಿಗೆ ನೋಟೀಸನ್ನು ಕಳುಹಿಸಬಹುದು.)

ಜೀತಪದ್ಧತಿ ಮತ್ತು ಜೀತದಾಳುಗಳನ್ನು ಗುರುತಿಸುವ ತರಬೇತಿ ಕೈಪಿಡಿ

ಪ್ರಕಟಣೆ – XIII A
ಜೀತ ಪದ್ಧತಿ ನಿರ್ಮೂಲನೆಗೆ ಕ್ರಮಗಳು: ಸಂಕ್ಷಿಪ್ತವಾಗಿ
ಕರ್ನಾಟಕ ಸರ್ಕಾರದ ಕ್ರಿಯಾ ಯೋಜನೆ ಅಧ್ಯಾಯ 7

6) ಗ್ರಾಮ ಪಂಚಾಯತಿ ಕಾರ್ಯದರ್ಶಿಗಳು ತಮಗೆ ಜಿಲ್ಲಾಧಿಕಾರಿಗಳು ಅಥವಾ ಉಪ ವಿಭಾಗಾಧಿಕಾರಿಗಳಿಂದ ಜೀತದಾಳುಗಳ ಬಿಡುಗಡೆ ಪತ್ರ ತಲುಪಿದ ತಕ್ಷಣ ಜೀತದಾಳುಗಳು, ಬೇರೆ ಬೇರೆ ಇಲಾಖೆಗಳು ಹಾಗೂ ಹಣಕಾಸು ಸಂಸ್ಥೆಗಳ ಅಧಿಕಾರಿಗಳು, ಸರ್ಕಾರೇತರ ಸಂಸ್ಥೆಗಳ ಪ್ರತಿನಿಧಿಗಳು, ಬಿಡುಗಡೆಗೊಂಡ ಜೀತದಾಳುಗಳು, ದಲಿತರು ಹಾಗೂ ಆದಿವಾಸಿ ಜನರ ಸಂಘಟನೆಗಳ ಮುಖಂಡರುಗಳನ್ನು ಕರೆದು ಸಭೆ ಸೇರಿಸಬೇಕು. ಸಭೆಯಲ್ಲಿ ಕೇಪುಯೋದ ಉಳಿದ 19000 ರೂಪಾಯಿಗಳು ಮತ್ತು SGSY ಸಹಾಯಧನದಿಂದ ಕೂಡಿದ 30000 ರೂಪಾಯಿಗಳನ್ನು ಸೇರಿಸಿ ಪುನರ್ವಸತಿಗೋಸ್ಕರ ಕಾರ್ಯಯೋಜನೆಯನ್ನು ರೂಪಿಸಬೇಕು. ಜೊತೆಗೆ ಈ ಮುಂದಿನ ಸೌಲಭ್ಯಗಳನ್ನೂ ದೊರಕಿಸಿ ಕೊಡಬೇಕು: ಮನೆ ನಿವೇಶನ ಮತ್ತು / ಅಥವಾ ಮನೆ; ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಅಥವಾ SGRYಅಥವಾ ಕೂಲಿಗಾಗಿ ಕಾಳು ಯೋಜನೆಯಡಿಯಲ್ಲಿ ಕೆಲಸ ಒದಗಿಸುವುದು; ನಮ್ಮ ಭೂಮಿ ನಮ್ಮ ತೋಟ ಯೋಜನೆ ಅಥವಾ ಅನುಸೂಚಿತ ಜಾತಿ ಮತ್ತು ಜನಾಂಗಗಳ (ಅಂಬೇಡ್ಕರ್) ಅಭಿವೃದ್ಧಿ ನಿಗಮದ ಭೂ ಖರೀದಿ ಯೋಜನೆಗಳಡಿ ಭೂಮಿ ಮಂಜೂರು ಮಾಡುವುದು; ಯಶಸ್ವಿನಿ ಅಥವಾ ಜನಶ್ರೀ ವಿಮಾ ಯೋಜನೆಯಡಿ ಆರೋಗ್ಯ ವಿಮೆ ಕಲ್ಪಿಸುವುದು; ವಯಸ್ಕರ ಶಿಕ್ಷಣ ಸೌಲಭ್ಯ ದೊರಕಿಸುವುದು; ಬಾಲ ಜೀತದಾಳುಗಳನ್ನು NCLP ಅಥವಾ SCLP ಯೋಜನೆಗಳಲ್ಲಿ ಸೇತು ಶಾಲೆಗಳಿಗೆ ಸೇರಿಸಿ ಒಂದು ವರ್ಷದ ನಂತರ ಮುಖ್ಯ ವಾಹಿನಿ ಶಾಲೆಗಳಿಗೆ ಸೇರಿಸುಂತೆ ವ್ಯವಸ್ಥೆ ಮಾಡುವುದು; ಮತ್ತು ಕೌಶಲ್ಯ ತರಬೇತಿಗಳನ್ನೂ ಜಾಗೃತಿ ತರಬೇತಿಗಳನ್ನೂ ನಡೆಸಲು ಯೋಜಿಸುವುದು. ಜೀತದಾಳುಗಳನ್ನು ಬಿಡುಗೊಡೆಗೊಳಿಸಿದ ಎರಡು ತಿಂಗಳುಗಳೊಳಗೆ ಪುನರ್ವಸತಿಗೋಸ್ಕರ ಕಾರ್ಯಯೋಜನೆಯನ್ನು ರೂಪಿಸಿ ಜಾರಿಗೆ ತರುವ ಪ್ರಕ್ರಿಯೆಯು ಪೂರ್ಣವಾಗಬೇಕು.

7) ರೂಪಿಸಿದ ಕಾರ್ಯಯೋಜನೆಯನ್ನು ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಿಗೆ ಕಳುಹಿಸಿ ಕೊಡಬೇಕು. ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ಜಿಲ್ಲಾ ಪರಾಮರ್ಶಕ ಸಮಿತಿ ಮತ್ತು ಜಾಗೃತಿ ಸಮಿತಿಗಳ ಜೊತೆ ಬೇರೆ ಬೇರೆ ಇಲಾಖೆಗಳು ಹಾಗೂ ಹಣಕಾಸು ಸಂಸ್ಥೆಗಳ ಅಧಿಕಾರಿಗಳು, ಸರ್ಕಾರೇತರ ಸಂಸ್ಥೆಗಳ ಪ್ರತಿನಿಧಿಗಳು, ಬಿಡುಗಡೆಗೊಂಡ ಜೀತದಾಳುಗಳು, ದಲಿತರು ಹಾಗೂ ಆದಿವಾಸಿ ಸಂಘಟನೆಗಳ ಮುಖಂಡರುಗಳನ್ನು ಕರೆದು ಸಭೆ ಸೇರಿಸಬೇಕು. ಸಭೆಯಲ್ಲಿ ಸಾಧ್ಯವಾದ ಎಲ್ಲಾ ಮೂಲಗಳಿಂದ ಜೀತದಾಳುಗಳ ಪುನರ್ವಸತಿಗೆ ಸೌಲಭ್ಯಗಳನ್ನು ಒಟ್ಟುಗೂಡಿಸುವಂತೆ ನೋಡಿಕೊಳ್ಳಬೇಕು.

8) ಪುನರ್ವಸತಿ ಯೋಜನೆಯ ಪ್ರತಿಯೊಂದನ್ನು ಗ್ರಾಮ ಪಂಚಾಯತಿ ಕಾರ್ಯದರ್ಶಿಗಳು ತಾಲೂಕು ಪಂಚಾಯತಿಯ ಕಾರ್ಯ ನಿರ್ವಹಣಾಧಿಕಾರಿಗಳಿಗೆ ಕಳುಹಿಸಬೇಕು. ಇದರಿಂದ ತಾಲೂಕು ಮಟ್ಟದಲ್ಲಿಯ ಎಲ್ಲಾ ಯೋಜನೆಗಳನ್ನು ಸಂಯೋಜಿಸಿ ನಿರ್ವಹಿಸಲು ಅನುಕೂಲವಾಗುವುದು ಮತ್ತು ತಾಲೂಕು ಮಟ್ಟದಲ್ಲಿ ಲಭ್ಯವಿರುವ ಸಂಪನ್ಮೂಲಗಳನ್ನು ಪುನರ್ವಸತಿಗೆ ಬಳಸಲು ಅನುಕೂಲವಾಗುವುದು.

9) ರಾಜ್ಯ ಮಟ್ಟದ ವಿಶೇಷ ಅಧಿಕಾರದ ಸಮಿತಿಯು ಪ್ರತಿ 6 ತಿಂಗಳಿಗೊಂದು ಸಾರಿ ಸೇರಿ ಎಲ್ಲಾ ಇಲಾಖೆಗಳು ಮತ್ತು ಹಣಕಾಸು ಸಂಸ್ಥೆಗಳು ಬಿಡುಗಡೆಗೊಂಡ ಜೀತದಾಳುಗಳ ಅವಶ್ಯಕತೆಗಳಿಗೆ ಆದ್ಯತೆ ಕೊಡುತ್ತಿದ್ದಾರೆಂದು ನೋಡಿಕೊಳ್ಳಬೇಕು.

10) ಬಿಡುಗಡೆಗೊಳಿಸಿದ ಜೀತದಾಳುಗಳಿಗೆ ಪುನರ್ವಸತಿ ಸೌಲಭ್ಯ ಮಂಜೂರು ಮಾಡುವ ಮುಂಚೆ ಅವರು ತಮ್ಮ ಸ್ವ ಸಹಾಯ ಗುಂಪು ಇಲ್ಲವೇ ಸಹಕಾರ ಸಂಘ ಇಲ್ಲವೇ ಒಂದು

ಜೀತಪದ್ಧತಿ ಮತ್ತು ಜೀತದಾಳುಗಳನ್ನು ಗುರುತಿಸುವ ತರಬೇತಿ ಕೈಪಿಡಿ

ಪೂರಕ ಓದುವಿಕೆ – XIII A

ಜೀತ ಪದ್ಧತಿ ನಿರ್ಮೂಲನೆಗೆ ಕ್ರಮಗಳು: ಸಂಕ್ಷಿಪ್ತವಾಗಿ

ಕರ್ನಾಟಕ ಸರ್ಕಾರದ ಕ್ರಿಯಾ ಯೋಜನೆ ಅಧ್ಯಾಯ 7


ಕಾರ್ಮಿಕ ಒಕ್ಕೂಟ ಇಲ್ಲವೇ ಬೇರೆ ರೀತಿಯ ಸಂಸ್ಥೆಯೊಂದನ್ನು ತಮ್ಮಷ್ಟಕ್ಕೆ ಅಥವಾ ತಮ್ಮ ಹಳ್ಳಿಯ ಬೇರೆ ಭೂರಹಿತ ಕೃಷಿ ಕಾರ್ಮಿಕರ ಜೊತೆಗೂಡಿ ಕಟ್ಟುವಂತೆ ನೋಡಿ ಕೊಳ್ಳಬೇಕು. ಅದರ ಜವಾಬ್ದಾರಿಯನ್ನು ಪ್ರಾಮಾಣಿಕ ಸರ್ಕಾರೇತರ ಸಂಸ್ಥೆಗಳು ಅಥವಾ ಬಿಡುಗಡೆಗೊಂಡ ಜೀತದಾಳುಗಳ ಸಂಘಟನೆಗಳಿಗೆ ವಹಿಸಿ ಕೊಡಬಹುದು. ಅದಕ್ಕೋಸ್ಕರ SGSYನಲ್ಲಿ ಸ್ವ ಸಹಾಯ ಗುಂಪೊಂದು ಕಟ್ಟಲು ಮೀಸಲಿಟ್ಟ 9000 ರೂಪಾಯಿಗಳನ್ನು ಸ್ವ ಸಹಾಯ ಗುಂಪು ಕಟ್ಟುವ ಜವಾಬ್ದಾರಿ ವಹಿಸಿಕೊಂಡ ಸಂಸ್ಥೆ ಅಥವಾ ಸಂಘಟನೆಗೆ ನೀಡಬೇಕು. ಇದನ್ನು ನೋಡಿಕೊಳ್ಳುವ ಜವಾಬ್ದಾರಿ ತಾಲೂಕು ಪಂಚಾಯತಿಯ ಕಾರ್ಯ ನಿರ್ವಹಣಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳದ್ದಾಗಿರುತ್ತದೆ.

11) ಜೀತದಾಳುಗಳ ಮಾನಸಿಕ ಪುನರ್ವಸತಿಗೂ ಒತ್ತು ಕೊಡಬೇಕು. ಸಮರ್ಥ ಹಾಗೂ ಪ್ರಾಮಾಣಿಕ ಸರ್ಕಾರೇತರ ಸಂಸ್ಥೆಗಳ ಸಹಾಯದೊಂದಿಗೆ ಸರ್ಕಾರದ ಪ್ರತಿ ಯೋಜನೆಗಳಲ್ಲಿ ಮಾಹಿತಿ, ಸಂವಹನ ಮತ್ತು ಶಿಕ್ಷಣಗಳಿಗೋಸ್ಕರ ವಿನಿಯೋಗಿಸಬಹುದಾದ ಶೇ. 5 ರಷ್ಟು ಹಣದ ಸ್ವಲ್ಪ ಭಾಗವನ್ನು ಅದಕ್ಕೋಸ್ಕರ ಬಳಸಬೇಕು. ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳು ಇವುಗಳ ಬಗ್ಗೆ ಜವಾಬ್ದಾರಿ ವಹಿಸಬೇಕು.

12) ಪುನರ್ವಸತಿ ಕಾರ್ಯಕ್ರಮದ ಪರಿಣಾಮ ಹಾಗೂ ಅಭಿವೃದ್ಧಿಯನ್ನು ನಿರಂತರವಾಗಿ ನಿರ್ವಹಿಸಲು ಅನುವು ಮಾಡಿಕೊಡುವಂತೆ ಗುರುತಿಸಿದ, ಬಿಡುಗಡೆ ಮಾಡಿದ ಮತ್ತು ಪುನರ್ವಸತಿಗೊಳಿಸಿದ ಜೀತದಾಳುಗಳ ವಿವರಗಳನ್ನು ನಮೂದಿಸುವ ಪ್ರತ್ಯೇಕ ದಾಖಲೆ ಪುಸ್ತಕಗಳನ್ನು ಗ್ರಾಮ ಪಂಚಾಯತಿ, ತಾಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಇಡಬೇಕು. ಆರು ತಿಂಗಳುಗಳಿಗೊಮ್ಮೆ ಪುನರ್ವಸತಿ ಕಾರ್ಯಕ್ರಮಗಳ ಪರಾಮರ್ಶಕ ಸಭೆಗಳನ್ನು ನಡೆಸಬೇಕು.

13) ಪುನರ್ವಸತಿ ಕಾರ್ಯಕ್ರಮಗಳ ಮೌಲ್ಯಮಾಪನ ಮಾಡುವ ಅಧ್ಯಯನಗಳನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಆಗಾಗ್ಗೆ ನಡೆಸಬೇಕು. ಜೀತದಾಳುಗಳನ್ನು ಗುರುತಿಸುವ ಮತ್ತು ಬಿಡುಗಡೆಗೊಳಿಸುವ ಪ್ರಕ್ರಿಯೆಗಳ ಬಗ್ಗೆಯೂ ಆಗಾಗ್ಗೆ ಅಧ್ಯಯನ ನಡೆಸಬೇಕು. ಅವುಗಳಿಂದ ಜೀತ ಸಮಸ್ಯೆಯನ್ನು ಹೋಗಲಾಡಿಸುವಲ್ಲಿ ಕೈಗೊಳ್ಳಬೇಕಾಗಿರುವ ಮುಂದಿನ ಕ್ರಮಗಳಿಗೆ ಸೂಕ್ತ ಮಾರ್ಗದರ್ಶನ ಪಡೆಯಬೇಕು.

14) ಜೀತ ತಡೆಗಟ್ಟುವ ಕಾರ್ಯಕ್ರಮಗಳಿಗೂ ಆದ್ಯತೆ ಕೊಡಬೇಕು.



ಜೀತಪದ್ಧತಿ ಮತ್ತು ಜೀತದಾಳುಗಳನ್ನು ಗುರುತಿಸುವ ತರಬೇತಿ ಕೈಪಿಡಿ

ಜೀತಮಾಡಿಸುವವರೇ ಇದನ್ನು ಗಮನಿಸಿ...,!!

ಜೀತಮಾಡಲು ಒತ್ತಾಯಿಸಿದರೆ: 3 ವರ್ಷ ಜೈಲು ಹಾಗೂ 2000 ರೂಪಾಯಿ ದಂಡ.

ಜೀತಕ್ಕಾಗಿ ಸಾಲ ಮುಂಗಡ ಕೊಟ್ಟರೆ: 3 ವರ್ಷ ಜೈಲು ಹಾಗೂ 2000 ರೂ. ದಂಡ

ಜೀತ ಮಾಡುವಂತೆ ಯಾವುದೇ ರೂಢಿ, ಸಂಪ್ರದಾಯ ಕರಾರು, ಒಪ್ಪಂದ ಅಥವಾ ಇನ್ನಾವುದೇ ಪದ್ಧತಿಯನ್ನು ಕಡ್ಡಾಯ ಮಾಡುವ ವ್ಯಕ್ತಿಗೆ : 3 ವರ್ಷ ಜೈಲು ಹಾಗೂ 2000 ರೂ. ದಂಡ. ಈ ದಂಡದ ಹಣದಿಂದ ಜೀತಗಾರನ ಕೂಲಿ ಬಾಕಿಯನ್ನು ಪಾವತಿಸಲಾಗುತ್ತದೆ.

ಜೀತ ಸಾಲಕ್ಕಾಗಿ ಯಾವುದೇ ಹಣ ಸ್ವೀಕರಿಸಿದರೆ: 3 ವರ್ಷ ಜೈಲು ಹಾಗೂ 2000 ರೂ. ದಂಡ. ಈ ಸ್ವೀಕರಿಸಿದ ದಂಡದ ಹಣವು ಕೋರ್ಟಿನ ಮೂಲಕ ಜೀತಗಾರನಿಗೆ ಸಲ್ಲತಕ್ಕದ್ದು.

ಜೀತಗಾರನಿಗೆ ಸಲ್ಲಬೇಕಾದ ಆಸ್ತಿಯನ್ನು ನಿರಾಕರಿಸಿದರೆ: 1 ವರ್ಷ ಜೈಲು ಹಾಗೂ 1000 ರೂ ದಂಡ. ಈ ದಂಡದ ಹಣದಿಂದ ಜೀತಗಾರನ ಕೂಲಿ ಬಾಕಿಯನ್ನು ಪಾವತಿಸಲಾಗುತ್ತದೆ.

ಒಂದು ಕಂಪನಿ ಜೀತ ಒತ್ತಾಯಿಸಿದರೆ: ಕಂಪನಿಯ ಆಡಳಿತಗಾರ ಹಾಗೂ ಕಂಪನಿ ಇಬ್ಬರೂ ದಂಡನಾರ್ಹರು.

ನೆನಪಿರಲಿ : ಜೀತದಾಳು ಪಡೆದ, ಹೊಲ-ಆಸ್ತಿ ಹಾಗೂ ಅವನ ವಾಸದ ಮನೆಯಿಂದ ಅವನನ್ನು ಹೊರ ಹಾಕುವಂತಿಲ್ಲ.



ಪೂರಕ ಓದುವಿಕೆ-XIII B ಎ.ಕೆ. ಚಕ್ರವರ್ತಿ ಕೇಂದ್ರ ಸಮಿತಿಯ ಶಿಫಾರಸುಗಳು- ಸಾರಾಂಶ ಮತ್ತು ಅದರ ಕುರಿತು ಕರ್ನಾಟಕ ಸರ್ಕಾರದ ಸುತ್ತೋಲೆ

ಪೂರಕ ಓದುವಿಕೆ – XIII B

ಎ.ಕೆ. ಚಕ್ರವರ್ತಿ ಕೇಂದ್ರ ಸಮಿತಿಯ ಶಿಫಾರಸುಗಳು- ಸಾರಾಂಶ ಮತ್ತು ಅದರ ಕುರಿತು ಕರ್ನಾಟಕ ಸರ್ಕಾರದ ಸುತ್ತೋಲೆ

(ಜೀತದಾಳುಗಳ ಬಗ್ಗೆ ಸಮಂಜಸವಾದ ವ್ಯಾಖ್ಯಾನ ಹಾಗೂ ಜೀತದಾಳುಗಳನ್ನು ಗುರುತಿಸುವ ಕಾರ್ಯವಿಧಾನ ಅಥವಾ ಕ್ರಮಗಳನ್ನು ರೂಪಿಸಲು ನೇಮಿಸಿದ ಕೇಂದ್ರ ಸಮಿತಿಯು (ಅಧ್ಯಕ್ಷರು ಎ.ಕೆ. ಚಕ್ರವರ್ತಿ, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಗುಜರಾತ್ ಸರ್ಕಾರ, ಕಾರ್ಮಿಕ ಮತ್ತು ಉದ್ಯೋಗ ಇಲಾಖೆ) 1994 ರಂದು ಮಂಡಿಸಿದ ವರದಿಯಲ್ಲಿಯ ಶಿಫಾರಸ್ಸುಗಳ ಸಾರಾಂಶ)

1. ಜೀತವನ್ನು ಗುರುತಿಸುವಲ್ಲಿ ಸಾಲಗಾರ - ಸಾಲಿಗ ಸಂಬಂಧವು ಒಂದು ಬಹುಮುಖ್ಯ ಅಂಶವಾಗಿದ್ದರೂ, ಬಲಾತ್ಕಾರದ ದುಡಿಮೆಯ ಅಂಶಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡಬೇಕು. ಮತ್ತು ಬಲಾತ್ಕಾರವನ್ನು ಕೇವಲ ದೈಹಿಕ ಬಲಾತ್ಕಾರಕ್ಕೆ ಸೀಮಿತಗೊಳಿಸದೆ ಆರ್ಥಿಕ ಪರಿಸ್ಥಿತಿಗಳ ಒತ್ತಡಗಳಿಂದ, ಹಣದ ಅವಶ್ಯಕತೆಯಿರುವ ವ್ಯಕ್ತಿಗೆ ಬೇರೆ ಮಾರ್ಗಗಳಿಲ್ಲದೆ, ಕಾನೂನು ಬಾಹಿರ ರೀತಿಯಲ್ಲಿ ತನ್ನ ದುಡಿಮೆ ಅಥವಾ ಸೇವೆಯನ್ನು ಬೇರೊಬ್ಬನಿಗೆ ಸಲ್ಲಿಸುವಂತೆ ಒತ್ತಾಯಿಸುವ ಬಲಾತ್ಕಾರವನ್ನು ಬಲಾತ್ಕಾರವೆಂದು ತಿಳಿದುಕೊಳ್ಳಬೇಕು. (ನೋಡಿ - ಸಮಿತಿ ವರದಿ 3.2, 3.8 3.11).

2. ಜೀತ ಮತ್ತು ಜೀತಪದ್ಧತಿ ಕುರಿತ ವ್ಯಾಖ್ಯಾನಗಳನ್ನು ಉದಾರವಾಗಿಯೇ ಅರ್ಥೈಸಬೇಕು. ಅದಕ್ಕೋಸ್ಕರ ಬಲಾತ್ಕಾರದ ದುಡಿಮೆಯ ಅಂಶವನ್ನು 1976ರ ಜೀತಪದ್ಧತಿ ರದ್ದತಿ ಅಧಿನಿಯಮದ ಪರಿಚ್ಛೇದಗಳಾದ 2, 6 ಉಪಪರಿಚ್ಛೇದ (1) ಮತ್ತು (6), 7, 8, 9, 16 ಮತ್ತು 18ರ ಸೂಕ್ತ ವಾಕ್ಯ ಭಾಗಗಳಲ್ಲಿ ನಮೂದಿಸಬೇಕು (3.3).

3. ಈ ಕೆಳಗಿನ ಆಡಳಿತಾತ್ಮಕ ಮಾಪನಗಳನ್ನು ಅಳವಡಿಸುವುದರ ಮೂಲಕ ಅಧಿನಿಯಮದಲ್ಲಿರುವ ಜೀತಪದ್ಧತಿ ಕುರಿತ ವ್ಯಾಖ್ಯಾನದಲ್ಲಿಯ ಅಂಶಗಳನ್ನು ಉದಾರವಾಗಿಯೇ ಬಳಸಬಹುದು:

- 3.1 ಜೀತದಾಳುವಿನ ಸಾಲ ಮನ್ನ ಆಗಿದ್ದರೂ, ಅಂಥ ಜೀತದಾಳುವನ್ನು ಗುರುತಿಸಿ, ಬಿಡುಗಡೆ ಮಾಡಿ ಅವನಿಗೆ ಪುನರ್ವಸತಿ ಸೌಕರ್ಯ ಕಲ್ಪಿಸಬೇಕು (3.4).
- 3.2 ಒಪ್ಪಂದದ ಪೇಪರಿನಲ್ಲಿ ಬಲಾತ್ಕಾರದ ಅಂಶವನ್ನು ಮರೆಮಾಡಿದರೂ, ಯಾವುದೇ ಕೂಲಿಯಿಲ್ಲದೆ ಅಥವಾ ನ್ಯಾಯಯುತ ಮಜೂರಿ ಇಲ್ಲದೆ, ಜನ್ಮ, ಜಾತಿ, ಪದ್ಧತಿಗಳ ಕಾರಣವಾಗಿ ಬಲಾತ್ಕಾರವಾಗಿ ದುಡಿಯುತ್ತಿರುವವನನ್ನು ಜೀತಗಾರನೆಂದೇ ಪರಿಗಣಿಸಬೇಕು (3.4).
- 3.3 ಜೀತದಾಳು ಈಗ ಜೀತವನ್ನು ಬಿಟ್ಟಿದ್ದರೂ, ಅರ್ಜಿ ಹಾಕುವಾಗ ಜೀತದಾಳು ಆಗಿದ್ದರೆ, ಅವನನ್ನು ಗುರುತಿಸಿ, ಬಿಡುಗಡೆ ಮಾಡಿ ಪುನರ್ವಸತಿ ಕಲ್ಪಿಸಬೇಕು. [2.23. (ii)].
- 3.4 ಒಂದು ವರ್ಷಕ್ಕಿಂತ ಕಡಿಮೆ ಕೆಲಸ ಮಾಡುತ್ತಿರುವ ಜೀತದಾಳುವನ್ನು ಜೀತದಾಳುವೆಂದೇ ಪರಿಗಣಿಸಬೇಕು. ಕಾನೂನಿನಲ್ಲಿ ಜೀತಪದ್ಧತಿಗೆ ಕನಿಷ್ಟ ಕಾಲಾವಧಿಯನ್ನು ನಮೂದಿಸಿಲ್ಲ [2.23 (iii)]
- 3.5 ಜೀತ ಸಾಲಮಾಡಿ, ಸಾಲ ತೀರುವವರೆಗೆ ಜೀತ ಮಾಡಬೇಕೆಂದು ನಿರ್ಬಂಧವಿರುವ ಜೀತದಾಳುವಿನ ಚಲನಾ ಸ್ವಾತಂತ್ರ್ಯಕ್ಕೆ ಧಕ್ಕೆ, ತನ್ನ ಶ್ರಮದ ಫಲವನ್ನು ಮಾರುವ ಸ್ವಾತಂತ್ರ್ಯಕ್ಕೆ ಧಕ್ಕೆ ಆಗದಿದ್ದರೂ ಆ ಸಾಲವನ್ನು ಜೀತ ಸಾಲವಲ್ಲವೆಂದು ತೋರಿಸುವ ಹೊಣೆ 15ನೇ ಪರಿಚ್ಛೇದದ ಪ್ರಕಾರ ಯಜಮಾನನ ಮೇಲಿದೆ [2.23 (iv)].

ಜೀತಪದ್ಧತಿ ಮತ್ತು ಜೀತದಾಳುಗಳನ್ನು ಗುರುತಿಸುವ ತರಬೇತಿ ಕೈಪಿಡಿ

ಪೂರಕ ಓದುವಿಕೆ-XIII B

ಎ.ಕೆ. ಚಕ್ರವರ್ತಿ ಕೇಂದ್ರ ಸಮಿತಿಯ ಶಿಫಾರಸುಗಳು- ಸಾರಾಂಶ ಮತ್ತು ಅದರ ಕುರಿತು ಕರ್ನಾಟಕ ಸರ್ಕಾರದ ಸುತ್ತೋಲೆ

4. 1986 ರ ಬಾಲಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಅಧಿನಿಯಮದ ಅಂಶಗಳನ್ನು 1976 ರ ಜೀತಪದ್ಧತಿ ರದ್ದತಿ ಅಧಿನಿಯಮದ ಬೇರೆ ಬೇರೆ ಪರಿಚ್ಛೇದಗಳಿಗೆ ಅನ್ವಯಿಸಿ, ಬಾಲಕಾರ್ಮಿಕರನ್ನು ಜೀತಪದ್ಧತಿ ಅಧಿನಿಯಮದಡಿಯಲ್ಲಿ ಅರ್ಹೈಸುವಂತೆ 1976 ಜೀತಪದ್ಧತಿ ರದ್ದತಿ ಅಧಿನಿಯಮದ ಪರಿಚ್ಛೇದ 2ರ ವಿವರಣೆಯ ಅರ್ಥವನ್ನು ವಿಸ್ತಾರಗೊಳಿಸಬೇಕು (3.5).

5. ಜೀತದಾಳುಗಳನ್ನು ಗುರುತಿಸಿ, ಬಿಡುಗಡೆಗೊಳಿಸಿ, ಅವರ ಪುನರ್ವಸತಿಗಾಗಿ ಜಿಲ್ಲಾಧಿಕಾರಿಗಳು ತಮ್ಮ ಅಧೀನದಲ್ಲಿರುವ ಅಧಿಕಾರಿಗಳಿಗೆ ಸೂಕ್ತವಾದ ಅಧಿಕಾರವನ್ನು ಕೊಟ್ಟು, ಅವರನ್ನು ನಿಯೋಜಿಸಬೇಕು (3.12).

6. ಜಿಲ್ಲಾಧಿಕಾರಿಗಳು ಜಿಲ್ಲೆ, ಉಪವಿಭಾಗ, ತಾಲ್ಲೂಕು ಮಟ್ಟಗಳಲ್ಲಿ ಜಾಗೃತಿ ಸಮಿತಿಗಳನ್ನು ರಚಿಸಬೇಕು (3.12).

7. ಜೀತ ಪದ್ಧತಿ ಬಗ್ಗೆ ನಿರಂತರವಾಗಿ ಸಮೀಕ್ಷೆಯನ್ನು ಕೈಗೊಳ್ಳುವುದರ ಜೊತೆಗೆ ಪ್ರಾಮಾಣಿಕ ಜೀತದಾಳುಗಳನ್ನು ಗುರುತಿಸಲು ಒಂದು ಕಾರ್ಯಪಡೆಯನ್ನು ಕ್ಷೇತ್ರ ಮಟ್ಟದಲ್ಲಿ ರಚಿಸಬೇಕು (3.15).

8. ಜೀತದಾಳುಗಳನ್ನು ಗುರುತಿಸಿ, ಬಿಡುಗಡೆಗೊಳಿಸಿ, ಅವರ ಪುನರ್ವಸತಿಗಾಗಿ ಕೈಗೊಂಡಿರುವ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳ ಸಾಧನೆಯ ಮೇಲ್ವಿಚಾರಣೆ ಮತ್ತು ಪರಾಮರ್ಶೆ ಮಾಡಲು ರಾಜ್ಯಮಟ್ಟದಲ್ಲಿ ಶ್ರೇಷ್ಠ ಅಧಿಕಾರವನ್ನೊಳಗೊಂಡ ಸಂಚಾಲನಾ ಸಮಿತಿಯೊಂದಿರಬೇಕು (3.20).

9. ಜಾಗೃತಿ ಸಮಿತಿಗಳು, ಜಿಲ್ಲೆಯ ಎಲ್ಲಾ ಮಟ್ಟದ ಪಂಚಾಯಿತಿಗಳ ಸಾಮಾಜಿಕ ನ್ಯಾಯ ಸಮಿತಿಗಳು ಹಾಗೂ ಸ್ವಯಂ ಸೇವಾ ಸಂಸ್ಥೆಗಳನ್ನು ಒಳಗೊಂಡಿರುವಂತೆ ಸಮಗ್ರವಾದ ರೀತಿಯಲ್ಲಿ ಜೀತಪದ್ಧತಿಯ ಬಗ್ಗೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು (3.14, 19, 20, 22, 23. 24, 27, 31).

10. ಜೀತಪದ್ಧತಿಯು ದಟ್ಟವಾಗಿರುವ ಪ್ರದೇಶಗಳನ್ನು ಗುರುತಿಸುವಲ್ಲಿ ಸರ್ಕಾರಿ ಅಧಿಕಾರಿಗಳು ಮತ್ತು ಇತರ ಸ್ವಯಂ ಸೇವಾ ಸಂಸ್ಥೆಗಳು ತೀವ್ರವಾದ ಪರಿಶ್ರಮವನ್ನು ಕೈಗೊಳ್ಳಬೇಕು (3.22)

11. ರಾಜ್ಯ ಸರ್ಕಾರವು ಸೂಕ್ಷ್ಮ ಪ್ರದೇಶಗಳಲ್ಲಿ ಜೀತಪದ್ಧತಿ ಕುರಿತು ಕೌಟುಂಬಿಕ ಸಮೀಕ್ಷೆಗಳನ್ನು ಒಂದು ನಿಗದಿತ ಕಾಲಮಟ್ಟದಲ್ಲಿ ನಡೆಸಬೇಕು (3.16)

- ಮನೆ, ನಿವೇಶನಗಳನ್ನು ಹಂಚಲು, ಫಲಾನುಭವಿಗಳನ್ನು ಗುರುತಿಸುವ ಸಮೀಕ್ಷೆ;
- ವಿವಿಧ ಆರ್ಥಿಕಾಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ನಡೆಸುವ ಸಮೀಕ್ಷೆ;
- ಸಮಗ್ರ ಗ್ರಾಮೀಣಾಭಿವೃದ್ಧಿ ಮತ್ತು ಇತರ ಗ್ರಾಮೀಣಾಭಿವೃದ್ಧಿ ಯೋಜನೆಗಳಡಿ ನಡೆಸುವ ಸ್ಥಳೀಯ ಗ್ರಾಮಯೋಜನೆಗಳ ತಯಾರಿಕೆಗೆ ನಡೆಸುವ ಸಮೀಕ್ಷೆ;
- ಜೀತ ಪದ್ಧತಿ ಮತ್ತು ಬಾಲ ಜೀತಗಾರಿಕೆ ಗಮನಾರ್ಹವಾಗಿರುವ ಸ್ಥಳಗಳಾದ ಬಂಡೆಕೆಲಸ, ಇಟ್ಟಿಗೆ ಕಾರ್ಖಾನೆ, ವಜ್ರ ಕಡಿಯುವಿಕೆ, ಕಾರ್ಪೆಟ್, ನೇಯ್ಗೆ ಕಾರ್ಖಾನೆ ಮುಂತಾದೆಡೆಗಳಲ್ಲಿ ಜೀತದಾಳುಗಳನ್ನು ಗುರುತಿಸುವ ಸಮೀಕ್ಷೆ ನಡೆಸಬೇಕು (3.17).

13. ಸಂಪೂರ್ಣವಾಗಿ ಜೀತ ಪದ್ಧತಿ ನಿರ್ಮೂಲನೆ ಆಗುವವರೆಗೆ ಜೀತದಾಳುಗಳ ಗುರುತಿಸುವಿಕೆಯ ಕಾರ್ಯವು ನಿರಂತರವಾಗಿ ನಡೆಯಬೇಕು (3.24).

14. ಐದು ವರ್ಷಗಳಿಗೊಮ್ಮೆ ರಾಷ್ಟ್ರಾದ್ಯಂತ ಜೀತದಾಳುಗಳ ಜನಗಣತಿಯಾಗಬೇಕು (3.25).

15. ಒಂದು ನಿರ್ದಿಷ್ಟ ಪ್ರದೇಶದಲ್ಲಿ ಇರುವ ಜೀತದಾಳುಗಳ ಬಗ್ಗೆ ಮಾಹಿತಿ ಕೊಡುವ ಸ್ವಯಂಸೇವಾ ಸಂಸ್ಥೆಗಳು, ಕಾರ್ಯಶೀಲ ಸಂಘಟನೆಗಳು ಮತ್ತು ಸಮಾಜ ಮತ್ತು ದಲಿತ ಕಲ್ಯಾಣಕ್ಕಾಗಿ ದುಡಿಯುವ ಸಮಾಜ ಸೇವಕರಿಗೆ ಸೂಕ್ತ ಉತ್ತೇಜನವನ್ನು ಕೊಡಬೇಕು (3.27).

16. ಕಾನೂನಿನಲ್ಲಿರುವ ನಿಬಂಧನೆಗಳನ್ನು ವಿವರಿಸಲು, ಜೀತಪದ್ಧತಿ ವ್ಯಾಖ್ಯಾನದ ಬಗ್ಗೆ ಸ್ಪಷ್ಟತೆ

ಜೀತಪದ್ಧತಿ ಮತ್ತು ಜೀತದಾಳುಗಳನ್ನು ಗುರುತಿಸುವ ತರಬೇತಿ ಕೈಪಿಡಿ

ಪೂರಕ ಓದುವಿಕೆ-XIII B

ಎ.ಕೆ. ಚಕ್ರವರ್ತಿ ಕೇಂದ್ರ ಸಮಿತಿಯ ಶಿಫಾರಸುಗಳು- ಸಾರಾಂಶ ಮತ್ತು ಅದರ ಕುರಿತು ಕರ್ನಾಟಕ ಸರ್ಕಾರದ ಸುತ್ತೋಲೆ

ಮತ್ತು ಸೂಕ್ತ ದೃಷ್ಟಿಕೋನ ಪಡೆಯಲು ಹಾಗೂ ಜೀತಪದ್ಧತಿಯನ್ನು ಗುರುತಿಸಿ ನಿರ್ಮೂಲನೆ ಮಾಡಲು ಅಗತ್ಯವಿರುವ ಕಾರ್ಯವಿಧಾನದ ಬಗ್ಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ರಾಜ್ಯ, ಜಿಲ್ಲಾ, ತಾಲೂಕು ಮತ್ತು ಹಳ್ಳಿ ಮಟ್ಟಗಳಲ್ಲಿ ತರಬೇತಿ ಶಿಬಿರಗಳನ್ನು ನಡೆಸಬೇಕು (3.7).

17. ಜೀತದಾಳುಗಳ ಗುರುತಿಸುವಿಕೆ, ಬಿಡುಗಡೆ ಮತ್ತು ಪುನರ್ವಸತಿ ಕೆಲಸದಲ್ಲಿರುವ ಸಮಸ್ಯೆಗಳ ಬಗ್ಗೆ ಸ್ಪಷ್ಟ ಅರಿವನ್ನು ಮೂಡಿಸಲು ಜೀತಪದ್ಧತಿ ಪ್ರಚಲಿತವಿರುವ ಸೂಕ್ಷ್ಮ ಸ್ಥಳಗಳಲ್ಲಿ ಸಂಬಂಧಪಟ್ಟವರಿಗೆಲ್ಲ ಪ್ರಚಾರ ಶಿಬಿರಗಳನ್ನು ನಡೆಸಬೇಕು (3.18).

18. ಕಾನೂನನ್ನು ಸರಿಯಾದ ರೀತಿಯಲ್ಲಿ ಅನುಷ್ಠಾನಗೊಳಿಸಲು ಜಿಲ್ಲಾ, ತಾಲೂಕು, ಗ್ರಾಮ ಮಟ್ಟದ ಆಡಳಿತಕ್ಕೆ ಸೂಕ್ತ ಜಾಗೃತಿ ನೀಡಬೇಕು. ಜೀತ ಪದ್ಧತಿ ನಿರ್ಮೂಲನೆ ಬಗ್ಗೆ ಅಧಿಕ ಕಾಳಜಿಯಿರುವ ಅಧಿಕಾರಿಗಳನ್ನು ಜೀತಪದ್ಧತಿ ಪ್ರಚಲಿತವಿರುವ ಸೂಕ್ಷ್ಮ ಸ್ಥಳಗಳಿಗೆ ನೇಮಿಸಬೇಕು, ಮತ್ತು ರಾಜ್ಯ ಸರ್ಕಾರವು ಅವರಿಗೆ ಸಂಪೂರ್ಣ ಉತ್ತೇಜನ ಮತ್ತು ಸಹಕಾರವನ್ನು ಕೊಡಬೇಕು (3.21).

19. ಜೀತಪದ್ಧತಿ ಪ್ರಚಲಿತವಿರುವ ಸೂಕ್ಷ್ಮ ಪ್ರದೇಶಗಳಲ್ಲಿ ಗ್ರಾಮೀಣ ಕಾರ್ಮಿಕ ಶಿಬಿರಗಳನ್ನು ನಡೆಸಬೇಕು. ಸಂಘಟನಾ ಸಾಮರ್ಥ್ಯವಿರುವ, ತರಬೇತಿ ಕೌಶಲ್ಯವಿರುವ ಮತ್ತು ಸರಿಯಾದ ದೃಷ್ಟಿಕೋನವಿರುವ ವ್ಯಕ್ತಿಗಳಿಗೆ ಈ ಶಿಬಿರಗಳನ್ನು ನಡೆಸುವ ಜವಾಬ್ದಾರಿಯನ್ನು ನೀಡಬೇಕು. (3.23)

20. ಜೀತದಾಳುಗಳ ಸಮೀಕ್ಷೆ ಮತ್ತು ಗುರುತಿಸುವಿಕೆ ಹಾಗೂ ಪುನರ್ವಸತಿ ಚಟುವಟಿಕೆಗಳಲ್ಲಿ ತೊಡಗಿರುವ ಅಧಿಕಾರಿಗಳಿಗೆ ತರಬೇತಿ ನೀಡಲು ಕೇಂದ್ರ ಮತ್ತು ರಾಜ್ಯ ಮಟ್ಟದಲ್ಲಿ ನಿರಂತರ ತರಬೇತಿ-ಕಮ್ಮಟಗಳನ್ನು ನಡೆಸಬೇಕು, ಜೀತಪದ್ಧತಿ ನಿರ್ಮೂಲನೆಯನ್ನು ವ್ಯಾಪಾಕವಾಗಿ ಪ್ರಚಾರ ಪಡಿಸಲು ವಾರ್ತಾ ಪತ್ರಿಕೆ, ರೇಡಿಯೋ ಮತ್ತು ಇಲೆಕ್ಟ್ರಾನಿಕ್ ಮಾಧ್ಯಮಗಳನ್ನು ಬಳಸಬೇಕು (3.26)

21. ಜೀತದಾಳುಗಳ ಗುರುತಿಸುವಿಕೆಯ ಕಾರ್ಯದ ಜೊತೆಜೊತೆಗೆ ಜೀತದಾಳುಗಳನ್ನು ಇಡುವವರ ವಿರುದ್ಧಕ್ರಮ ಕೈಗೊಳ್ಳಬೇಕು (3.29).

22. ಗುರುತಿಸಿದ ಪ್ರತಿಯೊಬ್ಬ ಜೀತದಾಳುವಿಗೆ ಒಡನೆಯೇ ಪುನರ್ವಸತಿ ಸೌಲಭ್ಯ ಒದಗಿಸಬೇಕು (3.31)

23. ಜಿಲ್ಲೆಯ ದಂಡಾಧಿಕಾರಿಗಳು ಮತ್ತು ಪೊಲೀಸ್ ಅಧಿಕಾರಿಗಳ ಮಾಸಿಕ ಮತ್ತು ಇತರ ನಿಯತಕಾಲಿಕ ಸಭೆಗಳಲ್ಲಿ, ಜೀತ ಸಮಸ್ಯೆಯೂ ಒಂದು ಚರ್ಚಾವಿಷಯವಾಗಿರಬೇಕು. ಅದೇ ರೀತಿ ಜಿಲ್ಲಾ, ತಾಲೂಕು ಮತ್ತು ಗ್ರಾಮದ ಪಂಚಾಯತಿ ಆಡಳಿತದಲ್ಲೂ ಆಗಬೇಕು (3.28).

24. ಜಿಲ್ಲಾ ನ್ಯಾಯಾಂಗದ ಜೊತೆ ಸಮಾಲೋಚಿಸಿ, ಕಾನೂನಡಿಯಲ್ಲಿ ಅಪರಾಧಗಳನ್ನು ವಿಚಾರಿಸುವ ಅಧಿಕಾರವಿರುವ ದಂಡಾಧಿಕಾರಿಯು ಮೊಕದ್ದಮೆಗಳನ್ನು ಶೀಘ್ರವಾಗಿ ವಿಲೇವಾರಿ ಮಾಡುವಂತೆ ಜಿಲ್ಲಾ ಜಾಗೃತಿ ಸಮಿತಿಯು ತಕ್ಕ ಕ್ರಮಗಳನ್ನು ಕೈಗೊಳ್ಳಬೇಕು (3.30).

25. ಪ್ರತಿಯೊಂದು ಜಿಲ್ಲಾ ಜಾಗೃತಿ ಸಮಿತಿಯು ತಮ್ಮ ಅಧಿಕಾರ ವ್ಯಾಪ್ತಿಗೆ ಬರುವ, ವಿಮುಕ್ತಿಗೊಳಿಸಿದ ಜೀತದಾಳುಗಳ ಈ ಕೆಳಗಿನ ದಾಖಲೆಗಳನ್ನು ಇಡಬೇಕು:

1. ವಿಮುಕ್ತಿ ಹೊಂದಿದ ಜೀತದಾಳುವಿನ ಹೆಸರು ಮತ್ತು ವಿಳಾಸಗಳ ದಾಖಲೆ.
2. ವಿಮುಕ್ತಿಗೊಳಿಸಿದ ಜೀತದಾಳುಗಳ ಕೆಲಸ ಮತ್ತು ಆದಾಯದ ದಾಖಲೆ.
3. ವಿಮುಕ್ತಿಗೊಳಿಸಿದ ಜೀತದಾಳುಗಳಿಗೆ ಲಭ್ಯವಾದ ಸೌಲಭ್ಯಗಳ ಕುರಿತು ದಾಖಲೆ (3.14, 3.33).

26. ಜೀತದಾಳುಗಳನ್ನು ಗುರುತಿಸಲು ನಡೆಸುವ ಹೊಸ ಸಮೀಕ್ಷೆ ಬಗ್ಗೆ ಇರುವ ಭಾರತ ಸರ್ಕಾರದ ಮಾರ್ಗದರ್ಶನ ಮತ್ತು ನಿಯಮಾವಳಿಗಳನ್ನು ಸಂಬಂಧಪಟ್ಟವರೆಲ್ಲರೂ ತಪ್ಪದೇ ಪಾಲಿಸಬೇಕು.

ಜೀತಪದ್ಧತಿ ಮತ್ತು ಜೀತದಾಳುಗಳನ್ನು ಗುರುತಿಸುವ ತರಬೇತಿ ಕೈಪಿಡಿ

ಪೂರಕ ಓದುವಿಕೆ- XIII B

ಎ.ಕೆ. ಚಕ್ರವರ್ತಿ ಕೇಂದ್ರ ಸಮಿತಿಯ ಶಿಫಾರಸುಗಳು- ಸಾರಾಂಶ ಮತ್ತು ಅದರ ಕುರಿತು ಕರ್ನಾಟಕ ಸರ್ಕಾರದ ಟಿಪ್ಪಣಿ

ಅಂಥ ಗುರುತಿಸುವಿಕೆಯ ಸಮಯದಲ್ಲಿ ಹಳ್ಳಿಗಳಲ್ಲಿ ಬಡಜನರಿರುವ ಸ್ಥಳಗಳಿಗೆ ಹೆಚ್ಚು ಗಮನ ಕೊಡಬೇಕು. ಮಾಹಿತಿಗಳನ್ನು ಬುದ್ಧಿವಂತಿಕೆ ಮತ್ತು ಚಾತುರ್ಯದಿಂದ ಸಂಗ್ರಹಿಸಬೇಕು (3.32).

27. ಆದಿವಾಸಿ ಪ್ರದೇಶ ಉಪಯೋಜನೆ ಅಭಿವೃದ್ಧಿ ಕಾರ್ಯಕ್ರಮಗಳ ಮಾದರಿ (TRIBAL AREA SUBPLAN DEVELOPMENTAL PROGRAMMESS) ಯಲ್ಲಿ ಜಿಲ್ಲೆಯ ಆಯ್ದ ಕೆಲವೊಂದು ಕ್ಷೇತ್ರಗಳಲ್ಲಿ ಸರ್ಕಾರವು ಜೀತಪದ್ಧತಿ ಪುನರ್ವಸತಿ ಪ್ರದೇಶ ಉಪಯೋಜನೆ ಆರಂಭವಾಗುವಂತೆ ನೋಡಿಕೊಂಡು, ಅವುಗಳಿಗೆ ಪ್ರತ್ಯೇಕ ಅಭಿವೃದ್ಧಿ ನಿಧಿಯನ್ನು ಮೀಸಲಾಗಿಡುವಂತೆ ನೋಡಿಕೊಳ್ಳಬೇಕು (3.34)

28. ಜೀತದಾಳುಗಳ ಗುರುತಿಸುವಿಕೆ, ಬಿಡುಗಡೆ ಮತ್ತು ಪುನರ್ವಸತಿ ಕಾರ್ಯಕ್ರಮವನ್ನು ದೇಶದಲ್ಲಿ ಪ್ರಮುಖ ಯೋಜನೆಯೆಂದು ಪರಿಗಣಿತವಾಗಬೇಕು ಮತ್ತು ಸಂಪೂರ್ಣ ಕಾರ್ಯಕ್ರಮದ ಖರ್ಚು ಕೇಂದ್ರ ಸರ್ಕಾರದಿಂದ ಪೋಷಿತವಾಗಬೇಕು (3.35).


29. ಭಾರತ ಸರ್ಕಾರದ ಸಮಗ್ರ ಗ್ರಾಮೀಣಾಭಿವೃದ್ಧಿ ಮಾದರಿಯಲ್ಲಿ, ಜೀತದಾಳುಗಳನ್ನು ಗುರುತಿಸುವ ಮತ್ತು ಅವರಿಗೆ ಪುನರ್ವಸತಿ ಕಲ್ಪಿಸುವ ಯೋಜನೆಯಲ್ಲೂ ಸ್ಪಷ್ಟವಾದ ಮತ್ತು ವ್ಯವಸ್ಥಿತವಾದ ರಚನೆ ಇರಬೇಕು. ಅದರಲ್ಲಿರುವ ಪ್ರತಿಯೊಬ್ಬ ಅಧಿಕಾರಿಯ ಪಾತ್ರ ಮತ್ತು ಜವಾಬ್ದಾರಿಗಳನ್ನು ಸ್ಪಷ್ಟಗೊಳಿಸಬೇಕು ಮತ್ತು ನಿಯಂತ್ರಿಸಬೇಕು (3.36).

30. ಕನಿಷ್ಠ ವೇತನ ಅಧಿನಿಯಮ, ಅಂತರ್ ರಾಜ್ಯ ವಲಸೆ ಕಾರ್ಮಿಕರ ಅಧಿನಿಯಮ, ಬಾಲಕಾರ್ಮಿಕ (ನಿಷೇಧ ಹಾಗೂ ನಿಯಂತ್ರಣ)ಅಧಿನಿಯಮ ಮತ್ತು ಗುತ್ತಿಗೆ ಕಾರ್ಮಿಕರ ನಿಯಂತ್ರಣ ಅಧಿನಿಯಮ ಇವುಗಳಲ್ಲಿಯ ನಿಬಂಧನೆಗಳನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸಬೇಕು (3.37)

4.9.1996

ಸಂಗ್ರಹಣೆ
ಕಿರಣ ಕಮಲ ಪ್ರಸಾದ


"ಸಾಲದ ಸರಪಳಿ ಬಿಚ್ಚಿ ಜೀತದ ಹೊರೆ ಇಳಿಸಿ....
ಮಾನವೀಯತೆ ಮೆರೆಯಿರಿ"



ಜೀತದಾಳಿನ ಶಾಪಕ್ಕೆ ಮಾಯವಾದೀತು ನಿಮ್ಮ ಸುಖ

ಜೀತಪದ್ಧತಿ ಮತ್ತು ಜೀತದಾಳುಗಳನ್ನು ಗುರುತಿಸುವ ತರಬೇತಿ ಕೈಪಿಡಿ

ಕರ್ನಾಟಕ ಸರ್ಕಾರದ ಸುತ್ತೋಲೆ



ಕರ್ನಾಟಕ ಸರ್ಕಾರ

ಸಂಖ್ಯೆ. ಆರ್.ಡಿ.ಪಿ. ೩೧ ಆರ್.ಬಿ.ಎಲ್. ೯೪

ಸಚಿವಾಲಯ, ಕರ್ನಾಟಕ ಸರ್ಕಾರ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು,
ದಿನಾಂಕ: ೮-೧೨-೧೯೯೪

ಸುತ್ತೋಲೆ

ವಿಷಯ: ಜೀತದಾಳುಗಳ ಬಗ್ಗೆ ಸಮಂಜಸವಾದ ವ್ಯಾಖ್ಯಾನ ಹಾಗೂ ಜೀತದಾಳುಗಳನ್ನು ಗುರುತಿಸುವ ಕಾರ್ಯವಿಧಾನ ಅಥವಾ ಕ್ರಮಗಳನ್ನು ರೂಪಿಸಲು ನೇಮಿಸಿದ ಕೇಂದ್ರ ಸಮಿತಿಯು ಮಂಡಿಸಿದ ಜೀತ ಪದ್ಧತಿ ಬಗೆಗಿನ ವರದಿ - ಕುರಿತು:

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಜೀತದಾಳುಗಳ ವ್ಯಾಖ್ಯಾನ ಮತ್ತು ಜೀತದಾಳುಗಳನ್ನು ಗುರುತಿಸುವ ಕಾರ್ಯ ವಿಧಾನ ಅಥವಾ ಕ್ರಮಗಳ ಕುರಿತು ಭಾರತ ಸರ್ಕಾರ ಕಾರ್ಮಿಕ ಸಚಿವಾಲಯದಿಂದ ಪಡೆದ ಕೇಂದ್ರ ಸಮಿತಿಯ ಶಿಫಾರಸುಗಳ ಸಾರಾಂಶದ ಪ್ರತಿಯನ್ನು ಇದರೊಂದಿಗೆ ಲಗತ್ತಿಸಲಾಗಿದೆ. ಶ್ರೀ.ಎ.ಕೆ. ಚಕ್ರವರ್ತಿ ಸಮಿತಿಯ ಶಿಫಾರಸುಗಳನ್ನು ನವದೆಹಲಿಯಲ್ಲಿ ಚರ್ಚಿಸಲಾಗಿತ್ತು. ಗುಜರಾತ್ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳಾದ ಶ್ರೀ.ಎ.ಕೆ. ಚಕ್ರವರ್ತಿಯವರು ಮೇಲ್ಕಾಣಿಸಿದ ಸಮಿತಿಯ ಅಧ್ಯಕ್ಷರು ಸಂಚಾಲಕರೂ ಆಗಿದ್ದರು.


ರಾಜ್ಯ ಸರ್ಕಾರವು ಕೆಳಕಂಡ ಅಂಶಗಳನ್ನು ಹೊರತುಪಡಿಸಿ ಚಕ್ರವರ್ತಿ ಸಮಿತಿಯ ಶಿಫಾರಸುಗಳನ್ನು ಒಪ್ಪಿಕೊಳ್ಳುತ್ತದೆ. ಒಪ್ಪಿಕೊಳ್ಳದ ಅಂಶಗಳು ಈ ರೀತಿ ಇವೆ.


೧. ೩.೬ ಮತ್ತು ೩.೧೭ ಪರಿಚ್ಛೇದಗಳಲ್ಲಿ ಸಮೀಕ್ಷೆಯೊಂದನ್ನು ಶಿಫಾರಸು ಮಾಡಲಾಗಿದೆ. ಪುನರ್ವಸತಿಗಾಗಿ ಸಾಕಷ್ಟು ಕಾಲಾವಕಾಶ ಒದಗಿಸುವ ದೃಷ್ಟಿಯಿಂದ ಸಮೀಕ್ಷೆಯನ್ನು ಮೂರು ವರ್ಷಗಳಿಗೊಮ್ಮೆ ಮಾಡಬಹುದೆಂದು ಕರ್ನಾಟಕ ಸರ್ಕಾರವು ಸೂಚಿಸುತ್ತದೆ.

೨. ಪರಿಚ್ಛೇದ ೩.೨೧ರಲ್ಲಿ ಜೀತಪದ್ಧತಿಯನ್ನು ನಿರ್ಮೂಲನೆ ಮಾಡುವಲ್ಲಿ ಆಸಕ್ತಿ ಇರುವ ಜಿಲ್ಲಾಧಿಕಾರಿಗಳನ್ನು ಆ ಪದ್ಧತಿ ಅಸ್ಥಿತ್ವದಲ್ಲಿರುವ ಪ್ರದೇಶಗಳಿಗೆ ನೇಮಕ ಮಾಡಬೇಕೆಂದು ಶಿಫಾರಸು ಮಾಡಲಾಗಿದೆ. ರಾಜ್ಯ ಸರ್ಕಾರವು ಸೂಚಿಸುವುದೇನೆಂದರೆ ಇದು ಸಾಧ್ಯವಾಗದಿರಬಹುದು. ಏಕೆಂದರೆ ಜಿಲ್ಲಾಧಿಕಾರಿಯು ಜೀತ ಪದ್ಧತಿಯನ್ನೊಳಗೊಂಡಂತೆ ರಾಜ್ಯ ಸರ್ಕಾರದ ವಿವಿಧ ಚಟುವಟಿಕೆಗಳನ್ನು ನಿರ್ವಹಿಸಬೇಕಾದ ಜವಾಬ್ದಾರಿ ಹೊಂದಿದ್ದಾರೆ. ಅದೇ ರೀತಿ ಕೇಂದ್ರ ಸರ್ಕಾರಕ್ಕೆ ಕೊಟ್ಟ ಸೂಚನೆಯೇನೆಂದರೆ ಜೀತದಾಳುಗಳನ್ನು ಗುರುತಿಸುವ ಸಮೀಕ್ಷೆಯನ್ನು ಅನುಸೂಚಿತ ಜಾತಿ ಮತ್ತು ಅನುಸೂಚಿತ ಜನಾಂಗಗಳಿಗೆ ಸೇರಿದ ವಿದ್ಯಾರ್ಥಿಗಳ ಸಹಕಾರದಿಂದ ಮಾಡಬೇಕು. ವಿದ್ಯಾರ್ಥಿಗಳನ್ನು ಇಂಥ ಕಾರ್ಯಕ್ರಮಗಳಲ್ಲಿ ತೊಡಗಿಸುವುದರಿಂದ ತೊಂದರೆಗಳಿಗೆ ಮತ್ತು ಸಾಮಾಜಿಕ ಘರ್ಷಣೆಗೆ ಸಾಧ್ಯತೆ ಇರುವುದರಿಂದ ಗುರುತಿಸುವ ಕಾರ್ಯದಲ್ಲಿ ವಿದ್ಯಾರ್ಥಿಗಳನ್ನು ತೊಡಗಿಸುವುದು ಸೂಕ್ತವಲ್ಲವೆಂದು ರಾಜ್ಯಸರ್ಕಾರವು ಪರಿಗಣಿಸಿದೆ.

ಮೇಲಿನ ಪರಿಚ್ಛೇದಗಳನ್ನು ಹೊರತುಪಡಿಸಿ ಸಮಿತಿಯ ಇತರ ಎಲ್ಲಾ ಶಿಫಾರಸುಗಳನ್ನು ರಾಜ್ಯ ಸರ್ಕಾರವು ಅನುಮೋದಿಸಿದೆ. ಇವನ್ನು ಅತ್ಯವಶ್ಯಕವಾಗಿ ಅನುಷ್ಠಾನಗೊಳಿಸಬೇಕು.

(ಸಹಿ)
(ಎನ್. ಎ. ಮಾರ್ಗರೇಟ್)
ಪ್ರಭಾರ ಸಹಾಯಕ ಅಭಿವೃದ್ಧಿ ಆಯುಕ್ತರು ಮತ್ತು
ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಇಲಾಖೆ.







ಜೀತ ಬಿಡಿಸಿ....
ಶಾಲೆಗೆ ಕಳಿಸಿ....
....
....
....
ನಿಮ್ಮ ಮಗುವನ್ನು
ಮಾತ್ರವಲ್ಲ
ನೆರೆ ಹೊರೆಯ
ಮಕ್ಕಳನ್ನು ಸಹ

ಜೀತಪದ್ಧತಿ ಮತ್ತು ಜೀತದಾಳುಗಳನ್ನು ಗುರುತಿಸುವ ಮಾರ್ಗದರ್ಶಿ:

ತರಬೇತಿ ಕೈಪಿಡಿ

.....ಜೀತಪದ್ಧತಿಯು ಒಂದು ಕೆಟ್ಟ ಹಾಗೂ ಮಾರಕ ಪದ್ಧತಿಯಾಗಿದೆ. ಅದನ್ನು ನಾಗರಿಕ ಸಮಾಜದ ಮಾನವ ಅಂತಃಕರಣ ಸಹಿಸದು; ಅದು ಪರಾಭಾರೆ ಮಾಡಲಾಗದಂತಹ ಮಾನವ ಹಕ್ಕುಗಳ ನಿರಾಕರಣೆ; ಅದು ಸ್ವಾಭಿಮಾನ, ಸಭ್ಯತೆ, ಸಮಾನತೆ ಮತ್ತು ಸ್ವಾತಂತ್ರ್ಯಗಳ ವಿರೋಧ ರೂಪ; ಹಾಗೂ ಕೆಲಸದ ಸಂದರ್ಭದಲ್ಲಿ ಅದು ನ್ಯಾಯ ಯುತ, ಎಲ್ಲರಿಗೂ ಒಪ್ಪುವ ಹಾಗೂ ನೀತಿ ಸಮ್ಮತ ಅಥವಾ ಸಮಾ ನಾತ್ಮಕ ತತ್ವಗಳ ನಿರಾಕರಣೆ. ಜಾತಿ ಪದ್ಧತಿ ಹಾಗೂ ಅಸಮಾನ ಊಳಿಗಮಾನ್ಯ ಸಾಮಾಜಿಕ ವ್ಯವಸ್ಥೆಯಿಂದ ಭಾಗಶ: ಬೆಂಬಲ ಪಡೆದು ಅದು ಮಾನವನ ಅತಿ ಲೋಭತನ, ಕ್ರೂರತೆ, ಕಬಳಿಕೆಯ ಪ್ರವೃತಿಗಳಿಂದ ಮತ್ತು ಪ್ರತಿಯೊಬ್ಬರಲ್ಲಿಯೂ ಅಂತರ್ಗತವಾಗಿರುವ ಇನ್ನೊಬ್ಬನ ಮೇಲೆ ಅಧಿಕಾರ ಚಲಾಯಿಸುವ, ಅವನ ಪೂರ್ತಿ ಶೋಷಣೆ ಮಾಡುವ ಮತ್ತು ಅವನಿಗೆ ಹಾನಿ ಮಾಡಿ ತಾನೇ ಹಸನಾಗಿ ಬೆಳೆಯಬೇಕೆಂಬ ಮೃಗೀಯ ಪ್ರವೃತ್ತಿಗಳಿಂದ ಅದು ಪೋಷಿಸಲ್ಪಡುತ್ತದೆ ಹಾಗೂ ಬೆಂಬಲಿಸಲ್ಪಡುತ್ತದೆ....

...ಇಂತಹ ವಿಷಾದಕರ ಮತ್ತು ಕಳವಳಕಾರಿ ಪರಿಸ್ಥಿತಿಯಲ್ಲಿ ತರಬೇತಿಯ ಉದ್ದೇಶಗಳಾದರೂ ಏನಿರಬಹುದು? ಅಸಮಾನ ಮತ್ತು ಶೋಷಿತ ವ್ಯವಸ್ಥೆಯ ಬಲಿಪಶುಗಳಿಗೂ ಸ್ಥಳೀಯ ಅಧಿಕಾರಿ ವರ್ಗದವರಿಗೂ ತರಬೇತಿಯು ಪ್ರಸ್ತುತವಾಗಿದೆ....

...ಜೀತ ಪದ್ಧತಿ ನಿರ್ಮೂಲನೆಗೋಸ್ಕರ ತರಬೇತಿಯ ಕೈಪಿಡಿಯು ಖಂಡಿತವಾಗಿಯೂ ಉಪಯುಕ್ತವಾಗಿದೆ. ಇತರ ತಳಮಟ್ಟದ ಸಂಘಟನೆಗಳು ಕಾರ್ಯತತ್ಪರರಾಗುವಂತೆ ಮತ್ತು ಬೇರೆ ಬೇರೆ ಮಟ್ಟದ ಅಧಿಕಾರಿಗಳಿಗೆ ಹಾಗೂ ಜೀತದಾಳುಗಳಿಗೆ ತರಬೇತಿ ನೀಡಲು ಕೈಪಿಡಿಯನ್ನು ಬಳಸುವಂತೆ ಉತ್ತೇಜಿಸುವುದು ಸೂಕ್ತ.....

ಡಾ. ಲಕ್ಷ್ಮೀಧರ್ ಮಿಶ್ರಾ
(ಮುನ್ನುಡಿಯಿಂದ)

ISBN 978-81-906736-2-4

ಜನ ಜಾಗೃತಿ ಪ್ರಕಾಶನ-ಬೆಂಗಳೂರು ಬೆಲೆ: ರೂ. 100/-